# ಗೃಹ ವೈದ್ಯಕವು

ನರಸಿಂಹಾಚಾರ್ಯ ಪುಣೇಕರ (ಕಾವ್ಯಾನಂದ)

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

ಪುನರ್ಮುದ್ರಣ ಯೋಜನೆ : ಪುಷ್ಪ - ೯

# ಗೃಹವೈದ್ಯಕವು

ನರಸಿಂಹಾಚಾರ್ಯ ಪುಣೇಕರ (ಕಾವ್ಯಾನಂದ)

ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

ಗೃಹವೈದ್ಯಕವು :
ನರಸಿಂಹಾಚಾರ್ಯ ಪುಣೇಕರ (ಕಾವ್ಯಾನಂದ)
ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

●

ಆರ್ಥಿಕ ನೆರವು : ಕರ್ನಾಟಕ ರಾಜ್ಯ ಸರಕಾರ

●

GRUHAVAIDYAKAVU :
A book on Home Medicines in Kannada by
Narasimhacharya Punekar (Kavyananda)
Published in 1985 by
Siddhaling Pattanshetti
Secretary,
Karnatak Vidyavardhak Sangha, Dharwad - 580 001
© Karnatak Vidyavardhak Sangha, Dharwad
Pages : 82 Copies : 5000
Printed at
Lalita Mudranalaya, Market, Dharwad - 580 001

# ಮೊದಲ ಮಾತು

ಕ್ರಿ. ಶ. ೧೮೯೦ ರಲ್ಲಿ ಸ್ಥಾಪಿತಗೊಂಡ ಕರ್ನಾಟಕ ವಿದ್ಯಾವರ್ಧಕ ಸಂಘವು ಕರ್ನಾಟಕದ ಅತ್ಯಂತ ಪ್ರಾಚೀನವಾದ, ಸಾಹಿತ್ಯಕ, ಮತ್ತು ಸಾಂಸ್ಕೃತಿಕ ಜೀವನದಲ್ಲಿ ಕನ್ನಡದ ಜನನಾಡಿಯನ್ನು ಮಿಡಿದ ತುಂಬ ಮಹತ್ವದ ಸಂಸ್ಥೆಯಾಗಿದೆ. ಕರ್ನಾಟಕದ ಅನೇಕ ಬರೆಹಗಾರರು ಕವಿಗಳು ಸಾಮಾಜಿಕ ಕಾರ್ಯಕರ್ತರು ಈ ಸಂಸ್ಥೆಯಿಂದ ಸ್ಫೂರ್ತಿ ಪಡೆದು, ಹೆಸರು ಪಡೆದು ನಾಡಿನ ತುಂಬ ತಮ್ಮ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಕೊಂಡಿದ್ದಾರೆ.

ತನ್ನ ಹುಟ್ಟಿನಾರಭ್ಯದಿಂದ ಕರ್ನಾಟಕ ವಿದ್ಯಾವರ್ಧಕ ಸಂಘವು ಕನ್ನಡ ಭಾಷೆ ಹಾಗೂ ಸಾಹಿತ್ಯದ ಬೆಳವಣಿಗೆಗಾಗಿ ಅವಿರತವಾಗಿ ಶ್ರಮಿಸುತ್ತ ಬಂದಿದೆ. ಹಲವಾರು ಬಗೆಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರೊಂದಿಗೆ ಧಾರವಾಡವನ್ನು ಕೇಂದ್ರ ವನ್ನಾಗಿ ಇಟ್ಟುಕೊಂಡು ಸಮಸ್ತ ಕರ್ನಾಟಕದ ಲೇಖಕರನ್ನು, ವಿಚಾರವಂತರನ್ನು ಒಂದುಗೂಡಿಸಿ ಬೆಳಕಿಗೆ ತರುವ ಕಾರ್ಯವನ್ನು ಸಂಘವು ಮೊದಲಿನಿಂದ ನಿಯಮಿತವಾಗಿ ಮಾಡುತ್ತ ಬಂದಿದೆ.

ಕನ್ನಡ ಬರೆಹಗಾರರ ಬಳಗವನ್ನು ಕಟ್ಟಿ ಅವರಿಂದ ವಿವಿಧ ವಿಷಯಗಳನ್ನು ಕುರಿತು ಗ್ರಂಥಗಳನ್ನು ಬರೆಸಿ ಅಥವಾ ಸ್ಪರ್ಧೆಗಳನ್ನು ಏರ್ಪಡಿಸಿ ಗ್ರಂಥರಚನೆಗೆ ಪ್ರೋತ್ಸಾಹ ನೀಡಿ ತನ್ಮೂಲಕ ಮೂಡಿಬಂದ ಕೃತಿಗಳನ್ನು ತುಂಬ ಪರಿಶ್ರಮದಿಂದ ಪ್ರಕಟಿಸಿ ಅವುಗಳನ್ನು ನಾಡಿನ ತುಂಬ ಹರಡಿದ್ದ ಕನ್ನಡಾಭಿಮಾನಿಗಳಿಗೆ ತಲುಪಿಸುವ ಮಹತ್ವದ ಚಾರಿತ್ರಿಕ ಹೊಣೆಗಾರಿಕೆಯನ್ನು ಸಹ ಸಂಘವು ನಿರ್ವಹಿಸಿಕೊಂಡು ಬಂದಿದೆ.

ಈ ನಿಟ್ಟಿನಲ್ಲಿ ಸಂಘವು ಸಾಹಿತ್ಯಿಕ ಜಗತ್ತಿನಲ್ಲಿ ಬಹುಕಾಲ ಉಳಿಯುವಂಥ ನೂರಾರು ಪುಸ್ತಕಗಳನ್ನು ಪ್ರಕಟಿಸಿದ್ದು ಅವು ಸಂಘದ ಚರಿತ್ರೆಯಲ್ಲಿ ಉಳಿಯುವಂಥ ಕೃತಿಗಳು. ಈಚೆಗೆ ಕೆಲವು ವರ್ಷಗಳಿಂದ ಸಂಘದ ಪ್ರಕಾಶನ ವಿಭಾಗವು ನಾಡಿನಲ್ಲಿ ಬೆಳೆದು ಬಂದ ಪ್ರಕಾಶನದ ಪ್ರಸಾರದೊಂದಿಗೆ ಸ್ಪರ್ಧಾತ್ಮಕವಾಗಿ ಹೊಂದಿಕೊಂಡು ಹೋಗಲಾಗದೆ ಪುಸ್ತಕ ಪ್ರಕಟಣೆಯ ತನ್ನ ಕಾರ್ಯವನ್ನು ಸ್ಥಗಿತಗೊಳಿಸಿತು.

ಈಗ ಅನತಿ ಕಾಲದಲ್ಲಿಯೇ ತನ್ನ ಆಯುಷ್ಯದ ನೂರನೆಯ ವರ್ಧಂತಿ ಉತ್ಸವ ವನ್ನು ಸಂಘವು ಆಚರಿಸಲಿರುವ ಸಂದರ್ಭದಲ್ಲಿ ಪೂರ್ವಭಾವಿಯಾಗಿ ತನ್ನ ಪ್ರಾಚೀನ ಗೌರವವನ್ನು ಮೆರೆದ ಕೆಲವಾರು ಕೃತಿಗಳನ್ನು ಆಯ್ದುಕೊಂಡು ಅವುಗಳ ಮರು ಮುದ್ರಣದ ಯೋಜನೆಯನ್ನು ಹಾಕಿಕೊಂಡಿತು. ಹಿಂದೆ ಸಂಘವು ಪ್ರಕಟಿಸಿದ ಅನೇಕ ಪುಸ್ತಕಗಳು ಇಂದು ಕಾಲಗರ್ಭದಲ್ಲಿ ಸೇರಿಹೋಗಿ ಅವುಗಳ ಪ್ರತಿಗಳು, ಕೆಲವು ಕೃತಿ

ಗಳ ಹೆಸರುಗಳು ಸಹ ಗೊತ್ತಿಲ್ಲದಂತೆ ಆಗಿಬಿಟ್ಟಿವೆ. ಸಂಘದ ಇಡೀ ಚರಿತ್ರೆಯನ್ನು ಒಟ್ಟುಗೂಡಿಸಿ ಮಹತ್ವದ ಸಂಶೋಧನ ಗ್ರಂಥವೊಂದನ್ನು ಜವಾಬ್ದಾರಿಯುತ ವಿದ್ವಾಂಸರೊಬ್ಬರಿಂದ ಬರೆಸಬೇಕೆಂಬ ವಿಚಾರ ಸಹ ಸಂಸ್ಥೆಗಿದೆ. ಅದಕ್ಕೆ ಅನುಕೂಲಕರವಾಗಿ ಸಹಾಯಕವಾಗುವಂಥ ಕಾರ್ಯವೆಂದು ಸದ್ಯ ಉಪಲಬ್ಧವಿದ್ದ ಕೃತಿಗಳಲ್ಲಿ ಹದಿನೈದು ಪುಸ್ತಕಗಳನ್ನು ಆಯ್ದು ಅವುಗಳ ಮರುಮುದ್ರಣದ ಯೋಜನೆಯೊಂದನ್ನು ಹಮ್ಮಿಕೊಂಡು ಅದರ ವಿವರವನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ೧೯೮೪ ರ ಪೂರ್ವಾರ್ಧದಲ್ಲಿ ಸಲ್ಲಿಸಲಾಯಿತು. ಆಗ ಇಲಾಖೆಯ ನಿರ್ದೇಶಕರಾಗಿದ್ದ ಶ್ರೀ ನ. ನಾ. ಕಠಾವಿ ಅವರು ಕರ್ನಾಟಕ ವಿದ್ಯಾವರ್ಧಕ ಸಂಘದ ಬಗ್ಗೆ ತಾವು ಇಟ್ಟುಕೊಂಡಿದ್ದ ಅಭಿಮಾನವನ್ನು ಹೃತ್ಪೂರ್ವಕವಾಗಿ ನೆನೆದು ಸಂಘವು ಹಮ್ಮಿಕೊಂಡ ಈ ಯೋಜನೆಯನ್ನು ಯಶಸ್ವಿಗೊಳಿಸುವಲ್ಲಿ ಎಲ್ಲ ರೀತಿಯ ನೆರವು ನೀಡುವುದಾಗಿ ಆಶ್ವಾಸನೆ ಕೊಟ್ಟರು. ಅದರಂತೆ ಯೋಜನೆಯನ್ನು ಒಪ್ಪಿ ಸರಕಾರವು ಹದಿನೈದು ಪುಸ್ತಕಗಳ ಪ್ರಕಾಶನಕ್ಕಾಗಿ ಎರಡು ಲಕ್ಷ ರೂಪಾಯಿಗಳನ್ನು ಅನುದಾನವಾಗಿ ಕೊಡುವಂತೆ ವ್ಯವಸ್ಥೆ ಮಾಡಿದ ಮಾನ್ಯ ಶ್ರೀ ಕಠಾವಿ ಅವರು ಸಂಘವು ಆ ಅನುದಾನವನ್ನು ಸ್ವೀಕರಿಸುವ ಹೊತ್ತಿಗೆ ಭೌತಿಕವಾಗಿ ಇಲ್ಲವಾದದ್ದು ಸಂಘಕ್ಕೆ ಬಹಳ ದೊಡ್ಡ ನೋವು. ಹದಿನೈದು ಕೃತಿಗಳ ಪ್ರಕಾಶನದ ಈ ಸಂದರ್ಭದಲ್ಲಿ ಸಂಘವು ಅತ್ಯಂತ ಕೃತಜ್ಞತೆಯಿಂದ ಶ್ರೀ ಕಠಾವಿ ಅವರನ್ನು ಸ್ಮರಿಸುತ್ತದೆ.

ಸಂಘವು ಮರುಮುದ್ರಣದ ಪ್ರಕಾಶನ ಯೋಜನೆಯ ಮೊದಲ ಹಂತವಾಗಿ ಆಯ್ದುಕೊಂಡ ಹದಿನೈದು ಕೃತಿಗಳು ಇವು :

೧) ಶೌರ್ಯಸಾಗರ
೨) ಕನ್ನಡಿಗರ ಜನ್ಮಸಾರ್ಥಕತೆ
೩) ನರಕಾಸುರ ವಿಜಯವ್ಯಾಯೋಗಂ
೪) ಕರ್ನಾಟಕ ಕಥಾಸರಿತ್ಸಾಗರ
೫) ಮೋಹಿನೀ ಅಥವಾ ನಿಂದಕರ ನಡವಳಿ
೬) ಕನ್ನಡ ಮಾತು ತಲೆಯೆತ್ತುವ ಬಗೆ
೭) ಕಾಲಿದಾಸ ಚರಿತ್ರ
೮) ಕರ್ಣಾಟಕ ಯಯಾತಿನಾಟಕಂ
೯) ಗೃಹವೈದ್ಯಕವು
೧೦) ಭಾರತೀಯ ವಿದುಷಿಯರು
೧೧) ಶ್ರೇಯಃಸಾಧನ
೧೨) ಪಂಡಿತರಾಜ ಜಗನ್ನಾಥ
೧೩) ಇಸೋಪನ ಚರಿತ್ರೆ

೧೪) ಶ್ರೀ ವಿದ್ಯಾರಣ್ಯ ಸ್ವಾಮಿಗಳು
೧೫) ನರಗುಂದದ ಬಂಡಾಯ

ಕ್ರಮವಾಗಿ ಪ್ರಕಟವಾಗುತ್ತಿರುವ ಈ ಕೃತಿಗಳು ಸಹ ವಿಷಯ ವೈವಿಧ್ಯ, ಆ ಕಾಲದ ಭಾಷಾ ಸೌಂದರ್ಯ, ವ್ಯಾಕರಣ ಹಾಗೂ ಭಾಷಾಶಾಸ್ತ್ರದ ದೃಷ್ಟಿಕೋನ ಹಾಗೂ ಬೆಳೆಯಬೇಕಾಗಿದ್ದ ಒಂದು ಭಾಷೆಯ ನಿರಂತರ ಪರಿಶ್ರಮದ ವಿಕಾಸಶೀಲ ಘಟ್ಟ ಮುಂತಾದ ದೃಷ್ಟಿಯಿಂದ ಪ್ರಮುಖ ಆಯಾಮಗಳನ್ನು ಹೊಂದಿರುವಂಥವು. ಈ ಕೃತಿಗಳನ್ನು ಆಗ ಕರ್ನಾಟಕ ವಿದ್ಯಾವರ್ಧಕ ಸಂಘಕ್ಕಾಗಿ ರಚಿಸಿಕೊಟ್ಟ ಆಯಾ ಲೇಖಕರು ತಮ್ಮ ಕೃತಿಗಳ ಸ್ವಾಮ್ಯವನ್ನು ಸಂಘಕ್ಕೆ ನೀಡಿದ್ದು ಈಗ ಈ ಕೃತಿಗಳ ಏಕಸ್ವಾಮ್ಯ ಹೊಂದಿದ ಸಂಘವು ಆ ಎಲ್ಲ ಲೇಖಕರನ್ನು ಕೃತಜ್ಞತೆಯಿಂದ ಸ್ಮರಿಸುತ್ತದೆ.

ಈ ಕೃತಿಗಳಲ್ಲಿ ಯಾವುದೇ ಬದಲಾವಣೆ ಅಥವಾ ಹೊಸ ಸೇರ್ಪಡೆ ಇತ್ಯಾದಿ ಮಾಡದೆ ಅವು ಇದ್ದ ಮೂಲ ಸ್ಥಿತಿಯಲ್ಲಿಯೇ ಮರುಮುದ್ರಿಸಲಾಗಿದೆ. ಐತಿಹಾಸಿಕ ದೃಷ್ಟಿಯಿಂದ ಈ ಕೃತಿಗಳನ್ನು ಅಭ್ಯಸಿಸುವವರಿಗೆ ಯಾವ ದೃಷ್ಟಿಯಿಂದಲೂ ವ್ಯತ್ಯಯ ಬರದ ಹಾಗೆ ಇವುಗಳ ಮೂಲ ಸ್ವರೂಪವನ್ನು ಉಳಿಸಿಕೊಳ್ಳಲಾಗಿದೆ. ಈಗ ಬೇರೆ ಎಲ್ಲಿಯೂ ಉಪಲಬ್ಧವಿರದ ಈ ವಿರಳ ಕೃತಿಗಳನ್ನು ಹೀಗೆ ಅವು ಇದ್ದ ಸ್ವರೂಪದಲ್ಲಿಯೇ ಉಪಲಬ್ಧಗೊಳಿಸಿ ಅವುಗಳ ಆಯುಷ್ಯ ಹಾಗೂ ಅಸ್ತಿತ್ವಗಳನ್ನು ಇನ್ನಷ್ಟು ಸುಭದ್ರಗೊಳಿಸುವ ನಿಟ್ಟಿನಲ್ಲಿ ಈ ಮರುಮುದ್ರಣಗಳು ಜನತೆಗೆ ಪ್ರಯೋಜನಕಾರಿಯಾದರೆ ಸಂಘದ ಶ್ರಮ ಸಾರ್ಥಕವಾದಂತೆ.

ಈ ಕೃತಿಗಳನ್ನು ಪ್ರಕಟಿಸಲು ಆರ್ಥಿಕ ನೆರವು ನೀಡಿದ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನಾವು ವಿಶೇಷವಾಗಿ ಕೃತಜ್ಞರಾಗಿದ್ದೇವೆ. ಈ ಹದಿನೈದು ಕೃತಿಗಳಲ್ಲದೆ ಕರ್ನಾಟಕ ವಿದ್ಯಾವರ್ಧಕ ಸಂಘದ ಇನ್ನಿತರ ಎಲ್ಲ ಕೃತಿಗಳನ್ನು ಹೀಗೆ ಮರುಮುದ್ರಣ ಮಾಡಿ ನಾಡಿನ ತುಂಬ ಅವು ವ್ಯಾಪಿಸುವಂತೆ ಮಾಡುವ ಉದ್ದೇಶ ನಮಗಿರುವುದರಿಂದ ಇನ್ನು ಮುಂದೆಯೂ ಕರ್ನಾಟಕ ಸರಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ನಮ್ಮ ಈ ಬೃಹತ್ ಯೋಜನೆ ಯಶಸ್ವಿಯಾಗಿ ಮುಂದುವರಿಯುವಂತೆ ನಮಗೆ ಆರ್ಥಿಕ ನೆರವನ್ನು ನೀಡಿ ಇಂಥ ಒಂದು ಐತಿಹಾಸಿಕ ಉಪಕ್ರಮದ ಮೂಲಕ ಪ್ರಕಾಶಿತಗೊಳ್ಳುವ ಕೃತಿಗಳ ಪುನರುಜ್ಜೀವನಕ್ಕೆ ಕಾರಣವಾಗಿ ನಮ್ಮ ಬೆನ್ನು ತಟ್ಟಲಿ ಎಂದು ಆಶಿಸುತ್ತೇವೆ.

ಪ್ರಸ್ತುತ ಕೃತಿ ನರಸಿಂಹಾಚಾರ್ಯ ಪುಣೇಕರ 'ಕಾವ್ಯಾನಂದ'ರು ರಚಿಸಿದ "ಗೃಹವೈದ್ಯಕವು" ತುಂಬ ಉಪಯುಕ್ತ ಗ್ರಂಥ. ಕನ್ನಡದಲ್ಲಿ ಗೃಹೋಪಯೋಗಿ ನಿತ್ಯಪ್ರಯೋಜಕವಾದ ಇಂಥ ಗ್ರಂಥಗಳು ಈ ಕಾಲದಲ್ಲಿಯೂ ವಿರಳ. ಕರ್ನಾಟಕ ವಿದ್ಯಾವರ್ಧಕ ಸಂಘವು ಮೊದಲು ವಾಗ್ಭೂಷಣದಲ್ಲಿ, ನಂತರ ಪುಸ್ತಕ ರೂಪದಲ್ಲಿ

೧೯೧೩ ರಲ್ಲಿ ಪ್ರಕಟಿಸಿದ ಈ ಗ್ರಂಥದಲ್ಲಿ ಸಂಸ್ಕೃತದ ಶಾರ್ಙ್ಗಧರಾಚಾರ್ಯರ ಕೃತಿ, ನಿಘಂಟು ರತ್ನಾಕರ, ಯೋಗರತ್ನಾಕರ, ಭೈಷಜ್ಯ ರತ್ನಾವಲೀ, ಚಕ್ರದತ್ತ ಕೃತಿ, ಲೋಲಿಂಬರಾಜ ಮುಂತಾದ ವೈದ್ಯಕ ಕ್ಷೇತ್ರದ ಪ್ರಸಿದ್ಧ ಕೃತಿಗಳ ಅಧ್ಯಯನದಿಂದ ಹಾಗೂ ತಮ್ಮ ದಿನನಿತ್ಯದ ಪ್ರಾಯೋಗಿಕ ಅನುಭವದಿಂದ ಉಂಟಾದ ಜ್ಞಾನವನ್ನು ಬಳಸಿಕೊಂಡು ನರಸಿಂಹಾಚಾರ್ಯರು ಒಂದು ಅತ್ಯುಪಯೋಗಿ ಸರ್ವಜನಹಿತಕಾರಿ ಐತಿಹಾಸಿಕ ಗ್ರಂಥವನ್ನೇ ರಚಿಸಿದ್ದಾರೆ. ಇದರಲ್ಲಿ ವಿವಿಧ ಔಷಧಗಳ ಪರಿಚಯ, ಅವುಗಳನ್ನು ಸಂಗ್ರಹಿಸಿಡುವ ವಿಧಾನ, ಅವನ್ನು ಸಿದ್ಧಪಡಿಸುವ ರೀತಿಗಳು, ವಿವಿಧ ರೋಗ ಪರೀಕ್ಷೆ, ವೈದ್ಯಗುಣ, ಔಷಧ ಪ್ರಮಾಣ, ರೋಗಾನುಸಾರ ಔಷಧಿ ಪ್ರಯೋಗ, ಅವುಗಳ ಪರಿಣಾಮ— ಫಲಿತಾಂಶಗಳು ಇತ್ಯಾದಿ ಕುರಿತು ಅತ್ಯಂತ ಆಪ್ತವಾದ ಉತ್ತರ ಕರ್ನಾಟಕದ ಅಂದಿನ ಅಚ್ಚಗನ್ನಡದಲ್ಲಿ ನಿರೂಪಿಸಿದ್ದಾರೆ. ಈಗಲೂ ಪ್ರಯೋಜನ ಕಾರಿಯಾಗಿರುವ ಈ ಗ್ರಂಥವನ್ನು ಪ್ರಕಟಿಸಲು ನಮಗೆ ಅಭಿಮಾನವೆನಿಸುತ್ತದೆ. ೧೯೧೩ ರಲ್ಲಿ ಮೊದಲು ಪ್ರಕಟವಾದಾಗ ಈ ಕೃತಿಯ ಬೆಲೆ ಕೇವಲ ಎಂಟು ಆಣೆ ಇತ್ತು.

ಔಷಧ ತಯಾರಿಕೆಯಲ್ಲಿ ಆ ಕಾಲದಲ್ಲಿ ಪ್ರಚಲಿತವಿದ್ದ ತೂಕವಿಧಾನದ ತೊಲಿ, ಗುಂಜಿ, ಮಾಶಿ ಮುಂತಾದವುಗಳ ವಿವರಗಳನ್ನು ಲೇಖಕರು ತಮ್ಮ ಪುಸ್ತಕದ ಆರಂಭದ ಭಾಗದಲ್ಲಿಯೇ ಕೊಟ್ಟಿದ್ದಾರೆ. ಈಗಿನ ನಯೆಪೈಸೆಗಳಿಲ್ಲದ ಆ ಕಾಲದಲ್ಲಿ ಒಂದು ರೂಪಾಯಿಗೆ ಹದಿನಾರು ಆಣೆಗಳಾಗುತ್ತಿದ್ದವು. ನಾಲ್ಕು ಆಣೆಗಳಿಗೆ ಪಾವಲಿ, ಎರಡು ಆಣೆಗಳಿಗೆ ಚವಲಿ ಎಂದು ಸಹ ಅನ್ನುತ್ತಿದ್ದರು. ಒಂದು ಆಣೆಯಲ್ಲಿ ನಾಲ್ಕು ದುಡ್ಡು ಅಥವಾ ಬಿಲ್ಲಿಗಳಾಗುತ್ತಿದ್ದವು. ತೂಕದಲ್ಲಿ ಒಮ್ಮೊಮ್ಮೆ ಇಂಥ ಪದಗಳ ಬಳಕೆಯಿದೆ. ಅದನ್ನು ಈಗಿನ ಓದುಗರು ಗಮನಿಸಿದರೆ ಅನುಕೂಲ.

ಕರ್ನಾಟಕದ ಜನತೆ, ಸಾಹಿತ್ಯಾಸಕ್ತ ಸ್ನೇಹಿತರು, ಗ್ರಂಥಾಲಯಗಳ ಅಧಿಕಾರಿಗಳು ಪ್ರಾಚೀನ ಕೃತಿ ಸಂಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಈ ಕೃತಿಗಳ ಪ್ರತಿಗಳನ್ನು ಕೊಂಡು ಆರ್ಥಿಕವಾಗಿ ಸಹಾಯ ಮಾಡಿದಾಗ ಇನ್ನುಳಿದ ಕೃತಿಗಳನ್ನು ಬೇಗನೆ ಬೆಳಕಿಗೆ ತರುವ ನಮ್ಮ ಯೋಜನೆ ಬಹು ಬೇಗನೆ ಕಾರ್ಯಗತಗೊಳ್ಳುವಲ್ಲಿ ಸಂದೇಹವಿಲ್ಲ.

ಈ ಕೃತಿಯ ಪ್ರಕಟಣೆಗೆ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷವಾಗಿ ಸಹಾಯ ಸಲ್ಲಿಸಿದ ಎಲ್ಲ ಆತ್ಮೀಯರಿಗೆ ಹಾಗೂ ಲಲಿತ ಮುದ್ರಣಾಲಯದ ಸಿಬ್ಬಂದಿಗೆ ಕೃತಜ್ಞತೆಗಳು.

೧–೮–೧೯೮೫ **ಸಿದ್ಧಲಿಂಗ ಪಟ್ಟಣಶೆಟ್ಟಿ** **ಪಾಟೀಲ ಪುಟ್ಟಪ್ಪ**
ಧಾರವಾಡ ಪ್ರಧಾನ ಕಾರ್ಯದರ್ಶಿ ಅಧ್ಯಕ್ಷರು

# ಗೃಹವೈದ್ಯಕವು

ಶ್ರೀಧನ್ವಂತರಿಹರ್ಯಾ
ರಾಧಕ ಚರಕನಿಗೆ ಸುಶ್ರುತಗೆ ವಾಗ್ಭಟಗೆ ||
ಮಾಧವ ಶಾರ್ಙ್ಗಧರಾದಿಕ
ಸಾಧಕರಿಗೆ ನಮನಮಾಧುನಿಕವೈದ್ಯರಿಗೂ || ೧ ||

# ಮೊದಲು ತಿಳಿದುಕೊಳ್ಳುವ ವಿಷಯಗಳು

## ಔಷಧಿಗಳು

ನಮ್ಮ ಪ್ರಾಚೀನ ಆರ್ಯವೈದ್ಯರು ಉದ್ಭಿಜ್ಜ, ಖನಿಜ, ಪ್ರಾಣಿಜ ಎಂದು ಮೂರು ಬಗೆಯ ಔಷಧಿಗಳನ್ನು ತಮ್ಮ ಗ್ರಂಥಗಳಲ್ಲಿ ಮುಖ್ಯವಾಗಿ ವರ್ಣಿಸಿದ್ದಾರೆ. ಉದ್ಭಿಜ್ಜಗಳೆಂದರೆ ನೆಲವನೊಡೆದು ಹುಟ್ಟುವ ಗಿಡಮೂಲಿಕೆ ಮುಂತಾದವುಗಳು; ಖನಿಜಗಳೆಂದರೆ- ಖಣಿಗಳಿಂದ ಹುಟ್ಟುವ ಬಂಗಾರ, ಬೆಳ್ಳಿ, ಕಬ್ಬಿಣ ಮೊದಲಾದವುಗಳು; ಪ್ರಾಣಿಜಗಳೆಂದರೆ- ಮನುಷ್ಯ ದನಕರು ಮುಂತಾದ ಪ್ರಾಣಿಗಳಿಂದ ಹುಟ್ಟುವ ಕೂದಲು, ಉಗುರು, ಮೂತ್ರ, ಗೋರೋಚನ, ಕಸ್ತೂರಿ ಮೊದಲಾದವುಗಳು. ಖನಿಜೌಷಧಿಗಳನ್ನು ಸಿದ್ಧಮಾಡುವದು ಎಲ್ಲರಿಗೂ ಸಾಧ್ಯವಿಲ್ಲ. ಅದಕ್ಕೆ ಗುರುಪರಂಪರಾನುಭವವೂ ಜ್ಞಾನವೂ ಇರುವದು ಯೋಗ್ಯವು. ಪುಸ್ತಕಗಳನ್ನೋದಿ ಮಾಡಿದ ರಸಾಯನೌಷಧಿಗಳಿಂದ ಉಪಾಯಕ್ಕಿಂತ ಅಪಾಯವಾಗುವ ಸಂಭವವೇ ಬಹಳ. ರಸಾಯನೌಷಧಿಗಳೊಳಗೇ ವಿಶ್ವಾಸವಿಡ್ಡ ಕೆಲವು ವೈದ್ಯರು ತಮ್ಮ ವ್ಯವಸಾಯವು ಮಾತ್ರ ರಸವೈದ್ಯಕವು (ರಸವತ್ತಾದ್ದು) ಮಿಕ್ಕವರದು ಕಸವೈದ್ಯಕ (ಕಸಗಂಟೆಗಳಿಂದುಂಟಾದ್ದು) ಎಂದು ಹೀಯಾಳಿಸುವದನ್ನು ನಾವು ಕೇಳಿಬಲ್ಲೆವು. ಇದು ಕೇವಲ ಏಕಪಕ್ಷೀಯವಾದ ಅಭಿಮಾನದ ಮಾತು. ಈ ವನೌಷಧಿಗಳಿಂದಲೂ ಪ್ರಾಣಿಔಷಧಿಗಳಿಂದಲೂ ಗುಣವಾದೀತು, ಹೊರತು ಅಪಾಯವಾಗುವ ಸಂಭವವು ತೀರ ಕಡಿಮೆ; ಆದದರಿಂದ ಮೊದಲು ಉದ್ಭಿಔಷಧಿಗಳ ವಿಷಯವಾಗಿಯೇ ತುಸು ಹೆಚ್ಚು ಬರಿಯುವದು ಯೋಗ್ಯವಾಗಿದೆ.

ನವಾನ್ಯೇವ ಹಿ ಯೋಜ್ಯಾನಿ ದ್ರವ್ಯಾಣ್ಯಖಿಲಕರ್ಮಸು ||
ವಿನಾ ವಿಡಂಗಕೃಷ್ಣಾಭ್ಯಾಂ ಗುಡಧಾನ್ಯಾಜ್ಯಮಾಕ್ಷಿಕೈಃ || (ಶಾರ್ಙ್ಗಧರ)

ಎಲ್ಲ ವನೌಷಧಿಗಳು ಹೊಸವಿರಬೇಕು. ಕಿತ್ತಿ ಒಂದು ವರುಷವಾಯಿತೆಂದರೆ ಅವು ನಿಸ್ಸತ್ವವಾಗುತ್ತವೆ. ಆದರೆ ವಾಯಿವಡಂಗ, ಹಿಪ್ಪಲಿ, ಕೋತಂಬರಿ ಬೀಜ, ಬೆಲ್ಲ, ತುಪ್ಪ, ಜೇನುತುಪ್ಪ ಈ ಪದಾರ್ಥಗಳು ಒಂದು ವರ್ಷದೊಳಗೆ ಸಂಗ್ರಹಿಸಿದಂಥವಿರಕೂಡದು. ಅವು ತಂದಿಟ್ಟು ವರ್ಷವಾದ ನಂತರ ಗುಣಕಾರಿಯಾಗುತ್ತವೆ.

ಎಲ್ಲ ಗಿಡಮೂಲಿಕೆಗಳನ್ನು ಚಲೋ ಸ್ಥಳದಿಂದ ಕಿತ್ತಿ ತರಿಸಿ ಒಣಗಿಸಿ ಇಡಬೇಕು. ಒಣಗಿದ ಔಷಧಿಗಳು ಸಿಗದ ವೇಳೆಯಲ್ಲಿ ಅವುಗಳ ಬದಲು ಹಸಿಯಾದುಥವುಗಳನ್ನು ಉಪಯೋಗಿಸಬಹುದು; ಆದರೆ ಅವು ಪಾವಲಿ ತೂಕಕ್ಕೆ ಬದಲು ಅರ್ಧರೂಪಾಯಿ ತೂಕ ಅಂದರೆ ಇಮ್ಮಡಿ ಹಾಕಲ್ಪಡಬೇಕು. ಅಮರಬಳ್ಳಿ, ಕೋಲ ಮುರಕನ ತೊಪ್ಪಿ, ಆಡ ಸಾಲದ ತೊಪ್ಪಲ, ಸಂಡಿಗೆ ಕುಂಬಳಕಾಯಿ, ಶೀವರೀ ಬೇರು, ಹಿರೇಮದ್ದಿನ ಬೇರು (ಅಶ್ವಗಂಧಿ), ಗೊರಟೀ ಬೇರು, ಹಸರಾಣಿ, ಬಡೇಸೋಪು ಇವು ಯಾವಾಗಲೂ ಹಸಿ ಯವೇ ಉಪಯೋಗಿಸಲ್ಪಡಬೇಕು. ಹಸಿಯವೆಂದು ಇಮ್ಮಡಿ ಹಾಕುವ ಕಾರಣವಿಲ್ಲ. ಇವುಗಳೊಳಗಿನ ಬಡೇಸೋಪನ್ನು ಮಾತ್ರ ಈಗ ಎಲ್ಲರೂ ಒಣಗಿದ್ದನ್ನೇ ಉಪಯೋಗಿ ಸುತ್ತಾರೆ. ಹಾಗೆ ಮಾಡಿದರೂ ಅಡ್ಡಿ ತೋರುವದಿಲ್ಲ. ವನೌಷಧಿಗಳಿಂದ ಮಾಡಿದ ಚೂರ್ಣವು ಎರಡು ತಿಂಗಳವರೆಗೂ ಗುಳಗಿ, ಎಣ್ಣೆ, ತುಪ್ಪ ಮೊದಲಾದವು ನಾಲ್ಕು ತಿಂಗಳವರೆಗೂ ಲೇಹಗಳು[೧] ಒಂದು ವರ್ಷದ ವರೆಗೂ ಕೆಡುವದಿಲ್ಲ. ವನೌಷಧಿಯಿಂದ ತಯಾರಿಸಿದ ಆಸವಗಳು[೨] ಪುರಾಣಾಃ ಸ್ಯುರ್ಗುಣೈರ್ಯುಕ್ತಾ ಆಸವಾಧಾತವೋರಸಾಃ || (ಶಾರ್ಙ್ಗಧರ). ರಸಾಯನದಿಂದ ಕೂಡಿದ ಪಾಕಗಳೂ ಮಾತ್ರ ಎಷ್ಟು ದಿವಸ ಹೆಚ್ಚು ಇಟ್ಟೇತು, ಅಷ್ಟು ಗುಣಕಾರಿಗಳೇ ಆಗುತ್ತವೆ, ಹೊರತು ಕೆಡುವದಿಲ್ಲ.

ವಾಂತಿ[೩] ವಿರೇಚನಗಳಿಗೆ ಬೇಕಾಗುವ ಗಿಡಮೂಲಿಕೆಗಳನ್ನು ವಸಂತಕಾಲದ ಕೊನೆಯಲ್ಲಿ ಕಿತ್ತಿ ಸಂಗ್ರಹಿಸಬೇಕು. ಮಿಕ್ಕವುಗಳನ್ನು ಶರದೃತುವಿನಲ್ಲಿ ಕೂಡಿಸಿಡ ಬೇಕು. ಹುತ್ತಗಳೊಳಗೂ, ಕೊಳಚಿ ಸ್ಥಳಗಳೊಳಗೂ, ಸುಡುಗಾಡು ಮುಂತಾದ ಹೊಲಸಾದ ಸ್ಥಳಗಳೊಳಗೂ ನಾಟಿದ ವನೌಷಧಿಗಳನ್ನು ತರಕೂಡದು. ಅದರಂತೆ ಬೇಗೆಯಿಂದ ಸುಟ್ಟಂಥ, ತಂಡಿಯಿಂದ ನಲುಗಿದಂಥ, ಹುಳಹತ್ತಿದಂಥ ಔಷಧಿಯನ್ನು ತಂದಿಡಬಾರದು. ಇವುಗಳಿಂದ ಗುಣವಾಗದೆ ಅಪಾಯವಾಗುವ ಸಂಭವವಿರುತ್ತದೆ.[೪]

ಗಿಡಮೂಲಿಕೆಗಳೆಂದು ಹಿಯಾಳಿಸಲಾಗದು; ಅವುಗಳ ಗುಣಗಳು ಅದ್ಭುತ ವಾಗಿವೆ. ಉತ್ತಮವೆಂದು ಬಣ್ಣಿಸಲ್ಪಡುವ ರಸಾಯನಗಳೂ ವನೌಷಧಿಯ ಸಹಾಯ ವಿಲ್ಲದೆ ಸಿದ್ಧವಾಗಲಾರವು. ಪಾದರಸವನ್ನು ಕೊಲ್ಲುವ ಸಾಮರ್ಥ್ಯವುಳ್ಳ ವನೌಷಧಿ ಗಳು ಅರವತ್ತು ಪ್ರಕಾರದವಿರುತ್ತವೆ. "ಯೋಜಕಸ್ತತ್ರದುರ್ಲಭಃ" ಎಂಬಂತೆ ಅವುಗಳನ್ನು ಹುಡುಕಿ ತಂದು ಉಪಯೋಗಿಸಿಕೊಳ್ಳುವವರು ಮಾತ್ರ ಸ್ವಲ್ಪ ಜನರಿರು ವರು. ಧನ್ವಂತರಿನಿಘಂಟು, ರಾಜನಿಘಂಟು ಮೊದಲಾದ ಸಂಸ್ಕೃತ ಗ್ರಂಥಗಳಲ್ಲಿ ಎಷ್ಟೋ

---

೧) ನೆಕ್ಕಿ ತಿನ್ನಲಿಕ್ಕೆ ಬರುವಂಥ ಔಷಧವು.

೨) ಸಾರಾಯಿಯಂಥ ಔಷಧ. ಇವುಗಳ ಕೃತಿಯು ಮುಂದೆ ಬರುತ್ತದೆ.

೩) ಹೊಟ್ಟೆ ಝಾಡಿಸುವದು.

೪) ಮೊದಲಿನಂತೆ ತಾವೇ ಔಷಧಿಗಳನ್ನು ತಂದಿಡುವ ವೈದ್ಯರು ಈಗ ಎಲ್ಲ ಕಡೆಗೂ ದುರ್ಲಭ, ಆದದರಿಂದ ಗಿಡಮೂಲಿಕೆಗಳನ್ನು ಮಾರುವ ಅಂಗಡಿಕಾರರು ಈ ಸಂಗತಿಯ ಕಡೆಗೆ ಹೆಚ್ಚು ಮನಸ್ಸು ಹಾಕಿದರೆ, ತಮ್ಮ ವ್ಯವಸಾಯವೂ ನೆಟ್ಟಗೆ ನಡೆದು ಜನರ ಹಿತವೂ ಆಗುತ್ತದೆ.

ವನೌಷಧಿಗಳ ಗುಣದೋಷಗಳೂ ಬರೆಯಲ್ಪಟ್ಟಿವೆ. ಅವುಗಳ ದೆಸೆಯಿಂದ ಕನ್ನಡ ವಾಙ್ಮಯದಲ್ಲಿ ಬೇರೆ ಗ್ರಂಥಗಳೇ ಆಗಬೇಕು. ಇಂಥ ಸಣ್ಣ ಪುಟ್ಟ ಪುಸ್ತಕಗಳಲ್ಲಿ ಅವುಗಳನ್ನು ಸೇರಿಸುವದು ಮಗಿಯೊಳಗೆ ಹರವಿಯನ್ನು ಹಾಕಿದಂತೆಯೇ ಸರಿ. ಆದರೂ ನಮ್ಮ ವಾಚಕರ ಪರಿಚಯಕ್ಕೋಸ್ಕರ ಮಾದರಿಗಾಗಿ ಅವುಗಳೊಳಗಿನ ಹಲಕೆಲವು ಮುಖ್ಯವಾದ ಔಷಧಿಗಳನ್ನೂ ಅವುಗಳ ಪಾರಿಭಾಷಿಕ ಶಬ್ದಗಳನ್ನೂ ಮುಂದೆ ಕೊಟ್ಟಿರುತ್ತೇವೆ.

ಶಾರ್ಙ್ಗಧರಾಚಾರ್ಯಾದಿ ಸಂಸ್ಕೃತ ಗ್ರಂಥಕಾರರ ವಚನಾನುಸಾರವಾಗಿ ಕೆಳಗೆ ಬರೆದ ವರ್ಗೀಕರಣವು ಮಾಡಲ್ಪಟ್ಟಿದೆ :

**ದೀಪನಪಾಚನೌಷಧ :** ಹೊಟ್ಟೆಯೊಳಗೆ ಪಚನವಾಗದಂಥ ಅನ್ನವನ್ನು ಪಕ್ವ ಮಾಡದೆ, ಜಠರಾಗ್ನಿ (ಜಠರರಸ) ಹೆಚ್ಚಿಸುವಂಥ ಔಷಧಕ್ಕೆ **ದೀಪನ**ವೆನ್ನುವರು; ಉದಾ: ಬಡೇಸೋಪು. ಹೊಟ್ಟೆಯೊಳಗಿನ ಅನ್ನವನ್ನು ಪಚನ ಮಾಡಿದರೂ ಜಠರಾಗ್ನಿಯನ್ನು ಹೆಚ್ಚಿಸದಂಥ ಔಷಧವು **ಪಾಚನ**ವೆನಿಸುತ್ತದೆ. ಉದಾ : ನಾಗಕೇಸರ, (ಮೊಗ್ಗಿ, ಮರಾಟ ಮೊಗ್ಗಿ). ಅಪಕ್ವವಾದ ಅನ್ನವನ್ನು ಪಚನ ಮಾಡಿ ಹಸಿವೆಯನ್ನು ಉದ್ದೀಪನ ಮಾಡುವ ಔಷಧಕ್ಕೆ **ದೀಪನಪಾಚನ**ವೆನ್ನುತ್ತಾರೆ. ಉದಾ : ಚಿತ್ರಮೂಲವು.

**ಶಮನೌಷಧ :** ವಾತ, ಪಿತ್ತ, ಕಫಗಳೆಂಬ ದೋಷಗಳನ್ನು ವಾಂತಿಯಿಂದ ಇಲ್ಲವೆ ಜುಲಾಬಿನಿಂದ ಹೊರಗೆ ಹಾಕದೆ, ಇದ್ದ ದೋಷಗಳನ್ನು ಅಭಿವೃದ್ಧಿಗೊಳಿಸದೆ, ಹೆಚ್ಚುಕಡಿಮೆಯಾದ (ವಿಷಮವಾದ) ದೋಷಗಳನ್ನು ಮಾತ್ರ ದೂರ ಮಾಡುವ ಸಾಮರ್ಥ್ಯವುಳ್ಳ ಔಷಧಕ್ಕೆ **ಶಮನೌಷಧ**ವೆನ್ನುವರು. ಉದಾ : ಅಮೃತಬಳ್ಳಿ.

**ಅನುಲೋಮನೌಷಧ :** ವಾತಾದಿ ದೋಷಗಳ ಕಸುವು ಮುರಿದು, ಗಟ್ಟಿಯಾದ ಮಲವನ್ನು ನೀರುಮಾಡಿ, ಮಲಶುದ್ಧಿಯನ್ನು (ಜುಲಾಬನ್ನು) ಮಾಡಿಸುವ ಔಷಧಕ್ಕೆ **ಅನುಲೋಮನೌಷಧ**ವೆನ್ನುತ್ತಾರೆ. ಉದಾ : ಅಳಲೇಕಾಯಿ.

**ಸ್ರಂಸನೌಷಧ :** ಅಪಕ್ವವಾದ ಅನ್ನ ಮೊದಲಾದದ್ದನ್ನೂ ಬೇರೆ ದೋಷಗಳನ್ನೂ ಪಚನಮಾಡದೆ ಅಧೋಮಾರ್ಗದಿಂದ ಜಾಡಿಸಿ ಬಿಡುವ ಔಷಧಕ್ಕೆ **ಸಂಸ್ರನೌಷಧ**ವೆನ್ನುವರು. ಉದಾ : ಕಕ್ಕೀಕಾಯಿತಿಳಲು.

**ಭೇದನೌಷಧ :** ವಾತದಿಂದ ಇಲ್ಲವೆ ಉಷ್ಣದಿಂದ ಹಿಕ್ಕಿಗಟ್ಟಿದ ಅಥವಾ ಗಟ್ಟಿ ಕಲ್ಲಿನಂತಾದ ಮಲವನ್ನು ಒಡೆದು ನೀರು ಮಾಡಿ ಜಾಡಿಸಿ ಬಿಡುವ ಔಷಧಕ್ಕೆ **ಭೇದನೌಷಧ**ವೆಂಬ ಹೆಸರು. ಉದಾ : ಕಟುಕರೋಹಣಿ (ಕತ್ತೆಕಿರುಬಿನಬೇರು.)

**ರೇಚನೌಷಧ :** ಪಚನವಾದದ್ದಿರಲಿ, ಹಾಗೇ ಇರಲಿ, ಇದ್ದಂಥ ಎಲ್ಲ ಮಲವನ್ನು ಜಾಡಿಸಿ ಹೊರಗೆಡವುವ ಔಷಧಕ್ಕೆ **ರೇಚನೌಷಧ**ವೆನ್ನುವದುಂಟು. ಉದಾ : ತಿಗಡಿ. (ಕಟಬೊಗರೇ ಬೇರೇ ತಿಗಡಿಯೆಂದು ಕೆಲವರ ಮತವಿದೆ.)

**ವಮನೌಷಧ :** ಪಚನವಾದ ಇಲ್ಲವೆ ಹಾಗೇ ಇದ್ದ ಪಿತ್ತ, ಕಫ ಮುಂತಾದ ದೋಷಗಳನ್ನು ಮೇಲೆ ಒಯ್ದು ಕಾರಿಸಿಬಿಡುವ ಔಷಧಕ್ಕೆ **ವಮನೌಷಧವೆನ್ನುವರು.** ಉದಾ : ಮಂಗಾರಿಕಾಯಿ.

**ಸಂಶೋಧನೌಷಧ :** ಒಳಗಿರುವ ದೋಷಗಳನ್ನು ಬಾಯಿಂದ, ಮೂಗಿನಿಂದ, ಅಧೋಮಾರ್ಗದಿಂದ ಹೊರಗೆಡವುವ ಔಷಧವು **ಸಂಶೋಧನವು;** ಉದಾ : ಕಕ್ಕುವಡೆ ಕಾಯಿ.

**ಛೇದನೌಷಧ :** ಒಂದಕ್ಕೊಂದು ಕೂಡಿಕೊಂಡಿದ್ದ ಕಫ ಮೊದಲಾದ ದೋಷಗಳನ್ನು ಕೊಯ್ದು ತೆಗೆದಂತೆ ನಾಶ ಮಾಡುವ ಔಷಧಕ್ಕೆ **ಛೇದನೌಷಧವೆಂಬ** ಹೆಸರು. ಉದಾ : ಮೆಣಸು, ಕ್ಷಾರವು[೧] ಶಿಲಾಜಿತ[೨].

**ಲೇಖನೌಷಧ :** ರಸರಕ್ತಾದಿ ಧಾತುಗಳನ್ನೂ ವಾತಾದಿ ದೋಷಗಳನ್ನೂ ಒಣಗಿಸಿ ಕಡಿಮೆ ಮಾಡುವ ಔಷಧಕ್ಕೆ **ಲೇಖನವೆಂಬುವರು.** ಉದಾ : ಇಂದ್ರಜವಿ, ಬಜೆ, ಜೇನುತುಪ್ಪ, ಬಿಸಿನೀರು.

**ಗ್ರಾಹೀ ಔಷಧ :** ಮೇಲೆ ಹೇಳಿದ ದೀಪನ, ಪಾಚನ, ಲೇಖನ ಔಷಧಗಳ ಗುಣದಿಂದ ಕೂಡಿದಂಥ ಔಷಧವು. ಉದಾ : ಸುಂಠಿ, ಜೀರಿಗೆ, ದೊಡ್ಡ ಹಿಪ್ಪಲಿ.

**ಸ್ತಂಭನೌಷಧ :** ತನ್ನ ರುಕ್ಷ, ತಂಪು, ಒಗರು ಗುಣಗಳಿಂದಲೂ ತೀವ್ರ ಪಚನವಾಗಿ ವಾತವನ್ನುಂಟುಮಾಡುವದರಿಂದಲೂ ಮೈಯೊಳಗಿನ ಹರಿದುಹೋಗುವ ಮಲ, ಧಾತುಗಳನ್ನು ಬಂದುಮಾಡಿ ಹಿಡಿಯುವ ಔಷಧಕ್ಕೆ **ಸ್ತಂಭನೌಷಧವೆನ್ನುತ್ತಾರೆ.** ಉದಾ : ಕೋಲಮುರಕನತೋಟಿ, ಅಫು, ಬೀಜಬಂದು.

**ರಸಾಯನೌಷಧ :** ಮುಪ್ಪನ್ನೂ ಬೇನೆಗಳನ್ನೂ ಹಿಮ್ಮೆಟ್ಟಿಸಿ ಮನುಷ್ಯನಿಗೆ ಹಿತಮಾಡುವ ಔಷಧಕ್ಕೆ **ರಸಾಯನ**[೩]ವೆನ್ನುವದುಂಟು. ಉದಾ : ಅಮೃತಬಳ್ಳಿ, ಕಲ್ಲಂಗಡ್ಲೆ,[೪] ಗುಗ್ಗಳ, ಅಳಲೇಕಾಯಿ.

---

೧. ಉತ್ತರಾಣಿ ಮೊದಲಾದ ಗಿಡಮೂಲಿಕೆಗಳನ್ನು ಸುಟ್ಟು ಅವುಗಳ ಬೂದಿಯಿಂದ ತೆಗೆಯುವ ಕ್ಷಾರವು, ಇದರ ಕ್ರಮವು ಮುಂದೆ ಬರುವದು.

೨. ಹಿಮಾಲಯದಂಥ ಪರ್ವತಗಳ ಕಲ್ಲುಪಡಿಗಳ ಮೇಲೆ ಇರುವ ಒಂದು ಬಗೆಯ ಜಿಗಟಾದ ಪದಾರ್ಥವು.

ಶಿಲಾ = ಕಲ್ಲು; ಜತು = ಅರಗು ; ಕಲ್ಲರಗೆಂಬರ್ಥದ ಸಂಸ್ಕೃತದ ತದ್ಭವ.

೩. ಪಾದರಸ, ರಸಕರ್ಪೂರ ಮೊದಲಾದ ಔಷಧಗಳಿಗೇ ರಸಾಯನವೆಂಬ ರೂಢಿಯು ಬಹಳವದೆ. ಆದರೆ ಸಂಸ್ಕೃತ ಗ್ರಂಥಕಾರರು ಮೇಲೆ ಹೇಳಿದಂತೆ ಉತ್ತಮ ಗುಣ ಕೊಡುವ ಔಷಧಕ್ಕೂ ರಸಾಯನವೆಂದು ಬರೆದಿರುವರು. ಪಾದರಸ ಮುಂತಾದ್ದರೊಳಗೂ ಚಲೋ ಗುಣವಿರುವದರಿಂದೇ ಈ ಹೆಸರು ಪ್ರಚಾರದಲ್ಲಿ ಬಂದಿರಬಹುದು. ಈಗ ಮಾತ್ರ ಸಾಧಾರಣ ಜನರು ರಸಾಯನವೆಂದರೆ ಮೈಮೇಲೆ ಬಡಿಯುವ ಔಷಧವೆಂದು ತಿಳಿಯುತ್ತಾರೆ.

**ವಾಜೀಕರಣೌಷಧ :** ಹೆಂಗಸರಲ್ಲಿ ಪ್ರೀತಿಯನ್ನುಂಟುಮಾಡುವ–ಕಾಮೋದ್ದೀಪನ ಔಷಧಕ್ಕೆ **ವಾಜೀಕರಣೌಷಧ**೧ ವೆನ್ನುತ್ತಾರೆ. ಉದಾ : ತುರುಬೇ ಬೇರು, ನಸಗುನ್ನಿಯ ಬೀಜ, ತಾಲೀಮಖಾನೆ ಬೀಜ ಮುಂತಾದ ಪೌಷ್ಟಿಕವೆಂದು ಪ್ರಸಿದ್ಧವಿರುವ ಔಷಧಗಳು.

**ಶುಕ್ರಲೌಷಧ :** ವೀರ್ಯವರ್ಧಕವಾದ ಔಷಧಗಳಿಗೆ **ಶುಕ್ರಲ** ಎಂಬ ಹೆಸರು. ಉದಾ : ಹಿರೇಮದ್ದಿನ ಬೇರು (ಅಶ್ವಗಂಧಿ), ಸಾಲಾಮಿಶ್ರೀ, ಶೀಪರೀ ಬೇರು, ಉದ್ದು, ಕೇರಬೀಜ, ನೆಲ್ಲೀಕಾಯಿ, ಹಾಲು, ಸಕ್ಕರೆ.

**ಸೂಕ್ಷ್ಮೌಷಧ :** ದೇಹದ ಸೂಕ್ಷ್ಮವಾದ ರೋಮರಂಧ್ರಗಳಲ್ಲಿ (ಕೂದಲಿನ ಬುಡದ ಛಿದ್ರಗಳಲ್ಲಿ) ಭೇದಿಸಿ ಗುಣಕೊಡುವ ಔಷಧಕ್ಕೆ ಸೂಕ್ಷ್ಮವೆನ್ನುತ್ತಾರೆ. ಉದಾ : ಸೈಂಧವಲವಣ (ಸೈದಾಲವಣ) ಜೇನುತುಪ್ಪ, ಬೇವು, ಔಡಲೆಣ್ಣೆ, (ಹರಳೆಣ್ಣೆ).

**ಪ್ರಮಾಥ್ಯೌಷಧ :** ನರಗಳೊಳಗಿನ ಕಫಾದಿ ದೋಷಗಳನ್ನು ಎಲ್ಲ ದ್ವಾರಗಳಿಂದ ಹೊರಗೆಡವುವ ಸಾಮರ್ಥ್ಯವುಳ್ಳ ಔಷಧಕ್ಕೆ **ಪ್ರಮಾಥೀ** ಔಷಧವೆನ್ನುವರು. ಉದಾ : ಮೆಣಸು, ಬಜೆ.

**ಅಭಿಷ್ಯಂಧ್ಯೌಷಧ :** ಹೆಡಸಿನ ಗುಣದಿಂದಲೂ ಜಾಡ್ಯದಿಂದಲೂ ನರಗಳ ಮಾರ್ಗವನ್ನು ತಡೆದು ಮೈಯೊಳಗೆ ಆಲಸ್ಯವನ್ನುಂಟು ಮಾಡುವ ಔಷಧಕ್ಕೆ **ಅಭಿಷ್ಯಂಧಿ** ಎನ್ನುವದುಂಟು. ಉದಾ : ಮೊಸರು.

**ವಿಕಾಶ್ಯೌಷಧ :** ಮನುಷ್ಯನ ತೇಜವನ್ನು ಕಡಿಮೆ ಮಾಡಿ ಮೊಳಕಾಲು, ಮೊಳಕೈ, ಹಲ್ಲು ಮುಂತಾದವುಗಳನ್ನು ಶಿಥಿಲಮಾಡುವ ಔಷಧಕ್ಕೆ ವಿಕಾಶೀ ಎನ್ನುವರು. ಉದಾ : ಅಡಿಕೆ, ಹಾರಕಧಾನ್ಯ.೨

**ಮದಕಾರ್ಯೌಷಧ :** ತಮೋಗುಣದಿಂದ ಬುದ್ಧಿಯನ್ನು ತಪ್ಪಿಸಿ ಬಿಡುವ ಔಷಧಕ್ಕೆ **ಮದಕಾರಿ**ಯೆನ್ನುತ್ತಾರೆ. ಸರಾಯಿ೩, ಮದ್ದುಗುಣಿಕೆ ಮುಂತಾದ ಅಮಲಿನ ಪದಾರ್ಥಗಳು.

---

೪. ಅಪ್ರಸಿದ್ಧವದೆ; ಇದರಿಂದ ಸದಾ ತಟತಟ ನೀರು ಸುರಿಯುವದೆಂತಲೂ ಇದು ಬಂಗಾರ ಮಾಡಲಿಕ್ಕೆ ಸಹಾಯಕವೆಂತಲೂ ಕೆಲವರು ಹೇಳುವದನ್ನು ಕೇಳಿದ್ದೇವೆ. ಮೋಸಗಾರರ ಮಾತಿಗೆ ಒಳಗಾಗಬಾರದು.

೧. ವಾಜಿ ಗಂಡುಗುದುರೆಯು ಹೆಣ್ಣಿನಗೂಡ ಬೆನ್ನಟ್ಟಿ ತಿರುಗಾಡುವಂತೆ ಕರಣ (ಮನುಷ್ಯನನ್ನು) ಮಾಡುವದೆಂದು, ಈ ಹೆಸರು ಬಂದದೆ. ವೈದ್ಯರ ಅಭಿಪ್ರಾಯವಿಲ್ಲದೆ ಸ್ವಬುದ್ಧಿಯಿಂದ ಈ ಔಷಧಗಳನ್ನು ತಕ್ಕೊಂಡು ಎಷ್ಟೋ ಜನರು ಪ್ರಕೃತಿಯನ್ನು ಕೆಡಿಸಿಕೊಂಡಿರುವರು. ಅನುಭವಿಕರ ಅಭಿಪ್ರಾಯದಿಂದ ತೆಗೆದುಕೊಂಡರೆ ಗುಣಕಾರಿಯಾಗುತ್ತದೆ.

೨. ಕೊಂಕಣದಲ್ಲಿ ಬೆಳೆಯುವದು. ಮರಾಠಿಯಲ್ಲಿ ಅದಕ್ಕೆ ಕೋದ್ರೂ ಅನ್ನುತ್ತಾರೆ. ಹಾಗೇ ಉಂಡರೆ ತಲೆಗೆ ಹತ್ತುವದು. ಆದರಿಂದ ಸಗಣಿಯಲ್ಲಿ ನೆನಿಯಿಟ್ಟು ಶುದ್ಧ ಮಾಡುತ್ತಾರೆ.

೩. ಬ್ಯಾಲದ ತೋಟಿ ಮುಂತಾದ್ದರ ಅರ್ಕ.

**ಪ್ರಾಣಹಾರಕೌಷಧ :** ಮೇಲೆ ಹೇಳಿದ ವ್ಯವಾಯಿ. ವಿಕಾಶಿ, ಸೂಕ್ಷ್ಮ, ಛೇದನ, ಮದಕಾರಿ ಈ ಔಷಧಗಳ ಗುಣದಿಂದ ಕೂಡಿದ ಜಂಕಿಯಂಥ ಔಷಧವು. ಉದಾ : ಬಚನಾಗ (ಕಡಗೋಲಮಂಡೀ ಬೇರು), ಸುಂಬಳಕಾರ ಮೊದಲಾದ ಪ್ರಸಿದ್ಧ ವಿಷಗಳು. ಇವುಗಳಿಗೆ ಯೋಗವಾಹಿ ಎಂದೂ ಹೇಳುವರು; ಅಂದರೆ ಬೇರೆ ಔಷಧಗಳ ಕೂಡ ಬೆರೆಸಿದರೂ ಇವು ತಮ್ಮ ಪರಾಕ್ರಮವನ್ನು ತೋರಿಸತಕ್ಕವೆಂಬ ಅರ್ಥವು.

ವನೌಷಧಿಗಳ ಪರಿಚಯವನ್ನು ಅನುಭವಿಕರ ಮುಖಾಂತರ ಮಾಡಿಕೊಳ್ಳ ತಕ್ಕದ್ದು. ಹಳ್ಳಿಗಳೊಳಗಿನ ಮುದುಕರಿಂದಲೂ ಗೊಲ್ಲರು ಮೊದಲಾದ ಅಡವಿಯಲ್ಲಿ ತಿರುಗುವವರಿಂದಲೂ ಅವುಗಳ ದೇಶಭಾಷೆಯ ಹೆಸರನ್ನು ತಿಳಿದುಕೊಳ್ಳಬೇಕು. ಬದಲು ಔಷಧಗಳು ಬೀಳುವದರಿಂದ ಬಹಳ ಹಾನಿಯಾಗುತ್ತದೆ. ಅದರಿಂದ ಜಾಗ್ರತೆಯಿಂದ ಅವುಗಳ ಗುರ್ತು ಮಾಡಿಕೊಳ್ಳತಕ್ಕದ್ದು ಅವಶ್ಯವಾದದ್ದು. ಇಂಥ ವಿಷಯದಲ್ಲಿ ಕೇವಲ ತನ್ನ ತಿಳುವಳಿಕೆಗೆ ಪ್ರಾಧಾನ್ಯವನ್ನು ಕೊಟ್ಟು ನಡಿಯಕೂಡದು. ಕಂಟಕಾರಿ ಎಂಬ ವನೌಷಧಿಯು ಕನ್ನಡದಲ್ಲಿ ನೆಲಗುಳ್ಳವೆಂದು ಪ್ರಸಿದ್ಧವದೆ. ಪ್ರಯೋಗದೊಳಗಿನ ಕಂಟಕಾರಿ ಪದಕ್ಕೆ ಅನುಭವವಿಲ್ಲದ ಕೇವಲ ಶಬ್ದ ಜ್ಞಾನಿಯಾದ ಹೊಸವೈದ್ಯನು ಕಂಟಕ ಗಳಿಗೆ—ಮುಳ್ಳುಗಳಿಗೆ ಅರಿ=ಶತ್ರು ಯಾವದೋ ಅದು ಕಂಟಕಾರಿ ಅಂದರೆ ಪಾದರಕ್ಷೆ ವೆಂಬ ಅರ್ಥ ಮಾಡಿದರೆ ಎಷ್ಟು ಅಯೋಗ್ಯವೂ ಅಪಹಾಸ್ಯಕರವೂ ಮುರ್ಖತನವೂ ಆದೀತು ? ಅದರಂತೆ ಗಣಜಲೆ ಎಂಬಲ್ಲಿ ಕಣಗಿಲ ಎಂದು ತಿಳಿದುಕೊಂಡು ಎಷ್ಟೋ ಜನರು ಅಪಾಯ ಮಾಡಿಕೊಂಡ ವರ್ತಮಾನವು ಹಳೇ ಜನರಿಂದ ತಿಳಿದುಬರುತ್ತದೆ. ಕಿವಿಗೆ ಕೇಳಿಸುವಾಗ ಗಣಜಲೆ-ಕಣಗಿಲ ಶಬ್ದಗಳು ತುಸು ಒಂದೇ ಸಮನಾಗಿ ಕೇಳ ಬರುವದರಿಂದ ಬದಲು ಬೀಳುವ ಸಂಭವವಿದೆ. ಗಣಜಲೆಯ ಬೇರು ಬಾವು ಕಳೆಯುವ ಉತ್ತಮ ಔಷಧವು; ಕಣಗಿಲ ಬೇರು ವಿಷವುಳ್ಳದ್ದಾಗಿ ಪ್ರಾಣಬಾಧೆಯನ್ನುಂಟು ಮಾಡತಕ್ಕದ್ದು ! ಆದದರಿಂದ ಔಷಧಿಗಳ ಯಥಾರ್ಥ ಜ್ಞಾನವು ಮಹತ್ವವುಳ್ಳ ದ್ದಾಗಿದೆ. ಅದನ್ನು ಅನುಭವಿಕರ ಕಡೆಯಿಂದ ದೊರಕಿಸಿಕೊಳ್ಳಬೇಕು.

ಸಾಮಾನ್ಯವಾಗಿ ವನೌಷಧಿಗಳು ನಿರುಪದ್ರವಿಯೆಂದು ಮೇಲೆ ಹೇಳಿರುವದಷ್ಟೇ. ಅದರೊಳಗೂ ಕೆಲಕೆಲವು ಕೆಟ್ಟ ರಸಾಯನದಂತೆ ಅಪಾಯವನ್ನುಂಟು ಮಾಡತಕ್ಕಂಥ ವಿರುತ್ತವೆ. ಅವುಗಳನ್ನು ತಿಳಿದುಕೊಂಡು ತಕ್ಕ ಶುದ್ಧಿಯನ್ನು ಮಾಡಿ ಅಲ್ಪ ಪ್ರಮಾಣ ದಿಂದ ಉಪಯೋಗಿಸಿದರೆ ಗುಣಾಕಾರಿಯಾಗಿ ಪರಿಣಮಿಸುತ್ತವೆ. ಅಂಥ ಕೆಲವು ಔಷಧಿ ಗಳ ಶುದ್ಧತೆಯನ್ನು ಮುಂದೆ ಕೊಟ್ಟಿದ್ದೇವೆ.

**ಬಚನಾಗ :** ಅಂಗಡಿಕಾರರು ಇದಕ್ಕೆ ಬಚನಾಗವೆಂದೇ ಅನ್ನುತ್ತಾರೆ. ಈ ಬೇರುಗಳ ಆಕೃತಿಯು ಮಿಡಿನಾಗರ ಮರಿಗಳಂತೆ ಇರುವದರಿಂದ ಈ ಹೆಸರು ಬಿದ್ದಿರ ಬಹುದು. ಕಡಗೋಲ ಮಂಡೆಯ ಆಕಾರದ ಕೆಂಪಾದ ಹೂವಾಗುವದರಿಂದ ಕಡಗೋಲ

ಮುಂದೆ ಎಂದು ಗೊಲ್ಲರು ಹೇಳುತ್ತಾರೆ. ಇದನ್ನು ಶೋಧಿಸದೆ ಹಾಗೇ ತಕ್ಕೊಂಡರೆ ಮಹಾ ವಿಷದಂತೆ ಬಾಧಿಸುತ್ತದೆ.

ಶುದ್ಧಮಾಡುವ ಕ್ರಮವು: ಬಚನಾಗವನ್ನು ಕತ್ತರಿಸಿ ಸಣ್ಣ ಸಣ್ಣ ತುಂಡುಗಳನ್ನು ಮಾಡಿ ಅರಿವೆಯಲ್ಲಿ ಕಟ್ಟಿ ಗೋಮೂತ್ರದೊಳಗೆ ೭ ದಿವಸ ನೆನಿಹಾಕಬೇಕು. ಇಲ್ಲವೆ ಆಕಳ ಹಾಲೊಳಗೆ ಹಾಕಿ ಕುದಿಸಬೇಕು. ಅಂದರೆ ಶುದ್ಧವಾಗುತ್ತದೆ.

**ಕಾಜಿವಾಳ :** (ಹೆಮ್ಮುಷ್ಟಿ) ಬೀಜಗಳಿಗೆ ತುಪ್ಪವನ್ನು ಹಚ್ಚಿ ಕಾಫಿಯಂತೆ ಹುರಿಯಬೇಕು; ಅಂದರೆ ಶುದ್ಧವಾಗುವವು.

**ಜೇಪಾಳ :** (ಜಮಾಲಗೋಟಾ) ಇದೊಂದು ಗೋವೇದ ಔಡಲ ಜಾತಿಯ ಬೀಜವದೆ. ಬೀಜಗಳ ಮೇಲಿನ ಸೊಪ್ಪೆಯನ್ನು ತೆಗೆದು ಅರಿವೆಯಲ್ಲಿ ಗಂಟುಕಟ್ಟಿ ಶಿಗಣೀ ರಾಡಿಯೊಳಗೆ ಹಾಕಿ ಚನ್ನಾಗಿ ಕುದಿಸಬೇಕು. ಬಳಿಕ ಬೀಜದೊಳಗಿನ ನಾಲಿಗೆ (ಮೊಳಿಕೆ) ಗಳನ್ನು ತೆಗೆದು ಬೀಸಿನೀರಿನಿಂದ ತೊಳೆದು ಒರಸಿ ಉಪಯೋಗಿಸಬೇಕು. ಇದರೊಳಗಿನ ಎಣ್ಣೀ ಅಂಶವು ಬಹಳ ಉಷ್ಣವೂ ರೇಚಕವೂ ಇರುವದರಿಂದ ಅದನ್ನು ಕಡಿಮೆ ಮಾಡುವದೇ ಶುದ್ಧಿಯ ಮುಖ್ಯ ಉದ್ದೇಶವು.

**ಅಫೀಮು :** ಇದು ಕಸಕಸೀ ಕಾಯಿ ಮೇಲಿನ ಅಂಟೆಂಬುದು ಎಲ್ಲರೂ ಬಲ್ಲ ಸಂಗತಿ. ಇದಕ್ಕೆ ಅಲ್ಲದ (ಖಾರಗೆಣಸಿನ-ಹಸಿಸುಂಟಿಯ) ರಸದ ೨೧ ಭಾವನೆ ಕೊಟ್ಟರೆ ಶುದ್ಧವಾಗುತ್ತದೆ. ಒಮ್ಮೆ ತೊಯ್ಯುವಷ್ಟು ಅಲ್ಲದ ರಸವನ್ನು ಹಾಕಿ ಬಿಸಿಲಲ್ಲಿ ಒಣಗಿಸಿದರೆ ಒಂದು ಭಾವನೆಯಾಯಿತು.

**ಭಂಗಿ :** (ಗಾಂಜೀ ಪುಡಿ) ಬೆಂಕೆಯ ಮೇಲೆ ಹುರಿದು ಅರವಿಯಲ್ಲಿ ಕಟ್ಟಿ ಚಲೋ ನೀರು ಬರುವ ವರೆಗೆ ತೊಳಿಯಬೇಕು. ಅಂದರೆ ಶುದ್ಧವಾಗುತ್ತದೆ.

**ಮದುಗುಣಿಕೆಯ ಬೀಜ :** ಮುಂಜಾನೆಯಿಂದ ಸಂಜೇವರೆಗೆ ಗೋಮೂತ್ರದಲ್ಲಿ ನೆನಿಯಿಟ್ಟು, ಮೊದಲಿನ ಗೋಮೂತ್ರವನ್ನು ಚಲ್ಲಿ ಹೊಸದನ್ನು ಹಾಕಿ ಕುದಿಸಿ ತೆಗೆದು ಒಣಗಿಸಿಟ್ಟರೆ ಮದುಗುಣಿಕೆಯ ಬೀಜಗಳು ಶುದ್ಧವಾಗುತ್ತವೆ.

**ಗುಗ್ಗುಳ :** ಇದು ಒಂದು ಜಾತಿಯ ಗಿಡದ ಅಂಟು, ಧೂಪ ಹಾಕುವದಕ್ಕೆ ಸರ್ವತ್ರವೂ ಸುಪ್ರಸಿದ್ಧವು. ಔಷಧದೊಳಗೆ ಹಾಕುವ ಗುಗ್ಗುಳಕ್ಕೆ ಮೈಸಾಳಗುಗ್ಗುಳವೆಂದೆನ್ನುತ್ತಾರೆ. ಅದರೊಳಗಿನ ಕಸರು ಕಡ್ಡಿಗಳನ್ನಾರಿಸಿ ಅರಿವೆಯಲ್ಲಿ ಗಂಟುಕಟ್ಟಿ ತ್ರಿಫಲಾದ[೧] ಕಷಾಯದೊಳಗೆ ದೋಲಾಯಂತ್ರ[೨]ದಿಂದ ಕುದಿಸಬೇಕು. ಗುಗ್ಗುಳವೆಲ್ಲ

---

೧) ಅಳಲೇಕಾಯಿ, ನೆಲ್ಲೀಕಾಯಿ, ತಾರೀಕಾಯಿ ಇವುಗಳಿಗೆ ತ್ರಿಫಲಾ ಎಂದೆನ್ನುವರು.

೨) ಒಂದು ಪಾತ್ರೆಯಲ್ಲಿ ಕಷಾಯವನ್ನು ಹಾಕಿ ಅದರ ಬಾಯಮೇಲೆ ಅಡ್ಡ ಕಟ್ಟಿಗೆಯನ್ನಿಟ್ಟು ಅದಕ್ಕೆ ಔಷಧದ ಗಂಟು ಇಳಿಬಿಡಬೇಕು. ಆ ಗಂಟು ಕಷಾಯದಲ್ಲಿ ಅರ್ಧ ಮುಳುಗಿರಬೇಕು. ಇದಕ್ಕೆ ದೋಲಾಯಂತ್ರವೆಂಬ ಸಂಜ್ಞೆಯಿರುತ್ತದೆ.

ಕರಗಿ ಕಷಾಯದಲ್ಲಿ ಬೀಳುತ್ತದೆ. ಆರಿದ ನಂತರ ತೆಗೆದು ಉಪಯೋಗಿಸಿದರೆ ಬಾಧಕ ವಾಗುವದಿಲ್ಲ. ಕೆಲವರು ೩ ದಿವಸ ನೀರಲ್ಲಿಟ್ಟು ನೆನಿಸಿ ಅಂಟೆನಂತೆ ಸೋಸಿಕೊಂಡು ಕಬ್ಬಿಣ ಪಾತ್ರೆಯಲ್ಲಿ ಹಾಕಿ ಕುದಿಸಿ ಗಟ್ಟಿಮಾಡಿಕೊಳ್ಳುತ್ತಾರೆ. ಹೀಗೆ ಮಾಡಿದರೂ ಶುದ್ಧವಾಗುತ್ತದೆ.

### ತೂಕವು

ಈಗ ರೂಢಿಯಲ್ಲಿರುವ ತೂಕವನ್ನೇ ಇಲ್ಲಿ ಕೊಟ್ಟಿರುತ್ತದೆ. ಗಟ್ಟಿಯಾದ ಗುಲ ಗಂಜೀಕಾಳಿಗೆ ಒಂದು ಗುಂಜಿ ಎನ್ನುತ್ತಾರೆ. ೮ ಗುಂಜಿಗಳ ತೂಕಕ್ಕೆ ಮಾಸಿ (ಉದ್ದಿನ ಕಾಳತೂಕ) ಎಂಬ ಹೆಸರು. ೧೨ ಮಾಸಿಗಳೆಂದರೆ ೧ ತೊಲಿಯು.

೧೬ ಆಣೆಗಳೆಂದರೆ ೧ ತೊಲಿಯು. ಒಂದು ಆಣೆ ಎಂದರೆ ಬೆಳ್ಳೀ ಚವಲಿಯ ಅರ್ಧತೂಕ (೬ ಗುಂಜಿ) ಇರುತ್ತದೆ.

ಇಂಗ್ರೇಜೀ ಔಷಧದ ತೂಕದಲ್ಲಿ ಗ್ರೇನು ಎಂತಾ ಹೇಳಿರುತ್ತಾರೆ. ಒಂದು ಗುಂಜಿಗೆ ಸುಮಾರು ೨ ಗ್ರೇನು ಆಗುತ್ತದೆ. (೧ ತೊಲಿಗೆ ೧೮೪ ಗ್ರೇನುಗಳು). ೨½ ತೊಲಿ ಎಂದರೆ ೧ ಔಂಸು.

### ತಿಳಿಯುವ ರೀತಿಯು

ಪ್ರವಾಹಿ ಪದಾರ್ಥವನ್ನು ೨೦ ರೂ. ತೂಕ ನೀರು ಹಿಡಿಯುವ ಪಾತ್ರೆಗೆ ತುಂಬಿ ದರೆ ೧ ಶೇರು ಎನ್ನುತ್ತಾರೆ. ಇಂಥ ೪ ಶೇರುಗಳಿಗೆ ಪಕ್ಕಾ ಶೇರು ಎನ್ನುವದುಂಟು. ಒಂದು ತಂಬಿಗೆಯು ೬ ಶೇರು ಹಿಡಿಯುತ್ತದೆ. ೧೨ ತಂಬಿಗೆಗೆ ೧ ಕೊಡವು.

ಪ್ರವಾಹಿ ಪದಾರ್ಥಗಳನ್ನು ತಕ್ಕಡೆಯೊಳಗಿಟ್ಟು ತೂಗುವ ರೂಢಿಯೂ ಉಂಟು.

## ಸಿದ್ಧಮಾಡುವ ಔಷಧಗಳ ಹೆಸರೂ ಕ್ರಮವೂ.

### ಸ್ವರಸ ಇಲ್ಲವೆ ಅವರಸ

ಹಸೀ ಔಷಧವನ್ನು ತಂದು ಜಜ್ಜಿ ವಸ್ತ್ರಗಣಿಕೆ ಮಾಡಿ ಹಿಂಡಿತೆಗೆದ ರಸಕ್ಕೆ ಸ್ವರಸ ವೆನ್ನುತ್ತಾರೆ. ಅಲ್ಲದ ರಸ, ನಿಂಬೀಹುಳಿ, ತುಳಸೀ ರಸ ಇವೆಲ್ಲ ಸ್ವರಸಗಳೇ. ಕುಟ್ಟಿದರೆ ರಸ ಹೊರಡದಂಥ ವನೌಷಧಿಗಳನ್ನು ಜಜ್ಜಿ ಅದರ ನಾಲ್ಕುಪಟ್ಟು ನೀರಿನಲ್ಲಿ ಒಂದು ಹಗಲೂ ರಾತ್ರಿ ನೆನಿಯಿಟ್ಟು ಮರುದಿವಸ ಅರಿವೆಯಲ್ಲಿ ಹಾಕಿ ಹಿಂಡಿ ತೆಗೆದರೆ ಅದಕ್ಕೂ ಸ್ವರಸ ಅಥವಾ ಅವರಸವೆನ್ನುತ್ತಾರೆ. ಅಜೀರ್ಣವಾದಾಗ ಹುಡುಗರಿಗೆ ಅಜವಾನ ಮುಂತಾದ್ದು ನೆನೆಹಾಕಿ ಅರಿದು ಸೋಸಿ ಕುಡಿಸುವದುಂಟು. ಅದೇ ಅವರಸವು.

### ಕಲ್ಕ

ಔಷಧಗಳನ್ನು ಅರೆದು ಚಟ್ಟಣಿಯಂತೆ ಮುದ್ದಿಯಾಗಿ ಮಾಡುವದಕ್ಕೆ ಕಲ್ಕ ವೆನ್ನುತ್ತಾರೆ. ನಾಲಿಗೆಗೆ ರುಚಿ ಬರುವದಕ್ಕಾಗಿ ನೆಲ್ಲಿಚೆಟ್ಟು, ಸೈಂಧವಲವಣ, ಇಂಗು ಮುಂತಾದ್ದು ಹಾಕಿ ಮಾಡುವ ರೂಢಿಯುಂಟು, ಅದೇ ಕಲ್ಕವು.

## ಪುಟಪಾಕ

ಯಾವದಾದರೂ ಔಷಧವನ್ನು ಇಲ್ಲವೆ ಕಲ್ಕವನ್ನು ಔಡಲ ಮುಂತಾದ ಎಲೆಗಳಲ್ಲಿ ಮಡಿಚಿ ಮೇಲೆ ಒದ್ದಿಯಾದ ಅರಿವೆಯನ್ನು ಸುತ್ತಿ ಅದರ ಮೇಲಿ ೨ ಬೊಟ್ಟು ಕೆಸರನ್ನು ಇಲ್ಲವೆ ಸಗಣೆಯನ್ನು ಮೆತ್ತಿ ಉಂಡೀ ಮಾಡಿ ನಿಗಿನಿಗಿ ಬೆಂಕಿಯಲ್ಲಿ ಹಾಕಿ ಮೇಲಿನ ಪದಾರ್ಥವು ಕೆಂಪಗಾಗುವಂತೆ ಬೇಯಿಸುತ್ತಾರೆ. ಬಳಿಕ ತೆಗೆದು ಹಿಂಡಿ ಅಥವಾ ಹಾಗೇ ತೆಗೆದುಕೊಳ್ಳುತ್ತಾರೆ. ಇದೇ ಪುಟಪಾಕವು. ಉತ್ತತ್ತಿಯ ಪುಟಪಾಕವು ಪ್ರಸಿದ್ಧವಿದೆ.

## ಕಷಾಯವು

ಔಷಧವನ್ನು ಜಜ್ಜಿ ಅದರ ಹದಿನಾರು ಪಟ್ಟು ನೀರಿನ ಎಸರಿನಲ್ಲಿ ಹಾಕಿ ಕುದಿಸಿ ೧/೪ ಉಳಿಸಬೇಕು. ಕಷಾಯವನ್ನು ಗಡಿಗೆಯೊಳಗೆ ಇಲ್ಲವೆ ಕಲ್ಲಗಡಿಗೆಯೊಳಗೆ ಅಥವಾ ಕಲೀ ಮಾಡಿದ ಪಾತ್ರೆಯೊಳಗೆ ಮಾಡಬೇಕು. ಉರಿಯನ್ನು ಹೆಚ್ಚಾಗಿಯೂ ಕಡಿಮೆಯಾಗಿಯೂ ಹಚ್ಚದೆ ಒಂದೇ ಸವನೆ ಮಧ್ಯಮ ರೀತಿಯಿಂದ ಹಚ್ಚಬೇಕು. ಕುದಿಯುವಾಗ್ಗೆ ಮೇಲೆ ಏನೂ ಮುಚ್ಚಿರಕೂಡದು.[೧] ಮೇಲಿಂದ ಇಲ್ಲಣ ಮೊದಲಾದದ್ದು ಅದರೊಳಗೆ ಬೀಳದಂತೆ ಜಾಗ್ರತೆಯಿಂದ ತಯಾರಿಸಬೇಕು.

ಬಾಯಿ ಮುಕ್ಕಳಿಸುವದಕ್ಕೂ ಹುಣ್ಣುಗಳನ್ನು ತೊಳಿಯುವದಕ್ಕೂ ಮಾಡುವ ಕಷಾಯವನ್ನು ೧/೨ ಕ್ಕೆ ಇಳಿಸುವ ರೂಢಿಯುಂಟು.

ಜ್ವರ ಬಂದಾಗ್ಗೆ ನೀರಡಿಕೆಯಾದಾಗ ಕೊಡತಕ್ಕ ಕಷಾಯವನ್ನು ೧/೩ಕ್ಕೆ ಇಳಿಸುವದುಂಟು; ಇದಕ್ಕೆ ಪಾನೀಯವೆಂಬ ಹೆಸರು.

## ಫಾಂಟ

ಔಷಧದ ಚೂರ್ಣದಲ್ಲಿ ಅದರ ನಾಲ್ಕು ಪಟ್ಟು ಎಸರು ನೀರು ಸುರಿವಿ ಸ್ವಚ್ಛವಾದ ಅರಿವಿಯಲ್ಲಿ ಹಾಕಿ ಸೋಸಬೇಕು. ಇದಕ್ಕೆ ಫಾಂಟವೆನ್ನುತ್ತಾರೆ. ಈಗ ಚಹಾ ಮಾಡುವ ಕೃತಿಯೂ ತುಸು ಹೆಚ್ಚು ಕಡಿಮೆ ಹೀಗೆ ಇರುತ್ತದೆ. ಕೆಲ ಜನ ಆಧುನಿಕ ವೈದ್ಯರು ಫಾಂಟಕ್ಕೆ 'ಚಹಾ' ಎಂದೇ ಹೇಳುತ್ತಾರೆ.

## ಹಿಮ

ಆರು ಪಟ್ಟು ನೀರಿನಲ್ಲಿ ರಾತ್ರಿ ಔಷಧದ ಪುಡಿಯನ್ನು ನೆನೆಯಿಟ್ಟು ಮುಂಜಾನೆ ಸೋಸಿ ಸಿದ್ಧಮಾಡುವ ನೀರಿಗೆ ಹಿಮವೆನ್ನುತ್ತಾರೆ.

---

೧ ಅಪಿಧಾನ ಮುಖೇಪಾತ್ರೆ ಜಲಂ ದುರ್ಜರತಾಂ ವ್ರಜೇತ್ ॥
ತಸ್ಮಾದಾವರಣಂ ತ್ಯಾಜ್ಯಂ ಸ್ವಾಥಾದೀನಾಂ ವಿನಿಶ್ಚಯಃ ॥ (ಶಾರ್ಙ್ಗಧರ)

## ಚೂರ್ಣವು

ಔಷಧಗಳನ್ನು ಸಣ್ಣಾಗಿ ಕುಟ್ಟಿ ಸೋಸಿ ಪ್ರಮಾಣದಂತೆ ಕೂಡಿಸಿ ಇಡುವದಕ್ಕೆ ಚೂರ್ಣವೆನ್ನುವರು. ಬಹಳ ಮಾಡಿ ಇದನ್ನು ಯಾವದಾದರೊಂದು ಪ್ರವಾಹಿ ಔಷಧದ ಇಲ್ಲವೆ ಹಾಲು ಗೋಮೂತ್ರ ಮುಂತಾದ್ದರ ಕೂಡ ತೆಗೆದುಕೊಳ್ಳಬೇಕಾಗುವದು. ಅನುಪಾನವನ್ನು ಚೂರ್ಣದ ನಾಲ್ಕು ಪಟ್ಟು ತೆಗೆದುಕೊಳ್ಳಬೇಕು. ಎಣ್ಣೆ ತುಪ್ಪ ಸಕ್ಕರೆ ಕೂಡಿಸುವದಿದ್ದರೆ ಎರಡು ಪಟ್ಟೇ ತೆಗೆದುಕೊಳ್ಳತಕ್ಕದ್ದು. ಬೆಲ್ಲವನ್ನು ಕೂಡಿಸುವದಾದರೆ ಚೂರ್ಣದ ತೂಕದಷ್ಟೇ ಕೂಡಿಸಬೇಕು.

## ಗುಳಿಗೆಗಳು

ಔಷಧಗಳ ಸೂಕ್ಷ್ಮವಾದ ಚೂರ್ಣವನ್ನು ಸಕ್ಕರೆ, ಬೆಲ್ಲ ಮುಂತಾದ್ದರ ಪಾಕದಲ್ಲಿ ಹಾಕಿ, ನಾದಿ, ಕೈಯಿಂದ ದುಂಡಗೆ ಮಾಡಿ ಒಣಗಿಸಿದ ಔಷಧಕ್ಕೆ ಗುಳಿಗೆಗಳೆನ್ನುತ್ತಾರೆ. ಇವುಗಳ ಆಕಾರವಿದ್ದಂತೆ ಮೋದಕ, ವಟಿಕಾ, ಗುಟಿಕಾ, ಮಾತ್ರೆ ಎನ್ನುವ ರೂಢಿಯುಂಟು. ಸಕ್ಕರೆ ಬೆರಿಸಿ ಮಾಡುವದಾದರೆ ಚೂರ್ಣದ ನಾಲ್ಕು ಪಟ್ಟು ಸಕ್ಕರೆಯ ಪಾಕದಲ್ಲಿ ಮಾಡಬೇಕು; ಬೆಲ್ಲವನ್ನು ಕೂಡಿಸುವದಾದರೆ ಎರಡು ಪಟ್ಟು, ಗುಗ್ಗುಳವನ್ನು ಕೂಡಿಸುವದಿದ್ದರೆ ಸಮಭಾಗ ಹಾಕಬೇಕು; ಜೇನುತುಪ್ಪದಲ್ಲಿ ಮಾಡುವದಾದರೂ ಚೂರ್ಣದಷ್ಟೇ ಕೂಡಿಸಬೇಕು; ಹಾಲು, ನೀರು ಮೊದಲಾದ ಬೇರೆ ದ್ರವ ಪದಾರ್ಥವನ್ನು ಕೂಡಿಸುವದಾದರೆ ಎರಡು ಪಟ್ಟು ಹಾಕಿ ಸಿದ್ಧಮಾಡಬೇಕು.

## ಅವಲೇಹ

ಕಷಾಯ, ಸಕ್ಕರೆ, ಚೂರ್ಣ ಮೊದಲಾದದ್ದನ್ನು ಕೂಡಿಸಿ ಕುದಿಸಿ ಜೇನುತುಪ್ಪದಂತೆ ಇಲ್ಲವೆ ಅದಕ್ಕೂ ತುಸು ಗಟ್ಟಿ (ನೆಕ್ಕಿಕೊಳ್ಳಲಿಕ್ಕೆ ಬರುವಂತೆ) ತಯಾರಿಸುವ ಔಷಧಕ್ಕೆ ಅವಲೇಹವೆನ್ನುತ್ತಾರೆ. ಚೂರ್ಣದ ಎರಡು ಪಟ್ಟು ಬೆಲ್ಲವನ್ನು ಕೂಡಿಸಬೇಕು; ಸಕ್ಕರೆಯನ್ನು ಹಾಕುವದಿದ್ದರೆ ನಾಲ್ಕು ಪಟ್ಟು, ಹಾಗು ಕಷಾಯವನ್ನೂ ನಾಲ್ಕು ಪಟ್ಟು ಹಾಕಿ ಸಿದ್ಧಮಾಡಬೇಕು. ಪಾಕಕ್ಕೆ ತಂತಿಯಾಡಿತೆಂದರೆ ಲೇಹವಾಯಿತೆಂದು ಇಳಿಸಬೇಕು. ಜೇನುತುಪ್ಪವನ್ನು ಲೇಹದಲ್ಲಿ ಹಾಕುವದಿದ್ದರೆ ಕುದಿಸಿ ಇಳಿಸಿ, ಆರಿದ ಬಳಿಕ ಹಾಕಬೇಕು. ಜೇನುತುಪ್ಪವನ್ನು ಯಾವ ಪದಾರ್ಥದೊಳಗೂ ಕೂಡಿಸಿ ಬಿಸಿಮಾಡಬಾರದು. ಅದು ಉಷ್ಣತೆಯಿಂದ ಅಪಾಯವನ್ನುಂಟು ಮಾಡುತ್ತದೆ. ತುಪ್ಪವನ್ನೂ ಜೇನುತುಪ್ಪವನ್ನೂ ಸಮನಾಗಿ ಕೂಡಿಸಿದರೆ ವಿಷದಂತೆ ಬಾಧಿಸುವದೆಂದು ಪ್ರಾಚೀನ ವೈದ್ಯರ ಅಭಿಪ್ರಾಯವಿದೆ.[೧]

---

೧ ವ್ಯಾಪಾರಸ್ಥರು ಇರವಿ ಮೊದಲಾದ್ದು ಬಿದ್ದಿರುವದೆಂದು ಬಿಸಿ ಮಾಡಿ ಸೋಸುತ್ತಾರೆ. ಹೀಗೆ ಮಾಡುವದು ಸರಿಯಲ್ಲ. ಬಿಸಿ ಮಾಡದೆ ಹಾಗೇ ಸೋಸಬೇಕು.

## ಪಾಕ

ಸಕ್ಕರೆಯ ಪಾಕದಲ್ಲಿ ಔಷಧಗಳ ಚೂರ್ಣವನ್ನು ಹಾಕಿ ಗಟ್ಟಿಯಾಯಿತೆಂದರೆ, ಅದನ್ನು ಪರಾತಕ್ಕೆ ಇಲ್ಲವೆ ಮಣಿಗೆ ತುಪ್ಪವನ್ನು ಸವರಿ ಅದರ ಮೇಲೆ ಸುರುವಿ ಕೈಗೆ ತುಪ್ಪವನ್ನು ಹಚ್ಚಿಕೊಂಡು ಬಡಿದು ಕೊರೆದು ಬರ್ಫಿಯಂತೆ ವಡಿಗಳನ್ನು ಮಾಡಬೇಕು. ಬಾಯಿಗೆ ರುಚಿ ಹತ್ತಿ ಆರೋಗ್ಯವಾಗಬೇಕೆಂದು ಎಲ್ಲ ರೋಗಗಳ ಮೇಲೂ ಕೆಲ ಜನ ವೈದ್ಯರು ಪಾಕಗಳನ್ನೇ ಮಾಡಿಕೊಂಡಿರುತ್ತಾರೆ. ಹುಡುಗರಿಗೂ ಶ್ರೀಮಂತ ಜನರಿಗೂ ಇದರಿಂದ ಹೆಚ್ಚು ಉಪಯೋಗವಾಗುತ್ತದೆ.

## ಘೃತಗಳೂ ತೈಲಗಳೂ

ಯಾವದಾದರೂ ಔಷಧದ ಕಲ್ಕವನ್ನು ಅದರ ನಾಲ್ಕು ಪಟ್ಟು ನೀರಿಟ್ಟು ಕುದಿಸಿ ಅದನ್ನು ತುಪ್ಪ ಮುಂತಾದ ಸ್ನಿಗ್ಧ (ಜಿಗಟು) ದ್ರವ್ಯದೊಡನೆ ಕುದಿಸಿ೧ ಇಳಿಸಬೇಕು. ಒಳಗೆ ಹಾಕುವ ಔಷಧವು ಕಠಿಣ (ಬಿರಸಾದ್ದು) ಇದ್ದರೆ ನೀರನ್ನು ಅದು ಬೇಯುವಂತೆ ಹದಿನಾರು ಪಟ್ಟಿನವರೆಗೂ ಹಾಕಬೇಕು. ತುಪ್ಪವು ಸಿದ್ಧವಾಯಿತೆಂದರೆ ನೊರೆಯು ಅಡಗುತ್ತದೆ. ಎಣ್ಣೆಯು ತಯಾರಾಯಿತೆಂದರೆ ನೊರೆಯು ಬರುತ್ತದೆ. ನೀರಿನ ಅಂಶವು ಪೂರ್ಣ ಹೋಯಿತೋ ಇಲ್ಲವೋ ಎಂಬ ಸಂಗತಿಯನ್ನು ತಿಳಿದುಕೊಳ್ಳಬೇಕಾದರೆ ಸಿದ್ಧ ವಾದ ಘೃತವನ್ನಾಗಲಿ, ತೈಲವನ್ನಾಗಲಿ ಬೆಂಕಿಯ ಮೇಲೆ ಚಿಮ್ಮಡಿಸಬೇಕು. ಚೊಟ ಚೊಟ ಸಪ್ಪಳಾದರೆ ನೀರು ಇರುವದೆಂದೂ ಉರಿಯಿದ್ದರೆ ನೆಟ್ಟಗಾಯಿತೆಂದೂ ತಿಳಿಯ ಬೇಕು. ಈ ಸ್ನೇಹದ್ರವ್ಯಗಳನ್ನು ಮಂದಾಗ್ನಿಯಲ್ಲಿ ಯುಕ್ತಿಯಿಂದ ಕುದಿಸಬೇಕು. ತುಸು ಹೆಚ್ಚು ಕಡಿಮೆಯಾದರೆ ಕಡಿಗಾವಾಗಿ ಕೆಟ್ಟು ಹೋಗುತ್ತವೆ.

## ಆಸವಗಳೂ ಅರಿಷ್ಟಗಳೂ

ಆಸವವೆಂದರೆ ಒಂದು ಪ್ರಕಾರದ ಸಾರಾಯಿಯು. ಔಷಧಗಳನ್ನು ಜಜ್ಜಿ ಸಣ್ಣ ಮಾಡಿ, ಗಡಿಗೆಯಲ್ಲಿ ಹಾಕಿ ನೀರು ಸುರುವಿ ಕೆಲ ಕಾಲ ಮುಚ್ಚಿಟ್ಟರೆ ಆಸವವು ಸಿದ್ಧ ವಾಗುತ್ತದೆ. ಮೇಲೆ ಹೇಳಿದಂತೆ ಔಷಧಗಳ ಕಷಾಯವನ್ನು ಸಿದ್ಧಮಾಡಿ ಅದರಲ್ಲಿ ಬೇರೆ ಪದಾರ್ಥಗಳನ್ನು ಕೂಡಿಸಿ ಬಾಯಿ ಬಂದು ಮಾಡಿ ಕೆಲವು ದಿವಸ ಇಟ್ಟರೆ ಅರಿಷ್ಟ ವಾಗುತ್ತದೆ.

## ಕ್ಷಾರ

ಕ್ಷಾರವೆಂದರೆ ಒಂದು ತರದ ಉಪ್ಪು. ಸೌಳಾದ ಮಣ್ಣನ್ನು ತಂದು ನೀರೊಳಗೆ ಕಲಿಸಿ, ಕೆಲ ವೇಳೆ ಇಟ್ಟು, ಮೇಲಿನ ತಿಳಿಯನ್ನೇ ಬಸಕೊಂಡು, ಕುದಿಸಿ ಗಟ್ಟಿ ಮಾಡಿದರೆ

---

೧ ಪಾಕ, ಲೇಹ, ಘೃತ ಮುಂತಾದ ಔಷಧವನ್ನು ಕುದಿಸಬೇಕಾದರೆ ಮಣ್ಣಿನ ಇಲ್ಲವೆ ಕಲಾಯಿಮಾಡಿದ ಧಾತುಗಳ ಪಾತ್ರೆಯನ್ನು ಉಪಯೋಗಿಸಬೇಕು. ಇಲ್ಲದಿದ್ದರೆ ಒಳಗೆ ಕುದಿ ಸುವ ಹುಳಿಯಾದ (ನೆಲ್ಲೀಕಾಯಿಯಂಥ) ಔಷಧವು ಕಿಲುಬಿ ಕೆಡುತ್ತದೆ.

ಉಪ್ಪು ಹೊರಡುತ್ತವೆ. ಇದಕ್ಕೆ ಸೌಳಕಾರವೆನ್ನುತ್ತಾರೆ. ಇದರಂತೆ ಉತ್ತರಾಣಿ, ಯಕ್ಕಿ, ಮುತ್ತಲ ಮುಂತಾದ ಕಟ್ಟಿಗೆಗಳನ್ನು ಸುಟ್ಟು ಅವುಗಳ ಬೂದಿಯಿಂದ ಸಿದ್ಧ ಮಾಡಿದ ಕ್ಷಾರಗಳಿಗೆ ಅಪಾಮಾರ್ಗಕ್ಷಾರ, ಅರ್ಕಕ್ಷಾರ, ಪಲಾಶಕ್ಷಾರ ಎಂಬ ಹೆಸರು.

## ಸತ್ವ

ಅಮೃತ ಬಳ್ಳಿಯಂಥ ಪದಾರ್ಥಗಳನ್ನು ಜಜ್ಜಿ, ನೆನಿಯಿಟ್ಟು, ಕಡೆದು, ಕಸರು ತೆಗೆದು ಹಾಗೇ ಇಡುತ್ತಾರೆ. ಅದರ ತಳಕ್ಕೆ ಸುಣ್ಣದಂತೆ ಉಳಿದ ಪದಾರ್ಥಕ್ಕೆ ಸತ್ವವೆನ್ನುವರು.

## ಔಷಧವನ್ನು ತೆಗೆದುಕೊಳ್ಳುವ ಕಾಲವು

ಕಷಾಯಗಳನ್ನೂ ಚೂರ್ಣಗಳನ್ನೂ ಮುಂಜಾನೆ ತೆಗೆದುಕೊಳ್ಳುವದು ಒಳ್ಳೆಯದು. ವಾಂತಿಯ ಅಥವಾ ಜುಲಾಬಿನ ಔಷಧವನ್ನು ಮುಂಜಾನೆ ತೆಗೆದುಕೊಳ್ಳಬೇಕು. ವಾಂತಿ ಜುಲಾಬುಗಳಾಗುವ ವರೆಗೆ ಊಟ ಮಾಡಕೂಡದು. ಅಧೋವಾಯು[೧] ಕೋಪವಾಗಿದ್ದರೆ ಊಟಕ್ಕೆ ತುಸು ಮುಂಚಿತವಾಗಿ ತೆಗೆದುಕೊಳ್ಳಬೇಕು. ಅರುಚಿ ರೋಗಕ್ಕೆ ತರತರದ ವ್ಯಂಜನ ಪದಾರ್ಥಗಳಲ್ಲಿ ಬೆರಿಸಿ ಊಟದಗೂಡ ತೆಗೆದುಕೊಳ್ಳತಕ್ಕದ್ದು. ಹೊಕ್ಕಳದಲ್ಲಿಯ ವಾಯುಕೋಪವಾಗಿರಲು ಇಲ್ಲವೆ ಅಗ್ನಿಮಾಂದ್ಯವಾಗಿರಲು ನಡುವೂಟದಲ್ಲಿ ಔಷಧವನ್ನು ಸೇವಿಸಬೇಕು. ಸರ್ವಾಂಗ ವಾತಕ್ಕೆ ಭೋಜನದ ಕೊನೆಗೆ ತೆಗೆದುಕೊಳ್ಳಬೇಕು. ಮೈನಡುಗುವದಕ್ಕೂ ಬಿಕ್ಕಿಗೂ ಊಟದ ಮೊದಲೂ ಕೊನೆಗೂ ಔಷಧವನ್ನು ಸೇವಿಸಬೇಕು. ಸ್ವರಭಂಗಕ್ಕೆ (ಧನಿ ಒಡೆದದ್ದಕ್ಕೆ) ಸಂಜೆಯ ಊಟದಗೂಡ ಔಷಧವನ್ನು ತೆಗೆದುಕೊಳ್ಳಬೇಕು. ಎದೆಯೊಳಗಿನ ವಾಯುವು ಕುಪಿತವಾಗಿದ್ದರೆ ಸಂಜೆಯ ಊಟವಾದ ಬಳಿಕ ತೆಗೆದುಕೊಳ್ಳಬೇಕು. ನೀರಡಿಕೆ, ಎದುರುವಾಕರಿಕೆ, ದಮ್ಮು, ವಿಷದೋಷ (ಗ್ರಂಥಿಜ್ವರ) ಮುಂತಾದ ಭಯಂಕರ ರೋಗಗಳಿಗೆ ಮೇಲಿಂದ ಮೇಲೆ ಔಷಧ ತೆಗೆದುಕೊಳ್ಳುವದು ವಿಹಿತವು. ಕಣ್ಣು, ಮೂಗು, ಕಿವಿ, ತಲೆ ಮೊದಲಾದ ಅವಯವಗಳ ರೋಗಗಳಿಗೂ ಹಳೇತರಕ್ಕೆ ಬಿದ್ದ ಬೇರೆ ಬೇನೆಗಳಿಗೂ ರಾತ್ರಿಯಲ್ಲಿ ಔಷಧವನ್ನು ತೆಗೆದುಕೊಳ್ಳಬೇಕು. ಪಾಚನ ಹಾಗು ಶಮನೌಷಧಗಳನ್ನು ರಾತ್ರಿಯಲ್ಲಿ

೧ ವಾತ ಪಿತ್ತ ಕಫಗಳ ಮುಂದೆ ಕೋಪ–ಕುಪಿತ ಶಬ್ದಗಳು ಬಂದರೆ ಆ ದೋಷವು ಹೆಚ್ಚಾಗಿ ಬಾಧಿಸುತ್ತವೆ ಎಂದು ತಿಳಿಯಬೇಕು. ಕೋಪವೆಂದರೆ ಸಿಟ್ಟು, ಸಿಟ್ಟಿಗೆದ್ದವನು ವಿಕಾರ ವಶನಾಗಿ ಅನನ್ವಿತ ಕೆಲಸಗಳನ್ನು ಮಾಡುವನೋ ಹಾಗೆ ಪಿತ್ತಾದಿಗಳೂ ಮಾಡುವವೆಂಬ ಅಭಿಪ್ರಾಯವು.

ಜ್ಞೇಯಃ ಪಂಚವಿಧಃ ಕಾಲೋ ಭೈಷಜ್ಯ ಗ್ರಹಣೇ ನೃಣಾಂ ॥
ಕಿಂಚಿತ್ಸೂರ್ಯೋದಯೇಜಾತೇ ತಥಾ ದಿವಸಭೋಜನೇ ॥
ಸಾಯಂತನೇ ಭೋಜನೇ ಚ ಮುಹುಶ್ಚಾಪಿ ತಥಾ ನಿಶಿ ॥ (ಶಾರ್ಙ್ಗಧರ)

ಸೇವಿಸಿ ಅದರ ಮೇಲೆ ಭೋಜನ ಮಾಡಬಾರದು. ಮೈಮೇಲೆ ಗಂಧದಂತೆ ಹಚ್ಚಿಕೊಳ್ಳುವ ಔಷಧವನ್ನು (ಲೇಪವನ್ನು) ನಿದ್ದಿ ಹತ್ತಿದಾಗ ಹಚ್ಚಬಾರದು. ಹಚ್ಚಿಕೊಂಡು ನಿದ್ದಿ ಮಾಡಬಾರದು. ಒಟ್ಟಿಗೆ ಸೂರ್ಯೋದಯ, ಮಧ್ಯಾಹ್ನ ಭೋಜನ, ರಾತ್ರಿ ಭೋಜನ, ಪೂರ್ವರಾತ್ರಿ, ಮೇಲಿಂದಮೇಲೆ, ಹೀಗೆ ಐದು ಕಾಲಗಳು ಔಷಧಕ್ಕೆ ತಕ್ಕವೆಂದು ಪ್ರಾಚೀನ ಋಷಿಗಳ ಮತವದೆ.

## ಔಷಧದ ಪರಿಮಾಣವು

ಈ ಪುಸ್ತಕದಲ್ಲಿ ಮುಂದೆ ಹೇಳುವ ಪರಿಮಾಣವು ಬಹಳಮಾಡಿ ದೊಡ್ಡ (ಪೂರ್ಣ ವಯಸ್ಸಿನ) ವರ ದೆಸೆಯಿಂದೇ ಹೇಳಿರುತ್ತದೆ. ವಯೋಮಾನಕ್ಕನುಸರಿಸಿ ಕೆಳಗೆ ಹೇಳಿದಂತೆ ಕೊಡತಕ್ಕದ್ದು ಯೋಗ್ಯವು.

| ವರ್ಷದವರಿಗೆ | ದೊಡ್ಡವರಿಗೆ ಕೊಡುವದರ ಎಷ್ಟಾಂಶ |
|---|---|
| ೧ .... .... .... .... .... | ೧/೧೨ |
| ೨ .... .... .... .... .... | ೧/೮ |
| ೩ .... .... .... .... .... | ೧/೬ |
| ೪ .... .... .... .... | ೧/೪ |
| ೭ .... .... .... .... .... | ೧/೩ |
| ೧೪ .... .... .... .... .... | ೧/೨ |
| ೨೦ ವರೆಗೆ .... .... .... .... | ೩/೪ |

ಮುಂದೆ ಪೂರ್ಣ ಮಾತ್ರೆ (ಪರಿಮಾಣವನ್ನು) ಉಪಯೋಗಿಸಬೇಕು. ಕೂಸುಗಳಿಗೂ ಗರ್ಭಿಣಿಯರಿಗೂ ಅಫಿಮಿನಂಥ ಮಾದಕ ಔಷಧವನ್ನು ಕೊಡುವಾಗ ಬಹಳ ಜಾಗ್ರತೆಯನ್ನು ತಕ್ಕೊಳ್ಳಬೇಕು. ಮಲೆ ಕೂಸುಗಳಿಗೆ ತೀರ ಕಡಿಮೆ ಪ್ರಮಾಣದಿಂದ ಕೊಡಬೇಕು.

## [೧]ದೋಷಗಳು

ಪ್ರಾಚೀನ ಆರ್ಯ ವೈದ್ಯರು ಶರೀರದೊಳಗೆ ಹೆಚ್ಚು ಕಡಿಮೆಯಾಗಿ ರೋಗ ಹುಟ್ಟಬೇಕಾದ ಕೆಲಕೆಲವು ದೋಷಗಳನ್ನು ವರ್ಣಿಸಿರುವರು. ಅವುಗಳಲ್ಲಿ ಮುಖ್ಯ ದೋಷಗಳೆಂದರೆ ವಾತ ಪಿತ್ತ ಕಫಗಳು. ಇವುಗಳಿಗೆ ಮಲಗಳೆಂದೂ ಧಾತುಗಳೆಂದೂ ಹೇಳುವದುಂಟು. ಇವುಗಳಿಗೆ ದೋಷಗಳೆನ್ನುವದಕ್ಕಿಂತ ಗುಣಗಳೆನ್ನುವದೇ ಲೇಸಾಗಿ ತೋರುತ್ತದೆ. ಯಾಕಂದರೆ ಇವುಗಳಿಲ್ಲದೆ ಮನುಷ್ಯನು ಬದುಕುವದೇ [೧] ಕಷ್ಟವು.

ವಾತ ಎಂದರೆ ಗಾಳಿಯು, ಇದು ಸರ್ವಾಂಗದಲ್ಲಿ ವ್ಯಾಪಿಸಿಕೊಂಡು ರಸ-ರಕ್ತಾದಿಗಳನ್ನು ಇತ್ತಿಂದತ್ತ ಒಯ್ದು ಶರೀರವನ್ನು ಸುಸ್ಥಿತಿಯಲ್ಲಿಡುತ್ತದೆ. ಇದು ಪ್ರಮಾಣ

೧. ವಾಯುಃ ಪಿತ್ತಂ ಕಫೋದೋಷಾ ಧಾತವಶ್ಚ ಮಲಾಸ್ತಥಾ ॥ (ಶಾರ್ಙ್ಗಧರ)

ಕ್ಕಿಂತ ಹೆಚ್ಚಾಯಿತೆಂದರೆ ಅನೇಕ ಪ್ರಕಾರದ ಶೂಲಿ ಆಕಳಿಕೆ ಮೈಮುರಿಕೆ ಮುಂತಾದ ವಿಕಾರಗಳನ್ನು ಹುಟ್ಟಿಸುತ್ತದೆ. ವಾತ ಕೋಪವಾಗಿದ್ದರೆ ಮೈಯು ಹುರುಬರಕಾಗಿಯೂ ಕಪ್ಪಾಗಿಯೂ ಬೂದಿಬಣ್ಣದ್ದಾಗಿಯೂ ಕಾಣಿಸುತ್ತದೆ. ನಿದ್ದೆ ತರಬುವದರಿಂದಲೂ ಕಾಲಕಾಲಕ್ಕೆ ಮಲಮೂತ್ರವಿಸರ್ಜನ ಸ್ನಾನಭೋಜನಪಾನಾದಿಗಳನ್ನು ಮಾಡದಿರುವುದರಿಂದಲೂ ಎಣ್ಣೆಯಲ್ಲಿ ಕರಿದ ಪದಾರ್ಥ, ನಿಸ್ಸತ್ವ ಪದಾರ್ಥ ಮುಂತಾದವುಗಳ ಸೇವನದಿಂದಲೂ ಅತಿಶೀತ, ಪೆಟ್ಟು ಹತ್ತೋಣ, ಚಿಂತೆ, ಅಂಜಿಕೆ, ಆಪ್ತೇಷ್ಟರ ಮರಣವಾರ್ತೆ, ಅತಿ ಸಂತೋಷ, ಕಾಮ, ಕ್ರೋಧ ಮುಂತಾದ ಆಗಂತುಕ ಕಾರಣಗಳಿಂದಲೂ ವಾಯುವು ಕುಪಿತವಾಗುತ್ತದೆ. ಸ್ವಾಭಾವಿಕವಾಗಿ ಮಳೆಗಾಲದಲ್ಲಿ ವಾತಕೋಪವಾಗುತ್ತಿರುತ್ತದೆ. ಹಳ್ಳಿಗಾಡ ಜನರು ಇದಕ್ಕೆ ಕಸವೆಂದು ಹೇಳುತ್ತಾರೆ. ಬಹಳ ಜನ ಹೆಂಗಸರು ತಮಗೆ ದೆವ್ವ (ಗಾಳಿ) ಬಡಿದಿರುವುದೆಂದು ಹೇಳುವದು ಈ ವಾತದ ಮಹಾತ್ಮ್ಯೆಯೇ. ಇದು ಮಸ್ತಕದಲ್ಲಿ ಸೇರಿತೆಂದರೆ ಬುದ್ಧಿಭ್ರಂಶ ಮಾಡಿ ಹುಚ್ಚುಚ್ಚು ಮಾತಾಡಿಸುತ್ತದೆ. ಕೈಕಾಲು ಬೇರೆ ಅವಯವಗಳು ಸೊಟ್ಟವಾಗುವದೂ ಬಿಲ್ಲಿನಂತೆ ಮಣಿಯುವದೂ ಇದರ ಪ್ರಭಾವವೇ. ವಾತಕೋಪದಿಂದ ೮೦ ಪ್ರಕಾರದ[೧] ರೋಗಗಳುಂಟಾಗುತ್ತವೆ. ತುಪ್ಪ ಮೊದಲಾದ ಸ್ನಿಗ್ಧ ಪದಾರ್ಥದ ಭೋಜನದಿಂದಲೂ ಔಡಲೆಣ್ಣೆಯಂಥ ಜಿಗುಟು ಪದಾರ್ಥಗಳ ಮರ್ದನದಿಂದಲೂ ಔಷಧಗಳ ಸೇವನದಿಂದಲೂ ವಾತವು ಶಮನವಾಗುತ್ತದೆ.

ಪಿತ್ತವು, ಇದಕ್ಕೆ ಜನರು ಪೈತ್ಯವೆಂದು ಹೇಳುತ್ತಾರೆ, ಇದು ಹೃದಯದಲ್ಲಿ ಅರಿಸಿಣ ಬಣ್ಣದ ದ್ರವರೂಪದಿಂದಿರುತ್ತದೆ. ಇದರಿಂದೇ ಅನ್ನಪಚನಾದಿ ವ್ಯಾಪಾರಗಳು ನಡಿಯುತ್ತವೆ. ಇದರ ಗುಣವು ಉಷ್ಣವಾದದ್ದು. ಇದು ಹೆಚ್ಚಾಗಲು ಹೊಟ್ಟೆಯಲ್ಲಿ ಉರಿ, ಕುಣ್ಣುರಿ, ಹುಳಿಸುಡುವದು, ಮೂತ್ರವು ಕೆಂಪಾಗುವದು ಮೊದಲಾದ ಉಷ್ಣ ವಿಕಾರಗಳಾಗುತ್ತವೆ. ಶಕ್ತಿಮೀರಿ ಶ್ರಮಮಾಡೋಣ, ಉಪವಾಸ, ಬಿಸಿಲು, ಮದ್ಯಪಾನ, ಇಂಗು, ಸಾಸಿವೆ, ಹುರುಳಿ, ಮೆಕ್ಕೇಕಾಯಿ ಮೊದಲಾದ ಪದಾರ್ಥಗಳ ಸೇವನ ಇವುಗಳಿಂದ ಪಿತ್ತವು ಕುಪಿತವಾಗುತ್ತದೆ. ಸ್ವಾಭಾವಿಕವಾಗಿ ಶರದೃತುವಿನಲ್ಲಿ ಪಿತ್ತಕೋಪವಾಗುತ್ತಿರುತ್ತದೆ. ಪಿತ್ತದಿಂದ ನಾಲ್ವತ್ತು ಪ್ರಕಾರದ ರೋಗಗಳು[೨] ಹುಟ್ಟುತ್ತವೆ. ಇದು ಸಕ್ಕರೆ ದ್ರಾಕ್ಷೆ ಮುಂತಾದ ಮಧುರವಾದ ಆಹಾರದಿಂದಲೂ ತಣ್ಣೀರಿನ ಸ್ನಾನದಿಂದಲೂ ಔಷಧಗಳಿಂದಲೂ ಶಾಂತವಾಗುತ್ತದೆ.

ಕಫವು ಇದೇ ಹೆಸರಿನಿಂದ ಪ್ರಸಿದ್ಧವಿದೆ. ಇದು ತಣ್ಣಗಾಗಿಯೂ ಜಿಗಟಾಗಿಯೂ ಹೃದಯದ ಮೇಲ್ಬದಿಯಲ್ಲಿರುತ್ತದೆ. ಬಂಡಿಗೆ ಹೆರೆಯಣ್ಣೆಯು ಉಪಯೋಗಿಸುವಂತೆ

---

೧. ಅಶೀತಿರ್ವಾತಜಾ ರೋಗಾಃ ಕಥ್ಯಂತೇ ಮುನಿಭಾಷಿತಾಃ ॥ (ಶಾರ್ಙ್ಗಧರ)
ಶರೀರಪ್ರಾಣವಾಯೋರೇವಂ ಸಂಯೋಗಾದಾಯುರುಚ್ಯತೇ ॥
ಕಾಲೇ ನ ತದ್ವಿಯೋಗಾದ್ಧಿ ಪಂಚತ್ವಂ ಕಥ್ಯತೇ ಬುಧೈಃ ॥ (ಶಾರ್ಙ್ಗಧರ)

೨. ಅಥ ಪಿತ್ತಭವಾರೋಗಾಶ್ಚತ್ವಾರಿಂಶದಿಹೋದಿತಾಃ ॥ (ಶಾರ್ಙ್ಗಧರ)

ಇದು ಸಂದುಸಂದುಗಳ ಕೀಲಗಳಲ್ಲಿ ಹೋಗಿ ಅವುಗಳ ವ್ಯಾಪಾರಕ್ಕೆ ಸಹಾಯ ಮಾಡುತ್ತದೆ. ಇದು ಹೆಚ್ಚಾಯಿತೆಂದರೆ ದಮ್ಮು ಕೆಮ್ಮುಗಳೂ ನೆಗಡಿಯೂ ಪ್ರಾರಂಭವಾಗುತ್ತವೆ; ಮೈಯು ಜಡವಾಗಿ ಅನ್ನವು ಸವಿಹತ್ತದಂತಾಗುವದು. ಹಾಲು, ಮೊಸರು, ಬೆಲ್ಲ, ಸಕ್ಕರೆ, ಕಬ್ಬಿನಹಾಲು, ಬಹಳ ತಣ್ಣನ್ನ ನೀರು ಇವುಗಳ ಸೇವನದಿಂದ ಕಫಪ್ರಕೋಪನಾಗುವದು. ಮುಪ್ಪಿನಕಾಲದೊಳಗೂ ವಸಂತಕಾಲದೊಳಗೂ ಸ್ವಾಭಾವಿಕವಾಗಿ ಕಫವು ಹೆಚ್ಚಾಗುತ್ತದೆ. ಹಳ್ಳಿಗಾಡ ಜನರು ಕಫವು ಹೆಚ್ಚಾದದ್ದಕ್ಕೆ ಪೈಥ್ಯವಾಗಿದೆ ಎಂದೇ ಹೇಳುತ್ತಾರೆ. ಕಫದಿಂದ ಇಪ್ಪತ್ತು[೧] ಪ್ರಕಾರದ ಬೇನೆಗಳು ಹುಟ್ಟುತ್ತವೆ. ಬಿಸಲಲ್ಲಿ ತಿರುಗಾಡುವದು, ಬಿಸಿ ನೀರು ಕುಡಿಯುವದು, ಉಷ್ಣವಾದ ಔಷಧಗಳನ್ನು ಸೇವಿಸುವದು ಇವುಗಳಿಂದ ಕಫವು ಶಾಂತವಾಗುತ್ತದೆ.

ಸಾತ್ವಿಕ, ರಾಜಸ, ತಾಮಸ ಗುಣಗಳು ಪ್ರಪಂಚದಲ್ಲಿ ಬೇಕೇಬೇಕು. ಸಿೀ, ಹುಳಿ, ಕಾರರಸಗಳು ಅಡಿಗೆಗೆ ಬೇಕೇಬೇಕು. ಇವು ಅಳತಬಿಟ್ಟು ಉಪಯೋಗಿಸಲ್ಪಟ್ಟರೆ ಪ್ರಪಂಚವೂ ಅಡಿಗೆಯೂ ಕೆಡುವಂತೆ ವಾತ ಪಿತ್ತ ಕಫಗಳೂ ಅನಿಯಮಿತ ಪ್ರಮಾಣದಿಂದ ಕುಡಿದರೆ ರೋಗೋತ್ಪತ್ತಿಯಾಗುತ್ತದೆ. ಈ ಮೂರು ದೋಷಗಳೂ ಒಮ್ಮೆಲೇ ಕೂಡಿದ್ದಕ್ಕೇ ಸನ್ನಿಪಾತವೆನ್ನುತ್ತಾರೆ. ಸನ್ನಿಪಾತವೆಂದರೆ ರೋಗವು ಅಸಾಧ್ಯವೆಂಬದನ್ನೂ ಎಲ್ಲರೂ ಬಲ್ಲರು.

## ರೋಗ ಪರೀಕ್ಷೆಯು

ಸಾಮಾನ್ಯವಾಗಿ ರೋಗಗಳನ್ನು ಎಂಟು[೨] ತರದಿಂದ ಪರೀಕ್ಷೆ ಮಾಡುವ ಪದ್ಧತಿಯುಂಟು.

**ನಾಡಿ :** ಬಲಗೈ ಹೆಬ್ಬಟ್ಟಿನ ಕೆಳಗಡೆಯಲ್ಲಿ ೨ ಬೊಟ್ಟು ಬಿಟ್ಟು ಹಿಡಿದು ನೋಡಿದರೆ ನರವು ಹಾರುತ್ತಿರುವಂತೆ ತಿಳಿಯುತ್ತದೆ, ಅದೇ ನಾಡಿಯು. ಹೆಂಗಸರಿಗೆ ಎಡಗೈ ಹಿಡಿದು ನೋಡುತ್ತಾರೆ. ಸಶಕ್ತ ಮನುಷ್ಯನ ನಾಡಿಯು ಬಲವಾಗಿ (೭೦–೮೦ ಸಾರೆ) ಹಾರುತ್ತಿರುತ್ತದೆ. ಅದು ಡೊಂಕಡೊಂಕಾಗಿ ಹರಿದಂತೆ ಅನಿಸಿದರೆ ವಾತವೆಂದೂ ವೇಗದಿಂದ ನಡೆದರೆ ಪಿತ್ತವೆಂದೂ ಮಂದವಾಗಿ ನಡೆದರೆ ಕಫವೆಂದೂ ಕ್ಷಣಕ್ಕೊಂದು ತರವಾಗಿ ಕಂಡರೆ ಸನ್ನಿಪಾತವೆಂದೂ ತಿಳಿಯಬೇಕು. ತಂತಿಗಳಿಂದ ನಿಷಾದ ಋಷಭ ಮೊದಲಾದ ಸ್ವರಗಳು ತಿಳಿಯುವಂತೆ ನಾಡಿಯಿಂದ ರೋಗಗಳ ಗತಿಗಳು ತಿಳಿಯುವವೆಂದು ಪ್ರಾಚೀನ ಗ್ರಂಥಕಾರರು ಹೇಳುತ್ತಾರೆ. ಇದು ಅನುಭವಿಕರಿಂದ ಕಲಿಯತಕ್ಕ

೧. ಕಫಸ್ಯ ವಿಂಶತಿಃ ಪ್ರೋಕ್ತಾರೋಗಾಃ ॥ (ಶಾರ್ಙ್ಗಧರ)

೨. ರೋಗಾಕ್ರಾಂತ ಶರೀರಸ್ಯಸ್ಥಾನಾನ್ಯಷ್ಟೌ ನಿರೀಕ್ಷಯೇತ್ ॥
ನಾಡೀಂ ಮೂತ್ರಂ ಮಲಂ ಜಿಹ್ವಾಂ ಶಬ್ದಂ ಸ್ಪರ್ಶಂ ದೃಗಾಕೃತೀಂ ॥
(ಯೋಗರತ್ನಾಕರ)

ವಿಷಯವು. ಸಾಧಾರಣವಾಗಿ ಶಕ್ತಿ ಅಶಕ್ತಿಗಳು ಇದರಿಂದ ಸಹಜವಾಗಿ ತಿಳಿದು ಬರುತ್ತವೆ.

**ಮೂತ್ರವು :** ಮುಂಜಾನೆ ಎದ್ದು ರೋಗಿಯ ಮೂತ್ರವನ್ನು ಮೊದಲಿನ ೧-೨ ಧಾರಿಗಳನ್ನು ಬಿಟ್ಟು ಕಾಜಿನ ಪಾತ್ರೆಯಲ್ಲಿ ಹಿಡಿದಿಡಬೇಕು. ಅದರಲ್ಲಿ ಎಣ್ಣೆಯ ಹನಿಯನ್ನು ಸಿಡಿಸಲು ಪಸರಿಸಿತೆಂದರೆ ವಾತಾಧಿಕ್ಯವೆಂದು ತಿಳಿಯಬೇಕು. ವಾತಕ್ಕೆ ಮೂತ್ರವು ಕೆಂಪಗಿದ್ದು ತಣ್ಣಗಿರುತ್ತದೆ. ಪಿತ್ತಾಧಿಕ್ಯವಿದ್ದರೆ ಎಣ್ಣೆಯನ್ನು ಸಿಡಿಸಲು ಗುಳ್ಳೆಗಳೇಳುತ್ತವೆ; ಬಣ್ಣವು ಅರಸಿಣದ ಮೇಲಿರುತ್ತದೆ. ಕಫಾಧಿಕ್ಯವಿದ್ದರೆ ಮೂತ್ರದ ಮೇಲೆ ಎಣ್ಣೀ ಸೊನೆಯಂತೆ ಕಾಣಿಸುತ್ತಿರುತ್ತದೆ; ಹಾಗೂ ಮೂತ್ರವು ಬೆಳ್ಳಗೂ ನೊರೆಯುಳ್ಳದ್ದಾಗಿಯೂ ಕಾಣುತ್ತದೆ. ಸನ್ನಿಪಾತವಾಗಿದ್ದರೆ ಮಿಶ್ರವರ್ಣದ್ದಿರುತ್ತದೆ. ಅದರೊಳಗೆ ಎಣ್ಣೀ ಹನಿಯು ಮುಳುಗಿ ಹೋಗುತ್ತದೆ; ಇದು ಕಷ್ಟಸಾಧ್ಯದ ಲಕ್ಷಣವು.

**ಮಲವು :** ನೊರೆಯುಳ್ಳದ್ದೂ ನೀರೂ ಜೊಂತೆಯುಳ್ಳದ್ದೂ ಕಪ್ಪು ಹಸರು ಬಣ್ಣವುಳ್ಳದ್ದೂ ಹಿಕ್ಕೆಗಟ್ಟಿದ್ದೂ ಇದ್ದರೆ ವಾತರೋಗವೆಂದು ತಿಳಿಯಬೇಕು. ಮಲವು ಹಳದಿ ಹಸರು ಕೂಡಿದ್ದೂ ನೀರುನೀರಾದ್ದೂ ಬಿಸಿಯೂ ದುರ್ಗಂಧಿಯೂ ಆದದ್ದೂ ಇದ್ದರೆ ಪಿತ್ತಾಧಿಕ್ಯವೆಂದು ತಿಳಿಯಬೇಕು. ಬಿಳಿದಾಗಿಯೂ ಅವುಳ್ಳದ್ದಾಗಿಯೂ ಇದ್ದರೆ ಕಫಾಧಿಕ್ಯವೆಂದು ತಿಳಿಯಬೇಕು. ಮಲವು ಅಪಕ್ವವಾಗಿ ಝಾಡಿಸಿದರೆ ಅಜೀರ್ಣವೆಂದೂ ಮಿಶ್ರಬಣ್ಣದ್ದಿದ್ದು ರಕ್ತ ಕೂಡಿದ್ದರೆ ಸನ್ನಿಪಾತವೆಂದೂ ತಿಳಿಯಬೇಕು.

**ನಾಲಿಗೆ :** ಒಡೆದು ಹುರುಬರಕಾಗಿದ್ದರೆ ವಾತವು. ಕೆಂಪೂ ಕಪ್ಪೂ ಇದ್ದರೆ ಪಿತ್ತವು. ಬೆಳ್ಳಗಾಗಿ ಒಮ್ಮೆ ಹಸಿಯಾಗಿಯೂ ಒಮ್ಮೆ ಒಣಗಿದಂತೆಯೂ ಕಂಡರೆ ಕಫವು. ಕೋರೀ ಹುಳದಂತೆ ಕಪ್ಪಾಗಿ ಒರಟಾಗಿದ್ದರೆ ಸನ್ನಿಪಾತವೆಂದು ಊಹಿಸಬೇಕು.

**ಕಣ್ಣುಗಳು :** ಬೂದಿಯ ಬಣ್ಣದವೂ ಚಂಚಲವಾದವೂ ಕಂಡರೆ ವಾತವು. ಅರಿಸಿಣ ಇಲ್ಲವೆ ಕೆಂಪು ಬಣ್ಣದವಿದ್ದು ಬೆಳಕು ನೋಡಗೊಡದಿದ್ದರೆ ಪಿತ್ತವು. ಬೆಳಗಾಗಿ ನೀರೂ ಪಿಚ್ಚೂ ಇದ್ದರೆ ಕಫವು.

**ರೂಪವು :** ರೂಪವನ್ನು ಮುಂಜಾನೆಯೇ ಪರೀಕ್ಷಿಸಬೇಕು. ಮೋರೆಯೂ ಅವಯವಗಳೂ ಕಪ್ಪಿನ ಮೇಲಿದ್ದು ನಿಸ್ತೇಜವಾಗಿ ಕಂಡರೆ ವಾತವು. ತುಸು ದದ್ದರಿಸಿದಂತೆಯೂ ಅರಿಸಿಣ ಬಣ್ಣದ್ದಾಗಿಯೂ ಕಂಡರೆ ಪಿತ್ತವು. ಬೆಳ್ಳಗಿದ್ದು ಎಣ್ಣೆಯಾಡುವಂತಿದ್ದರೆ ಅಥವಾ ಸಪ್ಪಗೆ ಕಾಣುತ್ತಿದ್ದರೆ ಕಫವು.

**ಶಬ್ದವು :** ಶಬ್ದಗಳು ಮೆಲ್ಲಕೆ ಹೊರಡುತ್ತಿದ್ದರೆ ವಾತವು. ಸ್ಪಷ್ಟವಾಗಿ ಕೇಳಿಸಿದರೆ ಪಿತ್ತವು. ಮೆಲ್ಲಕಿದ್ದು ಘೊರಘೊರ ಶಬ್ದವಾದರೆ ಕಫವೆಂದು ತಿಳಿಯಬೇಕು.

**ಸ್ಪರ್ಶವು :** ಮೈ ಹಿಡಿದು ನೋಡಲು ಹುರುಬರಕಾಗಿ ಹತ್ತಿದರೆ ವಾತವು. ಬಿಸಿಯಾಗಿ ಹತ್ತಿದರೆ ಪಿತ್ತವು. ತಣ್ಣಗಾಗಿ ಬೆವರಿದಂತೆ ಹತ್ತಿದರೆ ಕಫಪ್ರಕೋಪವೆಂದು ಊಹಿಸಬೇಕು.

ವಿಶೇಷ ಲಕ್ಷಣಗಳನ್ನು ಆಯಾ ರೋಗದ ಹತ್ತರ ಕೊಟ್ಟಿರುತ್ತದೆ.

## ವೈದ್ಯರೂ ರೋಗಿಗಳೂ

ವೈದ್ಯರು, ಗುರುಗಳ೧ ಸನ್ನಿಧಿಯಲ್ಲಿ ಚನ್ನಾಗಿ ವಿದ್ಯಾಭ್ಯಾಸ ಮಾಡಿದವರೂ ಅಮೃತ ಹಸ್ತಿಗಳೂ (ಒಳ್ಳೇ ಕೈಗುಣದವರೂ) ಉಪಚಾರ ಮಾಡುವದರಲ್ಲಿ ಚತುರರೂ ದುರಾಚಾರಹಿತರೂ ಧೈರ್ಯವಂತರೂ ಅಂತಃಕರಣವುಳ್ಳವರೂ ನಿರ್ವ್ಯಸನಿಗಳೂ ನಿರ್ಮಲರೂ ಆಗಿರಬೇಕು.

ಹಳ್ಳಿಪಳ್ಳಿಗಳಲ್ಲಿ ಮೇಲೆ ಹೇಳಿದ ಎಲ್ಲ ಲಕ್ಷಣಗಳುಳ್ಳ ವೈದ್ಯರು ಸಿಗುವದು ಅಶಕ್ಯವು. ಗ್ರಂಥಗಳನ್ನೋದಿ ಅನುಭವವನ್ನು ತೆಗೆದುಕೊಂಡು ಸುಸ್ವಭಾವಿಗಳಾದವರು ಈ ವ್ಯವಸಾಯವನ್ನು ಮಾಡಹತ್ತಿದ್ದರೂ ಅಡ್ಡಿಯಿಲ್ಲ. ಇಂಥವರ ಹತ್ತರ ಔಷಧವನ್ನು ತೆಗೆದುಕೊಳ್ಳಬಹುದು. ಇಲ್ಲವೆ ವಂಶಪರಂಪರಾ ಈ ವ್ಯವಸಾಯವನ್ನು ಮಾಡುತ್ತಿದ್ದರೂ ಬಾಧಕವಿಲ್ಲ.

ಜನಿತಾ ಚೋಪನೇತಾ ಚ ಯಶ್ಚ ವಿದ್ಯಾಂ ಪ್ರಯಚ್ಛತಿ ।
ಅನ್ನದಾತಾ ಭಯತ್ರಾತಾ ಪಂಚೈತೇ ಪಿತರಃ ಸ್ಮೃತಾಃ ||

"ಹಡೆದವನೂ ಮುಂಜಿಯನ್ನು– ಬ್ರಹ್ಮವಿದ್ಯಾದಾನವನ್ನು– ಮಾಡಿದವನೂ ವ್ಯವಹಾರೋಪಯೋಗಿ ವಿದ್ಯೆಯನ್ನು ಕಲಿಸಿದವನೂ ಅನ್ನವನ್ನು ಕೊಟ್ಟವನೂ ಅಂಜಿಕೆ ಬಂದಾಗ ಕಾಯ್ದವನೂ ಈ ಐದು ಜನರೂ ತಂದೆಗಳೇ" ಎಂದು ಸ್ಮೃತಿ ವಚನವದೆ. ಮರಣದ ಅಂಜಿಕೆಯಗಿಂತ ಹೆಚ್ಚಿನ ಅಂಜಿಕೆ ಯಾವದು ? ಬೇನೆ ಬಂದಾಗ ನಾನು ಸಾಯುವೆನೆಂದ್ರೆ ಅಂಜಿ ಮನುಷ್ಯನು ವೈದ್ಯನ ಹತ್ತರ ಹೋಗುತ್ತಾನೆ. ಅಂಥಾ ಪ್ರಾಣಸಂಕಟದಿಂದ ರಕ್ಷಿಸಿದವರ ಯೋಗ್ಯತೆಯು ಎಷ್ಟೆಂದು ಹೇಳಬೇಕು. ಡಾಕ್ಟರರೇ ಆಗಲಿ, ವೈದ್ಯರೇ ಆಗಲಿ ತಮ್ಮ ವ್ಯವಸಾಯವನ್ನು ಕರ್ತವ್ಯಜ್ಞಾನಪೂರ್ವಕ ಮಾಡುತ್ತಿದ್ದರೆ ಸಾಕು. ಅವರ ಮೇಲೆ ರೋಗಿಯು ವಿಶ್ವಾಸವಿಡಲಿಕ್ಕೆ ಅಡ್ಡಿ ಇಲ್ಲ. ಸಂಪೂರ್ಣ ವಿಶ್ವಾಸದಿಂದೇ ಎಷ್ಟೋ ರೋಗಗಳು ಹೋಗುತ್ತವೆ. 'ವಿಶ್ವಾಸಃ ಫಲದಾಯಕಃ' ಅಂಬುವ ವಚನದ ರಹಸ್ಯವಾದರೂ ಇದೇ ಇರುವದು.

ಎಂಥ ಸುಶಿಕ್ಷಿತ ಹಾಗು ಪ್ರಾಮಾಣಿಕ ವೈದ್ಯನಾದರೂ ಎಷ್ಟು ಮಾಡಬಲ್ಲನು ?

ವ್ಯಾಧೇಸ್ತತ್ವಪರಿಜ್ಞಾನಂ ವೇದನಾಯಾಶ್ಚ ನಿಗ್ರಹಃ ।
ಏತದ್ವೈದ್ಯಸ್ಯ ವೈದ್ಯತ್ವಂ ನ ವೈದ್ಯಃಪ್ರಾಣರಕ್ಷಕಃ ||

---

೧ ಗುರೋರಧೀತಾಖಿಲವೈದ್ಯವಿದ್ಯಃ ।
ಪೀಯೂಷಪಾಣಿಃ ಕುಶಲಃ ಕ್ರಿಯಾಸು ॥
ಗತಸ್ಪೃಹೋ ಧೈರ್ಯಧರಃ ಕೃಪಾಲುಃ ।
ಶುದ್ಧೋಽಧಿಕಾರೀ ಭಿಷಗೀದೃಶಃ ಸ್ಯಾತ್ ॥ (ಲೋಲಿಂಬರಾಜ)

“ಬೇನೆಯು ಇಂಥಹದೇ ಎಂಬ ಅದರ ರಹಸ್ಯವನ್ನು ತಿಳಕೊಂಬುವದೂ ಇದ್ದ ನೋವನ್ನು ಕಡಿಮೆ ಮಾಡುವದೂ ಇಷ್ಟೇ ಅವನ ಕರ್ತವ್ಯವು; ಜೀವವನ್ನು ಉಳಿಸಲೇ ಬೇಕೆಂದರೆ ಆಗುವ ಸಂಭವವಿಲ್ಲ.” ಘಡಿಯಾಳ ದುರಸ್ತು ಮಾಡುವವನು ಒಳಗಿನ ಯಂತ್ರಗಳಲ್ಲಿ ತುಸು ಹೆಚ್ಚು ಕಡಿಮೆ ಇದ್ದರೆ ಅದನ್ನು ತಿದ್ದುವನು, ಒಂದು ಅವಯವವೂ ಹೋಗಿದ್ದರೆ ಅದನ್ನು ಹಾಕುವನು, ಪ್ರಾಯಃ ಎಲ್ಲ ಅಂಗಗಳು ಶಿಥಿಲವಾಗಿದ್ದರೆ ಅವನ ಆಟವೇನು ನಡಿಯುವದು ?

ಇನ್ನು ಕೆಲವರು ವೈದ್ಯಕೀಯ ಮೇಲಿಂದ ಬರೀ ಹೊಟ್ಟೆ ಹೊರೆಕೊಳ್ಳುವವರಿರುತ್ತಾರೆ; ಅಂಥವರ ಮೇಲೆ ವಿಶ್ವಾಸವಿಡುವದು ಮಾತ್ರ ತುಸು ಭಯಂಕರವು. ‘ಕೋಠೇ ಮಿಳೇನಾ ಭೀಕ ತರ ವೈದ್ಯಕೀ ಶಿಕ’ ಎಂದು ಮಹಾರಾಷ್ಟ್ರ ಭಾಷೆಯೊಳಗೊಂದು ಗಾದೆಯುಂಟಾಗಿದೆ. ಇದರ ಅಭಿಪ್ರಾಯವು ‘ಭಿಕ್ಷೆಯೂ ನಿನಗೆ ಎಲ್ಲಿಯೂ ಸಿಗದಾದರೆ ವೈದ್ಯಕೀಯವನ್ನು ಕಲಿ.’ ಇಂಥವರ ಗೊಡವಿಗೆ ಹೋಗಬಾರದು. ಕೆಲಕೆಲವರಂತೂ ತಮ್ಮ ಕೀರ್ತಿಯಾಗಬೇಕೆಂದು ಮೊದಲು ಅರಿಯದ ಬಡ ಪ್ರಾಣಿಯಾದ ರೋಗಿಗೆ ಸಂಜೇ ಮುಂದೆ ಅಫುವನ್ನೋ ಗಾಂಜಿಯನ್ನೋ ಮಾತ್ರೆ ರೂಪದಿಂದ ಕೊಟ್ಟು, ಮಧ್ಯ ರಾತ್ರಿಯ ಸುಮಾರಕ್ಕೆ “ಹೊಟ್ಟೆಯುಬ್ಬಿರುತ್ತದೆ, ಅಬರಖಬರು ಮಾತನಾಡುತ್ತಾನೆ, ನೀವೇ ದಯಮಾಡಿ ಉಳಿಸಬೇಕೆಂದು” ಮನೆಯವರು ಬಂದು ಹೇಳಿಕೊಳ್ಳಲು, ಅದಕ್ಕೇಕೆ ಯೋಚನೆ ? ನಾನು ತತ್ ಕ್ಷಣವೇ ಗುಣಮಾಡಿಸುತ್ತೇನೆ, ಎಂದು ಹೇಳಿ ಅಮಲಿನ ಉತಾರವಾದ ನಿಂಬೆ ಹಣ್ಣು ಮುಂತಾದ್ದು ಮಂತರಿಸಿದಂತೆ ನಟಿಸಿ ಕೊಟ್ಟುಬಿಡುತ್ತಾರೆ ? ಈ ಮಾರ್ಗದಿಂದ ಅವರಿಗೆ ಹಣವೂ ದೊರಕುತ್ತದೆ ! ಇಂಥವರು ಶಸ್ತ್ರವಿದ್ಯೆ ಬಲ್ಲವರಿದ್ದರಂತೂ ತೀರಿತು, ಮುಂದೆ ವಿಚಾರಿಸುವ ಕಾರಣವೇ ಇಲ್ಲ.

ಯೇ ಕ್ರಿಯಾಂ ವಿಕ್ರಿಯಾಂ ಕುರ್ವಂತ್ಯುಪೇಕ್ಷಂತೇ ಸ್ಖಲಂತಿ ವಾ ।
ಖಾದಂತಿ ತೇ ಪರಪ್ರಾಣಾನ್ನಿಜಾನಿ ಸುಕೃತಾನಿ ಚ ॥

“ಯಾರು ಮಾಡತಕ್ಕ ಕೆಲಸವನ್ನು ಅಡನಾಡು ಕೃತಿಯಿಂದ ಮಾಡಿ ಕೆಡಿಸುವರೋ ಯಾರು ಇರಲಿ, ಮಾಡಿದರೆ ಬಂದೀತು, ಎಂದು ತಿರಸ್ಕಾರ ಇಲ್ಲವೆ ಉದಾಸೀನತೆಯನ್ನು ತೋರಿಸುವರೋ ಯಾರು ಪ್ರಮಾದದಿಂದ ತಪ್ಪಿಯೇ ಬಿಡುತ್ತಾರೋ ಅವರು ಬೇರೆಯವರ ರೋಗಿಗಳ ಪ್ರಾಣಗಳನ್ನೂ ತಮ್ಮ ಕೀರ್ತಿಯನ್ನೂ ಮಣ್ಣುಗೂಡಿಸುತ್ತಾರೆ” ಎಂದು ರಸರತ್ನ ಸಮುಚ್ಚಯಕಾರರು ಅಂದಿರುವದು ಲಕ್ಷ್ಯದಲ್ಲಿಡತಕ್ಕದ್ದಾಗಿದೆ.

ರೋಗಿಗಳೂ ನೆನಪಿನಲ್ಲಿಡತಕ್ಕ ಮಾತು ಎಷ್ಟೋ ಅವೆ. ಬಹುಶಃ ರೋಗವು ತನ್ನ ಅಪರಾಧದ ಫಲವೇ ಇರುತ್ತದೆ. ಬೇನೆಯ ನಿವಾರಣಕ್ಕೆ ಅವರು ಉಪಾಯ ಮಾಡದೆ, ಅದು ಬೆಳೆಯುವದಕ್ಕೆ ಸಾಧನವಾದ ಸ್ವೇಚ್ಛಾವಿಹಾರವನ್ನೇ ಅವರು ನಡಿಸಿರುವದು, ಎಷ್ಟೋ ಕಡೆಗೆ ಕಂಡುಬರುವ ಮಾತಾಗಿದೆ. ಮಗನ ಮದುವೆಗೆ ಸಾವಿರ ರೂಪಾಯಿ ಖರ್ಚು ಮಾಡುವವನು ಮಗನ ಕ್ಷಯರೋಗ ಚಿಕಿತ್ಸೆಗೆ ಸಾವಿರ ಕವಡೆಗಳನ್ನು

ವೆಚ್ಚ ಮಾಡಲಾರನು. ತಲೆಯು ಮೇಲ್ಭಾಗವು ಹೊಲಸಾದರೆ-ಕಸ್ಟವು ಬೆಳೆದರೆ,- ಅದನ್ನು ಸ್ವಚ್ಛ ಮಾಡುವದಕ್ಕೆ ಕ್ಷೌರದವನನ್ನು ಹುಡುಕುವದರಲ್ಲಿ ಮಾಡುವ ಯತ್ನ ವನ್ನೂ ಖರ್ಚನ್ನೂ ತಲೆಯ ಒಳಭಾಗವು ಹೊಲಸಾದಾಗ್ಗೆ- ಮಿದುಳು ಕೆಟ್ಟಾಗ್ಗೆ ವೈದ್ಯರನ್ನು ಹುಡುಕುವದರಲ್ಲಿಯೂ ಔಷಧವನ್ನು ಕೊಂಡುಕೊಳ್ಳುವದರಲ್ಲಿಯೂ ಮಾಡುತ್ತಿರುವದಿಲ್ಲವೆಂಬದನ್ನು ಹಲವು ಕಡಿಗೆ ನೋಡಿದರೆ ದುಃಖಕರುಣಾಮಿಶ್ರಿತವಾದ ಆಶ್ಚರ್ಯವಾಗುತ್ತದೆ.

ರೋಗಿಗಳು ಹಕ್ಕಿಗಳಂತೆ ಇತ್ತಿಂದತ್ತ ಅತ್ತಿಂದಿತ್ತ ತಿರುಗಾಡದೆ, ತಮ್ಮ ವಿಚಾರ ದಿಂದಾಗಲಿ ಆಪ್ತವಚನದಿಂದಾಗಲಿ ಒಬ್ಬ ವೈದ್ಯನನ್ನೋ ಡಾಕ್ಟರನನ್ನೋ ಗೊತ್ತು ಮಾಡಿಕೊಂಡು ಅವನ ಮೇಲೆ ಸಂಪೂರ್ಣ ವಿಶ್ವಾಸವನ್ನಿಟ್ಟು ಔಷಧವನ್ನು ತೆಗೆದು ಕೊಳ್ಳಬೇಕು. ಶುಶ್ರೂಷೆಗೆ ಎಲ್ಲ ಕಾಳಜಿಯ ಜನರನ್ನು ಇಟ್ಟುಕೊಂಡಿರಬೇಕು. ಕೈ ಸಡಿಲು ಬಿಟ್ಟು ವೆಚ್ಚ ಮಾಡಬೇಕು. ಬಾಯಿ ಬಿಗಿ ಹಿಡಿದು ಪಥ್ಯ ಮಾಡಬೇಕು. ಅಂದರೆ ದೇವರು ಆರೋಗ್ಯವನ್ನುಂಟು ಮಾಡದೆ ಇರನು.

ಕೆಲಕೆಲ ಹಳ್ಳಿಗಾಡ ಜನರು ಡಾಕ್ಟರರ ಕಣ್ಣಿಗೆ ಇಂಗು ಹಚ್ಚಿದೆವೆಂದು ತಿಳಿದು ಹೊರಟು ಹೋಗುತ್ತಾರೆ. ಆ ಹುಂಬರಿಗೆ ಕೋರ್ಟ ದಾವೆಗಳೂ ಸಹ ಗೊತ್ತಿರುವದಿಲ್ಲ. ಡಾಕ್ಟರರು ದಾವಾ ತಂದು ತಮ್ಮ ಹಣವನ್ನು ವಸೂಲ ಮಾಡಿಕೊಂಡಾಗ್ಗೆ ಆ ಕೆಂಚರ ಕಣ್ಣು ತೆರೆಯುತ್ತವೆ. ಕೆಲವರು ವೈದ್ಯರಿಗೆ ಹೀಗೆ ಕೈತೋರಿಸಿ ಮಾತ್ರ ಲಾಭವನ್ನು ಮಾಡಿಕೊಳ್ಳುತ್ತಾರೆ. ಈ ವೈದ್ಯರಿಗೆಲ್ಲೀ ದಾವೆ ? ಕೆಲವರಂತೂ ನಡುವೆ ಔಷಧವನ್ನು ಬಿಟ್ಟು, ನಮಗೆ ಕರೆವ್ವನಿಂದ ಗುಣವಾಯಿತು, ಭರಮಪ್ಪನಿಂದ ಗುಣಬಂದಿತು ಎಂದು ವೈದ್ಯರಿಗೆ ಹೇಳುವದುಂಟು. ಈ ಪ್ರಕಾರವು ತಿರಸ್ಕರಣೀಯವೆಂದು ಬೇರೆ ಹೇಳುವ ಪ್ರಯೋಜನವಿಲ್ಲ.

ರೋಗಿಯು ವಿಶ್ವಾಸದಿಂದ ವೈದ್ಯರ ಕಡೆಯಿಂದ ಔಷಧವನ್ನು ತಕ್ಕೊಂಡು ಅವರು ಹೇಳಿದಂತೆ ನಡಕೊಳ್ಳಬೇಕು. ವೈದ್ಯರೂ ರೋಗಿಗಳನ್ನು ಮಕ್ಕಳಂತೆ ಜಾಗ್ರತೆ ಯಿಂದ ಉಪಚರಿಸಬೇಕು. ತಮಗೆ ತಿಳಿಯದ ವಿಷಯದಲ್ಲಿ ದುರಭಿಮಾನಕ್ಕೆ ಬೀಳದೆ, ತಮಗಿಂತ ವಿದ್ವಾಂಸರೂ ಅನುಭವಿಕರೂ ಆದವರ ಕಡಿಗೆ ಅವರನ್ನು ಕಳುಹಿಸಬೇಕು. ರೋಗಿಗಳೂ ತಮ್ಮ ಜೀವದಾನ ಮಾಡಿದವರೆಂದು ತಿಳಿದು ಕೊಡುವದನ್ನು ಕೊಟ್ಟು ಕೃತಜ್ಞತೆಯಿಂದ ವೈದ್ಯರನ್ನು ಮನ್ನಿಸಬೇಕು.

ಅನಾಥಾನ್ರೋಗಿಣೋ ವೈದ್ಯಃ ಪುತ್ರವತ್ಸಮುಪಾಚರೇತ್ ।
ಪ್ರಾಣಾಚಾರ್ಯಶ್ಚ ಪಿತೃವತ್ಸಂಪೂಜ್ಯಃ ಶಕ್ತಿಭಕ್ತಿತಃ ॥

---

# ರೋಗಗಳೂ ಚಿಕಿತ್ಸೆಯೂ

## ಅಜೀರ್ಣ

ಪಚನೇಂದ್ರಿಯ, ಪಾಚಕರಸ, ಅನ್ನ ಇವುಗಳಲ್ಲಿ ಏನಾದರೂ ಹೆಚ್ಚುಕಡಿಮೆಯೂ ಆಯಿತೆಂದರೆ ಅಜೀರ್ಣ ರೋಗವು ಹುಟ್ಟುತ್ತದೆ. ನಾಲಿಗೆ ಸವಿಯಿಂದ ಮನಸ್ಸಿಗೆ ಬಂದಂತೆ ಊಟ ಮಾಡುವದು, ಚನ್ನಾಗಿ ಬೇಯದೆ ಇರುವಂಥ ಅಡಿಗೆಯನ್ನೂ ಹಸಿ ಕಾಯಿಕಸರನ್ನೂ ತಿನ್ನುವದು, ಜಡವಾದ ಇಲ್ಲವೆ ನಿಸ್ಸತ್ವವಾದ ಅನ್ನವನ್ನು ತಿನ್ನುವದು, ಮೇಲಿಂದಮೇಲೆ ಉಣ್ಣುವದು, ಬಹಳ ಹೊತ್ತಿನ ವರೆಗೆ ಉಣ್ಣದಿರುವದು, ತುತ್ತುಗಳನ್ನು ಹಲ್ಲಿನಿಂದ ಸಣ್ಣಾಗಿ ಅರೆದು ತಿನ್ನದೆ ಗಪಗಪಾ ನುಂಗುವದು, ಊಟ ಮಾಡುವಾಗ್ಗೆ ಬಹಳ ನೀರು ಕುಡಿಯುವದು ಇಲ್ಲವೆ ನೀರು ಬಿಟ್ಟುಬಿಡುವದು, ಉಂಡ ಕೂಡಲೆ ನಿದ್ದೆ ಮಾಡುವದು, ನಿದ್ದೆ ತರಬುವದು, ವೇಳೆವೇಳೆಗೆ ಶೌಚಮೂತ್ರಗಳಿಗೆ ಹೋಗದಿರುವದು, ಸಿಟ್ಟು, ಅಂಜಿಕೆ, ಹೊಟ್ಟೇಕಿಚ್ಚು, ಚಿಂತೆ, ಸಂತೋಷ, ಕೆಲಸದ ಗಡಿಬಿಡಿ ಮುಂತಾದ ಮನೋವಿಕಾರಗಳು ಹೆಚ್ಚಿದ್ದಾಗ್ಗೆ ಉಣ್ಣುವದು, ಉಂಡಕೂಡಲೆ ಬಹಳ ಶ್ರಮ ಮಾಡುವದು ಇವುಗಳಿಂದಲೂ ಸಾರಾಯಿ, ಚಹಾ, ಕಾಫಿ, ಅಫು, ಭಂಗಿ, ಹೊಗೆಸಪ್ಪು ಮುಂತಾದವುಗಳ ಅತಿ ಸೇವನದಿಂದಲೂ ವ್ಯಸನಗಳಿಂದಲೂ ಯಕೃತ್, ಪ್ಲೀಹಾ (ಅಡಗೆ) ಗರ್ಭಸಾನ, ಮಿದುಳು, ರಕ್ತಾಶಯ ಇವುಗಳ ರೋಗದಿಂದಲೂ ವಾತಾದಿಗಳು ಕುಪಿತವಾಗಿ ಅಜೀರ್ಣವನ್ನುಂಟುಮಾಡುತ್ತವೆ. * ಮನೆಗೆ ತಳಗಲ್ಲಿನಂತೆ ಅಜೀರ್ಣವೇ ವಾಡಿಕೆಯಾಗಿ ಸರ್ವ ರೋಗಗಳಿಗೆ ಆಧಾರವಾಗಿದೆ.೧

ಅಜೀರ್ಣವು ಕ್ಷುಲ್ಲಕವೆಂದು ತೋರುತ್ತದೆ; ಒಮ್ಮೊಮ್ಮೆ ಬೇಗನೆ ನೆಟ್ಟಗೂ ಆಗುತ್ತದೆ. ಆದರೆ ಒಮ್ಮೊಮ್ಮೆ ಭಯಂಕರ ಸ್ವರೂಪವನ್ನು ತಾಳಿ೨ ಜೀವದ ಮೇಲೇ ಬರುತ್ತದೆ.

---

* ಪ್ರಾಯೇಣಾಹಾರವೈಷಮ್ಯಾದಜೀರ್ಣಂ ಜಾಯತೇ ನೃಣಾಮ್ ‖
ಅತ್ಯಂಬುಪಾನಾದ್ವಿಷಮಾಶನಾಚ್ಚ, ಸಂಧಾರಣಾತ್ಸ್ವಪ್ನವಿಪರ್ಯಯಾಚ್ಚ ‖
ಕಾಲೇಪಿಸಾತ್ಮ್ಯಂಲಘುಚಾಪಿ ಭುಕ್ತಮನ್ನನ್ನಪಾಕಂ ಭಜತೇ ನರಸ್ಯ ‖
ಈರ್ಷ್ಯಾಭಯಕ್ರೋಧಪರಿಕ್ಷತೇನ ಲುಬ್ಧೇನ ಶುಗ್ದೈನ್ಯನಿಪೀಡಿತೇ ನ ‖
ಪ್ರದ್ವೇಷಯುಕ್ತೇ ನ ಚ ಸೇವ್ಯಮಾನಮನ್ನನ್ನಸಮ್ಯಸ್ಪರಿಪಾಕಮೇತಿ ‖

೧. ಅನಾತ್ಮವಂತಃ ಪಶುವದ್ಭುಂಜತೇಽಶನಲೋಲುಪಾಃ ‖
ರೋಗಾನೀಕಸ್ಯತೇ ಮೂಲಮಜೀರ್ಣಂ ಪ್ರಾಪ್ನುವಂತಿಹಿ ‖

೨. ಮೂರ್ಛಾಪ್ರಲಾಪೋ ವಮಥುಃ ಪ್ರಸೇಕಃ ಸದನಂ ಭ್ರಮಃ ‖
ಉಪದ್ರವಾಭವಂತ್ಯೇತೇಮರಣಂ ಚಾಪ್ಯಜೀರ್ಣತಃ ‖ (ನಿಘಂಟುರತ್ನಾಕರ)

ವಾತಾಧಿಕ್ಯವಿದ್ದರೆ ಮೈಮುರಿಯುವದು, ಕಮರದೇಗು, ಹೊಟ್ಟೆಯುಬ್ಬಿ ಎದೆ ಗುಂಡಿಗೆಗಳಲ್ಲಿ ನೋವಾಗುವದು, ಅಧೋವಾಯುಗಳು ಹೋಗುವದು ಮನಸ್ಸು ಚಂಚಲವಾಗಿ ಸಮಾಧಾನವಿಲ್ಲದಂತಾಗುವದು, ತಲೆನೋವು; ಈ ಲಕ್ಷಣಗಳಾಗುತ್ತವೆ.

ಪಿತ್ತಾಧಿಕ್ಯವಿದ್ದರೆ ಹೊಟ್ಟೆಯುಬ್ಬಾಡಿಸುವದು, ವಾಂತಿ, ಮೂರ್ಛೆ, ಹುಳಿಸುಡುವದು, ಹೊಟ್ಟೆಯೊಳಗೂ ಕುತ್ತಿಗೆಯೊಳಗೂ ಉರಿಯುವದು, ಜ್ವರ, ನೀರಡಿಕೆ ಈ ಲಕ್ಷಣಗಳಾಗುವವು.

ಕಫಾಧಿಕ್ಯವಿದ್ದರೆ ಬೆಳ್ಳಗೆ ಅನ್ನಗೂಡಿ ಹೊಟ್ಟೆಯುಬ್ಬಾಡಿಸುವದು, ಮೋರೆ ದದ್ದರಿಸಿದಂತೆ ಕಾಣುವದು, ಕೈಕಾಲು ತಣ್ಣಗಾಗುವದು, ಬಾಯಿ ನೀರು ಬಿಡುವದು, ಮಬ್ಬು, ಹೊಟ್ಟೆ ಸ್ತಬ್ಧವಾಗಿರುವದು ಈ ಲಕ್ಷಣಗಳಾಗುತ್ತವೆ.

ಎಲ್ಲ ದೋಷಗಳು ಕೂಡಿದ್ದರೆ ಲಕ್ಷಣಗಳೂ ಕೂಡಿರುತ್ತವೆ. ನಿದ್ದೆ ಚನ್ನಾಗಿ ಹತ್ತದೆ ರೋಗಿಯು ಒಡಬಡಿಸಿ ಅಂಜಿ ಏಳುತ್ತಾನೆ. ಮನಸ್ಸು ವ್ಯಗ್ರವಾಗಿ ಅವನ ಮೇಲೆ ಸಂಕಟವೇ ಬಂದಂತೆ ಭಾಸವಾಗುತ್ತದೆ. ಒಮ್ಮೊಮ್ಮೆ ರೋಗಿಯು ಬೇಸತ್ತು ಆತ್ಮಹತ್ಯೆಯನ್ನೂ ಮಾಡಿಕೊಳ್ಳಲಿಕ್ಕೆ ಏಳುತ್ತಾನೆ.

ಒಬ್ಬೊಬ್ಬರಿಗೆ ಹೊಕ್ಕಳದಿಂದ ಗಂಟು ಎದ್ದಂತಾಗಿ ಎದೆಗೆ ಏರುತ್ತದೆ. ಮಲಶುದ್ಧಿಯಾಗುವದಿಲ್ಲ. ಕಾರಿಕೆ ಪ್ರಾರಂಭವಾಗುತ್ತದೆ.

ನಾಲಿಗೆಯ ಮೇಲೆ ಬಿಳೇ ತೆಪ್ಪ ಕೂತಿರುತ್ತದೆ. ಕೆಲವರಿಗೆ ಕೆಂಪಗಿನ ಗುಳ್ಳಿಗಳೆದ್ದಿರುತ್ತವೆ.

ಬಸರು ಹೆಂಗಸರಿಗೂ ಓಕರಿಕೆ ಮುಂತಾದ ಕೆಲವು ಲಕ್ಷಣಗಳಾಗುತ್ತಿರುವದರಿಂದ ಔಷಧ ಕೊಡುವವರು ಜಾಗ್ರತೆಯಿಂದ ಪರೀಕ್ಷೆ ಮಾಡಿ ಕೊಡಬೇಕು. ಅಜೀರ್ಣಕ್ಕೆ ಕೊಡುವ ಔಷಧಗಳೆಲ್ಲ ಉಷ್ಣವಿರುತ್ತವೆ. ಅವುಗಳನ್ನು ಗರ್ಭಿಣಿಯರಿಗೆ ಕೊಟ್ಟರೆ ಗರ್ಭಸ್ರಾವವಾಗುವ ಸಂಭವವದೆ.

**ಉಪಚಾರವು :** ಮೊದಲು ಅಜೀರ್ಣದ ಕಾರಣಗಳನ್ನು ನಿರೋಧಿಸಬೇಕು. ಜುಲಾಬೂ ವಾಂತಿಯೂ ಆಗುತ್ತಿದ್ದರೆ ಒಮ್ಮೆಲೇ ಬಂದ ಮಾಡಬಾರದು. ದೋಷವು ಹೊರಗೆ ಹೋಗುವದು ಯೋಗ್ಯವೇ. ಮಲಬದ್ಧವಾಗಿದ್ದರೆ ಸೌಮ್ಯವಾದ ಜುಲಾಬಿನ ಔಷಧವನ್ನು ಕೊಡಬೇಕು. ಅಳಲೇಕಾಯಿ ಮೇಲಿನ ತೊಗಟೆ, ಕೋತಂಬರೀ ಬೀಜ, ಮೆಣಸು, ಅಜವಾನ, ಸೈಂಧವಲವಣ ಪ್ರತಿಯೊಂದು ಪಾವಲೆ ತೂಕ ತೆಗೆದುಕೊಂಡು ಒಂದು ರೂಪಾಯಿ ತೂಕ ನೆಲ್ಲವರಿ ಇಲ್ಲವೆ ಸೋನಾಮುಖಿಯನ್ನು ಕೂಡಿಸಿ ಕುಟ್ಟಿ ಸೋಸಬೇಕು. ಈ ಚೂರ್ಣವನ್ನು ಅವರವರ ಶಕ್ತಿ ನೋಡಿ ½ ತೊಲಿ ತೂಕದಿಂದ ೧½ ತೊಲಿ ವರೆಗೆ ತಕ್ಕೊಂಡು ೫ ತೊಲಿ ಬಿಸಿ ನೀರಿನಲ್ಲಿ ಹಾಕಿ ಕುಡಿಸಿದರೆ ಮಲ ಶುದ್ಧಿಯಾಗುತ್ತದೆ. ೫ ತೊಲಿ ಬಿಸಿ ನೀರಿನಲ್ಲಿ ೧ ತೊಲಿಯಿಂದ ೨ ತೊಲಿ ವರೆಗೆ ಔಡಲ ಎಣ್ಣೆಯನ್ನು ಕೊಡಬೇಕು; ಸೌಮ್ಯರೇಚನವಾಗುತ್ತದೆ.

೧. **ಹಿಂಗ್ವಷ್ಟಕ**[೧] (ಇಂಗಾಷ್ಟಕ) : ಹುರಿದ ಇಂಗು, ಜೀರಿಗೆ, ಕಾಜೀರಿಗೆ, ಅಜವಾನ, ಶುಂಠಿ, ಮೆಣಸು, ಸಣ್ಣ ಹಿಪ್ಪಲಿ, ಸೈಂಧವಲವಣ ಇವುಗಳ ಚೂರ್ಣವನ್ನು ಮಾಡಿ ರೋಗಿಯ ಶಕ್ತಿಗನುಸರಿಸಿ ೧ ಚವಲ ತೂಕದಿಂದ ೧ ಪಾವಲಿ ತೂಕದ ವರೆಗೆ ಕೊಡಬೇಕು. ಹಸಿವೆ ಕಡಿಮೆ ಇದ್ದರೆ ಇದನ್ನು ತುಪ್ಪಾ ಅನ್ನದ ಮೇಲೆ ಹಾಕಿಕೊಂಡು ಉಣ್ಣಬೇಕು. ಇದೇ ಪುಡಿಯನ್ನು ಅಲ್ಲದ ಇಲ್ಲವೆ ನಿಂಬೇರಸದಲ್ಲಿ ಗುಳಿಗೇ ಮಾಡಿ ಇಡುವದೂ ಉಂಟು.

೨. **ವಡವಾನಲ ಚೂರ್ಣ :** ಸೈಂಧವ, ಹಿಪ್ಪಲೀಬೇರು, ಸಣ್ಣಹಿಪ್ಪಲಿ, ಚವ್ಯ, ಚಿತ್ರಮೂಲ, ಶುಂಠಿ, ಎಳೆ ಅಳಲೇಕಾಯಿ, ಇವುಗಳನ್ನು ಕ್ರಮವೃದ್ಧಿಯಿಂದಾ (ಸೈಂಧ ಒಂದು ಪಾಲು ಹಿಪ್ಪಲೀಬೇರು ಎರಡುಪಾಲು ಹೀಗೆ ಏಳನೇ ಜೀನಸು ಏಳು ಪಾಲು) ಕೂಡಿಸಿ ಚೂರ್ಣ ಮಾಡಿ ಶಕ್ತಿ ನೋಡಿ ಕೊಡಬೇಕು. ಇದರಿಂದ ಮಲ ಶುದ್ಧಿಯಾಗಿ ಹಸಿವೆಯು ಅಭಿವೃದ್ಧಿಯಾಗುತ್ತದೆ.

೩. **ವಿಶ್ವಾದಿಚೂರ್ಣ :** ಸುಂಟಿ, ಮೆಣಸು, ಹಿಪ್ಪಲಿ, ಕರೇವೀಳ್ಯದೆಲೆ, ಯಾಲಕ್ಕಿ, ಇವುಗಳನ್ನು ಕ್ರಮವೃದ್ಧಿಯಿಂದ ತೆಗೆದುಕೊಂಡು ಚೂರ್ಣ ಮಾಡಿ, ತೂಕಾತೂಕ ಸಕ್ಕರೆ ಕೂಡಿಸಿ ಶಕ್ತಿಗನುಸರಿಸಿ ಕೊಡಬೇಕು. ಹುಳಿಸುಡುವದು, ಓಕರಿಕೆ, ಅರುಚಿ, ಅಜೀರ್ಣದ ಗಂಟು ನಾಶವಾಗುತ್ತವೆ.

೪. ಬಳ್ಳುಳ್ಳೀಬೇಳೆ, ಜೀರಿಗೆ, ಸೈಂಧವ, ಸಂಚಳಖಾರ, ಸುಂಟಿ, ಮೆಣಸು, ಹಿಪ್ಪಲಿ, ಇಂಗು ಇವುಗಳನ್ನೆಲ್ಲ ಸಮವಾಗಿ ತಕ್ಕೊಂಡು ಚೂರ್ಣ ಮಾಡಿ ನಿಂಬೇಹುಳಿಯಲ್ಲಿ ಗುಳಿಗೆಗಳನ್ನು ಮಾಡಬೇಕು. ೧ ಚವಲಿ ತೂಕ ಗುಳಿಗೆಯನ್ನು ಮುಂಜಾನೆ ಸಂಜೆಗೆ ತಕ್ಕೊಂಡು ಮೇಲೆ ಬಿಸಿ ನೀರು ಕುಡಿಯಬೇಕು. ಇದರಿಂದ ಅಜೀರ್ಣದಿಂದ ಎದೆಗೆ ಗಂಟು ಏರುವದೂ ಬೇರೆ ವಾತವಿಕಾರಗಳೂ ಕಡಿಮೆಯಾಗುತ್ತವೆ.[೨]

೫. ಗಜಗದ ಬೀಜ ೧ ತೊಲಿ, ಸುಂಠಿ ೧ ತೊಲಿ, ಸಂಚಳಖಾರ ½ ತೊಲಿ, ಹುರಿದ ಇಂಗು, ½ ತೊಲಿ ಇವುಗಳನ್ನು ಪುಡಿ ಮಾಡಿ ನುಗ್ಗಿತೋಟಿಯ ರಸದಲ್ಲಿ ಚವಲ ತೂಕ ಗುಳಿಗೆ ಮಾಡಬೇಕು. ಇದರ ಸೇವನದಿಂದ ಅಜೀರ್ಣ, ಹೊಟ್ಟೆಕಡಿತ, ಜಂತುಗಳು ನಾಶವಾಗುತ್ತವೆ.

---

೧. ತ್ರಿಕಟುಕಮಜಮೋದಾಸೈಂಧವಂ ಜೀರಕೇದ್ವೇ
ಸಮಚರಣಘೃತಾನಾಮಷ್ಟಮೋ ಹಿಂಗುಭಾಗಃ ॥
ಪ್ರಥಮಕವಲಭೋಜೀ ಸರ್ಪಿಷಾಚೂರ್ಣಮೇತಜ್ಜನಯತಿಜಠರಾಗ್ನಿಂ
ವಾತಗುಲ್ಮಸ್ನಿಹಂತಿ ॥ (ಭೈಷಜ್ಯರತ್ನಾವಲೀ)

೨. ಯಾವ ಔಷಧವನ್ನಾದರೂ ೨–೩ ದಿವಸ ಕೊಟ್ಟು ಗುಣವಾಗದಿದ್ದರೆ ಬದಲಿಸಬೇಕು. ಭಯಂಕರ ರೋಗದಲ್ಲಿ ೩–೪ ತಾಸಿಗೂ ಗುಣಾವಗುಣ ನೋಡಿ ಬದಲಿಸಬೇಕು.

ಅಜೀರ್ಣೋಪದ್ರವವು ಕಡಿಮೆ ಇದ್ದು ಹೊಟ್ಟೆ ಸಿಬ್ಬರದಂತೆ ಅನಿಸಿದರೆ, ಶುಂಠಿ ಜೀರಿಗೆ, ಹಿಪ್ಪಲಿಬೆಲ್ಲ, ಖಾರಗೆಣಸು, ಉಪ್ಪು, ಅಜವಾನ ಉಪ್ಪು ಇವುಗಳೊಳಗೆ ಸಿಕ್ಕದ್ದು ತೆಗೆದುಕೊಳ್ಳಬೇಕು. ಹಸಿವೆ ಕಡಿಮೆಯಿದ್ದರೆ ಊಟಕ್ಕೆ ಮೊದಲು ೧/೪ ತೊಲಿ ಸೋಡಾಪುಡಿಯನ್ನು ೫ ತೊಲಿ ನೀರಲ್ಲಿ ಕೂಡಿಸಿ ಕುಡಿಸಬೇಕು; ಹುಳಿಸುಡುವದು ಹೆಚ್ಚಿಗಿದ್ದರೆ ಊಟವಾದ ನಂತರ ಕುಡಿಸಬೇಕು.

ಹೊಟ್ಟೆ ಬೆನ್ನುಗಳ ನೋವಿಗೆ ತರ್ಪಣತೈಲವೆಂಬ ಎಣ್ಣೆಯನ್ನು ಹಚ್ಚಿ ತಿಕ್ಕಬೇಕು. ಎಕ್ಕಿ ಎಲೆಗೆ ಕೊಬ್ಬರಿ ಎಣ್ಣೆ ಹಚ್ಚಿ ಬಿಸಿ ಮಾಡಿ ಕಾಸಬೇಕು. ಲಕ್ಕೀ ತೊಪ್ಪಲವನ್ನು ಕುಟ್ಟಿ ಅರಿವೆಯಲ್ಲಿ ಪತ್ತವನ್ನು ಮಾಡಿ ಅವುಗಳಿಂದ ಕಾಸಬೇಕು.

ಆರೋಗ್ಯ ಸ್ಥಿತಿಯಲ್ಲಿರುವ ಹೆಂಗಸರಿಗೂ ಗಂಡಸರಂತೆಯೇ ಉಪಚಾರ ಮಾಡಬೇಕು. ಅವರು ಗರ್ಭವತಿಯರಾಗಿದ್ದರೆ ಮಾತ್ರ ಅತ್ಯುಷ್ಣ ಗುಣವುಳ್ಳ ಔಷಧಗಳನ್ನು ಕೊಡದೆ ಸೌಮ್ಯವಾದವುಗಳನ್ನೇ ಉಪಯೋಗಿಸಬೇಕು. ಗರ್ಭಿಣಿಗೆ ಅಜೀರ್ಣವಾದಂತೆ ಭಾಸವಾಗಿ ತುಸು ಊಟ ಮಾಡಿದ ನಂತರ ಹೊಟ್ಟೆಯಲ್ಲಿ ಉರಿಯುವದೂ ಹುಳಿ ಹುಟ್ಟಿ ತೇಗು ಬರುವದೂ, ಆದರೆ, ಬೇದಾಣೆ ೧/೪ ತೊಲಿ, ಚಿನ್ನೀಸಕ್ಕರೆ ೧/೩ ತೊಲಿ ಅಳಲೇಕಾಯಿ ತೋಟೆಯ ಚೂರ್ಣ ೧/೩ ಮಾಶಿ, ಕೂಡಿಸಿ ಕುಟ್ಟಿ ೧/೩ ತೊಲಿ ತೂಕ ಜೇನುತುಪ್ಪದಲ್ಲಿ ಊಟವಾದ ಬಳಿಕ ಕೊಡಬೇಕು. ಇದರಿಂದ ಗುಣವಾಗುವದು. ಹೊಟ್ಟೆ ಜಾಡಿಸುವದೂ ಕಾರುವದೂ ಇದ್ದರೆ, [1]ಸುಂಟಿ ೧ ಚವಲದ ತೂಕ, ಎಳೆ ಬೆಲಪತ್ರೇಕಾಯಿ ೧/೪ ತೊಲಿ ಜಜ್ಜಿ ೨೦ ತೊಲಿ ನೀರಿನಲ್ಲಿ ಕುದಿಸಿ ೫ ತೊಲೆಗೆ ಇಳಿಸಿ ಜವೆಗೋದಿಯ ಅರಳಿಟ್ಟನ್ನು (ಹುರಿದು ಮಾಡಿದ ಹಿಟ್ಟನ್ನು) ೧ ತೊಲಿ ಬೆರಿಸಿ ಕುಡಿಸಬೇಕು. ಅನುಭವಿಕರಾದ ವೃದ್ಧ ಹೆಣ್ಣು ಮಕ್ಕಳನ್ನು ಕೇಳಿ ಉಪಚರಿಸಬೇಕು.

ಹುಡುಗರಿಗೂ ದೊಡ್ಡವರ ಔಷಧವನ್ನೇ ಅಲ್ಪ ಪ್ರಮಾಣದಿಂದ ಕೊಡಬೇಕು, ಕೂಸುಗಳಿಗೆ ಅಜೀರ್ಣವಾದರೆ ತಾಯಂದಿರು ಪಥ್ಯದಿಂದಿರುವದಕ್ಕೂ ಔಷಧವನ್ನು ಸೇವಿಸುವದಕ್ಕೂ ಹೇಳಬೇಕು. [2]ಕೋತಂಬರೀ ಬೀಜ ೧/೮ ತೊಲಿ, ಸುಂಟಿ ೧/೧೬ ತೊಲಿ ತೂಕ ಹಾಕಿ ೧೦ ತೊಲಿ ನೀರಿನಲ್ಲಿ ಕಷಾಯ ಮಾಡಿ ೨ ೧/೩ ತೊಲಿಗೆ ಇಳಿಸಬೇಕು. ಅದರಲ್ಲಿ ಮತ್ತೆ ಸುಂಟಿ, ಮೆಣಸು, ಹಿಪ್ಪಲಿ, ಚಿತ್ರಮೂಲ, ಇವುಗಳನ್ನು ೧ ಗುಂಜಿಯಷ್ಟು ತೆಯ್ದು ೧ ಗುಂಜಿ ಜೀರಿಗೀ ಪುಡಿಯನ್ನು ಹಾಕಿ ಗುಟ್ಟೀ ಕುಡಿಸಬೇಕು. ಕೂಸುಗಳ ಪ್ರಕೃತಿಗೆ ಹಿತಕರವು.

---

೧ ಶುಂಠೀ ಬಿಲ್ವಕಷಾಯಂ ತು ಯವಸಕ್ತುಸಮನ್ವಿತಮ್ ।
ಗರ್ಭಿಣೀಂ ಪಾಯಯೇದ್ವೈದ್ಯಶ್ಛರ್ಧತೀಸಾರನಾಶನಮ್ ॥

೨ ಧಾನ್ಯನಾಗರಜಃ ಕ್ವಾಥಃ ಶೂಲಾಮಾಜೀರ್ಣನಾಶನಃ ।
ಚೂರ್ಣಸ್ತತ್ರ ಶುಭಃ ಪೀತಸ್ತದ್ವದ್ವ್ಯೋಷಾಗ್ನಿಜೀರಕೈಃ ॥
— (ನಿಘಂಟು ರತ್ನಾಕರ)

**ಪಥ್ಯಾಪಥ್ಯಗಳು :** ಉದ್ರೇಕವುಳ್ಳ ಅಜೀರ್ಣದಲ್ಲಿ ತಿಳುವಾದ ಗಂಜಿಯನ್ನೂ ಆಟೋಲಿಯನ್ನು ಕೊಡಬೇಕು. ಸಾಬುಅಕ್ಕಿ, ಹಳೇ ಬತ್ತದ ಅಕ್ಕಿ, ಹಳೆಹೆಸರ ಬೇಳೆ, ತೊಗರೇಬೇಳೆ, ಬತ್ತದರಳು, ಮೂಲಂಗಿ, ನುಗ್ಗೇಕಾಯಿ, ಮೆಂಥೆಯಪಲ್ಯ, ಪಡವಲಕಾಯಿ, ತಾಜಾಬದನೇಕಾಯಿ, ಹಾಗಲಕಾಯಿ, ಸೌತೇಕಾಯಿ, ಅಲ್ಲ, ನಿಂಬೇಹಣ್ಣು, ತಾಜಾ ಬಾಳೇಹಣ್ಣುಗಳು, ತುಪ್ಪ, ಬೆಣ್ಣೆ, ತಾಜಾಮಜ್ಜಿಗೆ, ಬಿಸಿನೀರು, ಸೈಂಧವಲವಣ ಇವೆಲ್ಲ ಹಿತಕರವಾಗಿವೆ. ಅತಿ ಬಿರುಸಾದ, ಕರೆದ, ಕಾರದ, ಉತ್ತೇಜಕನಾದ ಆಹಾರಗಳು ಇವುಗಳನ್ನು ವರ್ಜ್ಯ ಮಾಡಬೇಕು. ಅದರಂತೆ ಕಠೋರವಾದ ಜುಲಾಬು ವಾಂತಿಗಳ ಔಷಧ, ರಕ್ತಸ್ರಾವ, ಅವರೆ ಮೊದಲಾದ ಬರ್ಷಣದ ಕಾಳುಗಳು, ಬಸಳೆಪಲ್ಲೆ, ಹಾಲು, ಸಾರಾಯಿ, ತಣ್ಣೀರು, ರೋಗಿಗೆ ಸ್ವಾಭಾವಿಕವಾಗಿ ಸೇರದಿದ್ದ ಆಹಾರ ಇವುಗಳನ್ನು ಬಿಡಬೇಕು. ಹಾಲು ಕುಡಿಯಬೇಕಾದರೆ ಸುಣ್ಣದ ಮೇಲಿನ ತಿಳಿನೀರನ್ನು ಕೂಡಿಸಿ ಕಾಸಿ ಕೆನೆ ತೆಗೆದು ಕುಡಿಯಬೇಕು.

ಅಗ್ನಿಮಾಂದ್ಯವು ಬಹಳ ದಿವಸದ ವರೆಗೆ ಇದ್ದು ಅಪಚನವಾಗುತ್ತ ಇದ್ದರೆ ಬೇಯಿಸಿದ ಘನವಾದ (ಬಕ್ಕರೆ, ರೋಟಿ) ಪದಾರ್ಥಗಳನ್ನೆ ಸೇವಿಸುವದರಿಂದ ಬಹಳ ಜನರಿಗೆ ಗುಣವಾಗುತ್ತದೆ. ಯಾಕೆಂದರೆ ಅವುಗಳನ್ನು ಚರ್ವಣ ಮಾಡುವಾಗ ಲಾಲಾಜಲವು (ಜೊಲ್ಲು) ಹೆಚ್ಚು ಕೂಡಿ ಪಚನಕ್ಕೆ ಸಹಾಯವಾಗುತ್ತದೆ. ದ್ರವವಾದ ಆಹಾರದಿಂದ ಪಾಚಕರಸವು ಹೀನ ಶಕ್ತಿಯುಳ್ಳದ್ದಾಗುತ್ತದೆ. ಸ್ಥಳಾಂತರದಿಂದ ಹವೆಯನ್ನು ಬದಲಾಯಿಸಬೇಕು. ಶಕ್ತಿಗನುಸರಿಸಿ ವ್ಯಾಯಾಮವನ್ನು ಮಾಡುತ್ತಿರಬೇಕು.

**ಅಜೀರ್ಣದ ಭ್ರಾಂತಿಯನ್ನುಂಟು ಮಾಡುವ ರೋಗಗಳು :** ಮಿದುಳಿನ ಅಶಕ್ತತೆಯೂ ವಾಂತಿಯೂ ತಲೆಶೂಲಿಯೂ ಇರುತ್ತವೆ; ಅದಕ್ಕೆ ಹೊಟ್ಟೆನೋವು ಮಾತ್ರ ಇರುವದಿಲ್ಲ. ಜಂತಿನಿಂದಲೂ ಸಮಗ್ರ ಲಕ್ಷಣಗಳಾಗುತ್ತವೆ. ಪಿತ್ತಾಧಿಕ್ಯದಿಂದೂ ವಾಂತಿಯಾಗುತ್ತದೆ. ಆ ವಾಂತಿಯಲ್ಲಿ ಹಚ್ಚನ್ನ ನೀರೇ ಬೀಳುತ್ತದೆ; ಅಜೀರ್ಣದಂತೆ ಅಗಳು ಮಿಶ್ರಿತವಿರುವದಿಲ್ಲ. ಅನ್ನಾಶಯದಲ್ಲಿ ಗಾಯಗಳಾದರೂ ವಾಂತಿಯಾಗುತ್ತದೆ. ಆ ವಾಂತಿಯುಗೂಡ ರಕ್ತವು ಬೀಳುತ್ತದೆ. ಇಂಥ ಪ್ರಸಂಗದಲ್ಲಿ ಔಷಧವನ್ನು ಕೊಡುವವರು ಜಾಗರೂಕತೆಯಿಂದ ರೋಗವನ್ನು ಪರೀಕ್ಷಿಸಬೇಕು.

ಸ್ತ್ರೀಲಂಪಟರಿಗೂ ಮದ್ಯವ್ಯಸನದಿಂದ ಪ್ರಕೃತಿಯನ್ನು ಕೆಡಿಸಿಕೊಂಡವರಿಗೂ ಉದ್ಭವಿಸಿದ ಉದ್ರೇಕವುಳ್ಳ ಅಜೀರ್ಣವು ಅಸಾಧ್ಯವೇ ಆಗುತ್ತದೆ.

## ಅತಿಸಾರವು

ಅತಿಸಾರವೆಂದರೆ ಒಮ್ಮಿಂದೊಮ್ಮೆಲೇ ಹೊಟ್ಟೆ ಜಾಡಿಸುವ ರೋಗವು. ಇದಕ್ಕೆ ದಕ್ಷಿಣ ದೇಶದಲ್ಲಿ ಭೇದಿ ಪ್ರವೃತ್ತಿರೋಗವೆಂದೂ ಹೇಳುವರು. ಅಜೀರ್ಣದ ಕಾರಣಗಳೇ ಬಹುಶಃ ಇದಕ್ಕೆ ಕಾರಣವಾಗುತ್ತವೆ. ಹಾಗು ಬಹಳ ಉಷ್ಣತೆಯಿಂದೂ ಬಹಳ ಶೀತ

ದಿಂದೂ ಈ ರೋಗವು ಹುಟ್ಟುತ್ತದೆ. ಅತಿಶಯ ಚಿಂತೆ, ಅತಿಶಯ ಭಯ, ಕೊಳಚಿ ನೀರು, ಸ್ಥಾವರ ಜಂಗಮ ವಿಷ * ಗಳು ಇವಾದರೂ ಅತಿಸಾರವನ್ನುಂಟು ಮಾಡುತ್ತವೆ.

ಮೊದಲು ತುಸು ಅಜೀರ್ಣದ ಲಕ್ಷಣಗಳು ತೋರಿ ಒಂದರ ಮೇಲೊಂದು ಜುಲಾಬು ಪ್ರಾರಂಭವಾಗುತ್ತದೆ. ಕೈಕಾಲು ಹೋಗಿ ರೋಗಿಯು ಕಳಿಗುಂದುತ್ತಾನೆ. ಹೊಟ್ಟೆಯೊಳಗೆ ಒರಟಿ ಬಂದಂತೆಯೂ ಒಮ್ಮೊಮ್ಮೆ ಆಗುವದುಂಟು. ನೀರಾದ ಮಲದ ಗೂಡ ರಕ್ತ ಇಲ್ಲವೆ ಆಂವೂ ಬೀಳುತ್ತದೆ. ಬೇರೆ ಬೇರೆ ಲಕ್ಷಣಗಳಿಂದ ಆವಾತಿಸಾರ (ಆಂವು ಶೌಚಿಕೆ) ರಕ್ತಾತಿಸಾರ (ರಕ್ತ ಹೊರಕಡಿಗೆ) ಎಂದು ಹೆಸರು ಕೊಡಲ್ಪಡುತ್ತದೆ. ಇದೇ ಹಳೇತರಕ್ಕೆ ಬಿದ್ದು ಹಾಗೇ ಇದ್ದರೆ ಸಂಗ್ರಹಣಿ ಎನಿಸುತ್ತದೆ.

**ಪಟಕೀ :** ಇದಕ್ಕೆ ವಿಷೂಚಿಕೆ, ವಾಂತಿಭೇದಿ, ಮಾರಿಕಾ ಎಂದೂ ಅನ್ನುವದುಂಟು. ಇದರ ಪ್ರಾರಂಭವೂ ಅತಿಸಾರದಂತೆಯೇ ಇರುವದರಿಂದ ಇದರ ಲಕ್ಷಣಗಳನ್ನೂ ಉಪಚಾರವನ್ನೂ ಅತಿಸಾರ ಪ್ರಕರಣದೊಳಗೇ ಬರೆಯುವದು ಯುಕ್ತವಾಗಿದೆ.

ಪಟಕಿಯ ಜುಲಾಬು ಅಕ್ಕೀ ಕಚ್ಚಿನಂತೆ ಬಹಳ ಪ್ರಮಾಣದಿಂದ ಆಗಹತ್ತುತ್ತದೆ. ಕೈಕಾಲಿಗೆ ಒರಟಿ ಬಂದು ಮನುಷ್ಯನು ಗಾಬರಿಯಾಗುತ್ತಾನೆ. ಸುತ್ತುಮುತ್ತು ಪಿಡಗು ಇತ್ತೆಂದರಂತೂ ತತ್‌ಕ್ಷಣವೇ ಇದರ ಗುರ್ತು ಸಿಗುತ್ತದೆ. ಪಟಕೀ ತಗಲಿದ ರೋಗಿಯ ಮಲಮೂತ್ರದೊಳಗೆ ಒಂದು ಪ್ರಕಾರದ ಸೂಕ್ಷ್ಮಜಂತುಗಳಿದ್ದು ಅವು ಬೇಗನೆ ಅತ್ತಿತ್ತ ಹಬ್ಬಿ ನೀರೊಳಗೂ ಆಹಾರದ ಪದಾರ್ಥದೊಳಗೂ ಸೇರಿದವೆಂದರೆ, ಅವುಗಳನ್ನು ಸೇವಿಸುವವರಲ್ಲಿ ಪಿಡುಗು ಹಬ್ಬಿಹೋಗುತ್ತದೆ. ಇದು ಬಹಳ ಭಯಂಕರವಾದ ರೋಗವು. ರೋಗಿಯು ಒಮ್ಮೊಮ್ಮೆ ೩ಳ ತಾಸುಗಳೊಳಗೇ ಸಾಯುತ್ತಾನೆ. ಆಧುನಿಕ ಶೋಧಕರು ಇದರಲ್ಲಿ ೩ ಅವಸ್ಥೆಗಳನ್ನು ಕಲ್ಪಿಸಿ ವರ್ಣಿಸಿದ್ದಾರೆ :

**೧ ನೇ ಅವಸ್ಥೆ :** ಜುಲಾಬು, ವಾಂತಿ, ಎದೆಮುಗುಳಿನಲ್ಲಿ ಸೋವು, ಅಶಕ್ತತೆ ಇಷ್ಟು ಚಿನ್ಹಗಳು ತೋರುತ್ತವೆ.

**೨ ನೇ ಅವಸ್ಥೆ :** ಜುಲಾಬು, ವಾಂತಿ, ಒರಟಿ (ಶಳತವು), ಮೂತ್ರವು ಕಡಿಮೆಯಾಗುವದು, ಮೈ ತಣ್ಣಗಾಗುವದು, ಬಣ್ಣವು ಕಪ್ಪಾಗುವದು, ನಾಡಿಯು ಮಂದವಾಗುವದು ಮುಖ್ಯವಾಗಿ ಇಷ್ಟೂ ಲಕ್ಷಣಗಳಾಗುತ್ತವೆ. ಜುಲಾಬು ಅಕ್ಕೀ ಕಚ್ಚಿನಂತಹದೂ ವಾಂತಿಯು ನೀರಾದದ್ದೂ ಇರುತ್ತವೆ. ಕೈಕಾಲು ಬಿರಸಾಗಿ ನಿಸ್ತೇಜವಾಗುತ್ತದೆ. ನೀರಡಿಕೆ ಪ್ರಾರಂಭವಾಗುತ್ತದೆ. ಮೈಮೇಲೆ ಬೆವರು ಬಂದು ಜಿಗಟಾಗುತ್ತದೆ. ಧ್ವನಿಯು ಹಗೆಯೊಳಗೆ ಬಿದ್ದವರಂತೆ ಮೆಲ್ಲಕೆ ಕೇಳಿಸುತ್ತದೆ. ಗಲ್ಲಗಳು ಪೊಚ್ಚುಬಡೆಯುತ್ತವೆ. ಉಗುರು ತುಟಿಗಳೂ ಕಪ್ಪಾಗುತ್ತವೆ. ಕಣ್ಣು ಒಳಸಿಗುತ್ತವೆ.

---

* ಕಳ್ಳಿ, ಎಕ್ಕೆ, ಸುಂಬಳಖಾರ ಮುಂತಾದ ಸ್ಥಾವರ ವಿಷಗಳು; ಹಾವು, ಹಲ್ಲಿ, ಜೇಡಹುಳ, ಹಾವರಾಣಿ ಮುಂತಾದ ಜಂಗಮ ವಿಷಗಳು.

ಕಡೆಕಡೆಗೆ ಶ್ವಾಸ ಬಿಕ್ಕುಗಳು ಹತ್ತಿ ದೇಹಾವಸಾನವಾಗುತ್ತದೆ. ಈ ಸ್ಥಿತಿಯೊಳಗೆ ಮನುಷ್ಯನು ಪಾರಾಗುವದೇ ಕಷ್ಟವು.

೩ ನೇ ಅವಸ್ಥೆ : ಎರಡನೇ ಸ್ಥಿತಿಯಲ್ಲಿ ಬದುಕಿ ಉಳಿದಸಂದರೆ ಮೈಯೊಳಗೆ ಜ್ವರ ಹುಟ್ಟುತ್ತದೆ. ಮೂತ್ರಘಾತವೂ (ಕಾಲ್ಮಡಿ ಬಂದಾಗುವದು) ಆಗುತ್ತದೆ. ರೋಗಿಯು ಮೂರ್ಛಿತನಾಗುತ್ತಾನೆ. ಬದುಕುವದಿದ್ದರೆ ಜುಲಾಬೂ ವಾಂತಿಯೂ ಕಡಿಮೆಯಾಗಿ ನಾಡಿಯು ಕೈಗೆ ಹತ್ತಲಾರಂಭಿಸುತ್ತದೆ. ಈ ಸ್ಥಿತಿಯೊಳಗೂ ಒಮ್ಮೊಮ್ಮೆ ಸಾಯುವದುಂಟು.

ಹೆಂಗಸರ ಗರ್ಭಾಶಯದ ಮೇಲೂ ಈ ರೋಗದ ದುಷ್ಪರಿಣಾಮವಾಗಿ, ರಕ್ತಸ್ರಾವವು ಪ್ರಾರಂಭವಾಗುತ್ತದೆ. ಗರ್ಭಿಣಿಯಿದ್ದ ಪಕ್ಷದಲ್ಲಿ ಗರ್ಭಸ್ರಾವವೇ ಆಗುತ್ತದೆ.

ಈ ರೋಗದಲ್ಲಿ ಸಾಯುವ ತನಕ ಎಚ್ಚರಿಕೆ ಇರುವದೇ ಬಹಳ; ಕ್ವಚಿತ್ಪ್ರಸಂಗದಲ್ಲಿ ಶುದ್ಧಿಯು ತಪ್ಪುತ್ತದೆ.

ಜುಲಾಬಿನ ಬಣ್ಣವು ಕೆಂಪಾಗುವದೂ ವಾಂತಿಯ ಬಣ್ಣವು ಕಪ್ಪಾಗುವದೂ ಸುಲಕ್ಷಣವಲ್ಲ. ಮೊದಲು ಮೂತ್ರರೋಗವಿರುವವರಿಗೆ ಮೂತ್ರವು ಕಟ್ಟಿತೆಂದರೆ ಅಸಾಧ್ಯವಾಗುತ್ತದೆ.

೧ನೇ ಅವಸ್ಥೆಯೊಳಗೇ ಔಷಧವು ಬಿದ್ದರೆ ಈ ಭಯಂಕರ ರೋಗವು ಶಾಂತವಾಗುತ್ತದೆ. ಆದದರಿಂದ ಶಕ್ಯವಿದ್ದವರು ಅನುಭವಿಕರಾದ ಉತ್ತಮ ಡಾಕ್ಟರರ ವಿಚಾರದಿಂದ ಔಷಧೋಪಚಾರವನ್ನು ನಡೆಸುವದೇ ಯೋಗ್ಯವು. ನಿರುಪಾಯದಿಂದ ಯಾರಿಗೆ ಡಾಕ್ಟರರ ಹತ್ತರ ಹೋಗುವದು ದುಸ್ತರವಾಗುತ್ತದೆ, ಅವರ ದೆಸೆಯಿಂದ ಮುಂದೆ ಕೆಲವು ಉಪಚಾರಗಳನ್ನು ಬರೆದೇ ಇದ್ದೇವೆ. ತೀವ್ರವಾಗಿ ಆ ಉಪಾಯಗಳನ್ನು ಮಾಡಿದರೆ ರೋಗಿಯು ಬದುಕುವ ಸಂಭವವದೆ.

ಆಮಶೌಚವಾಗಲಿ, ರಕ್ತಮಿಶ್ರಿತ ಆಮಶೌಚವಾಗಲಿ, ಅತಿಸಾರವಾಗಲಿ ತೀವ್ರ ಗುಣವಾಗದೆ ಇದ್ದರೆ ಮುಂದೆ ಅವೇ ಸಂಗ್ರಹಣಿಗೆ ಹಾಕುತ್ತವೆ. ಅನ್ನವು ಪಚನವಾಗದೆ ಆಂವು ಮಿಶ್ರಿತವಾಗಿ ಜಾಡಿಸುವದು, ೮–೧೦ ದಿವಸ ಬಿಟ್ಟು ಬಿಟ್ಟು ಜಾಡಿಸುವದು, ಅಶಕ್ತಿ, ಮೈಬಣ್ಣದಲ್ಲಿ ಬದಲಾಗುವದು ಇವೇ ಸಂಗ್ರಹಣಿಯ ಲಕ್ಷಣಗಳು.

**ಉಪಚಾರವು :** ಮೊದಲು ಅತಿಸಾರವೆಂದು ನಿಶ್ಚಯವಾದ ಕೂಡಲೆ ಬಂದಾಗುವ ಔಷಧವನ್ನು ಕೊಡಲಿಕ್ಕೆ ಹಾತೊರೆಯಬಾರದು.[೧] ಅತಿಸಾರ, ಜ್ವರ, ರಕ್ತಪಿತ್ತ

---

೧ ಅತಿಸಾರೇಜ್ವರೇಚೈವ ರಕ್ತಪಿತ್ತೇದಗಾಮಯೇ ॥
ಅದೌನಪ್ರತಿಕುರ್ವೀತವ್ಯಾಧಿವೇಗೋಹಿದುಸ್ತರ ॥ (ನಿಘಂಟು ರತ್ನಾಕರ)

ಡಾಕ್ಟರ ಟ್ಯಾನರ ಎಂಬುವವರೂ ಪಟಕೀ ಬೇನೆಯಲ್ಲಿ ಕೂಡ ಬಂದಾಗುವ ಔಷಧವನ್ನು ಕೊಡದೆ, ಹಾಗೇ ಸೌಮ್ಯವಾದ ಆಹಾರ ಮೇಲು ವಿಚಾರಗಳನ್ನೇ ಮಾಡಬೇಕೆಂದು ಅಂದಿರು

ಕಣ್ಣು ಬೇನೆ ಇವುಗಳು ಹೊಸದಾಗಿ ಬಂದಕೂಡಲೆ ಉಪಚಾರ ಮಾಡಿದರೆ, ಹಿತವಾಗದೆ ಅಪಾಯವಾಗುವ ಸಂಭವನವೇ ಬಹಳವಿರುವದೆಂದು ಪ್ರಾಚೀನ ವೈದ್ಯರ ಮತವದೆ. ಮುಪ್ಪಿನ ಮುದುಕರು, ಕೂಸುಗಳು, ಬಸರು ಹೆಂಗಸರು, ಕ್ಷಯರೋಗಿಗಳು ಇವರಿಗೆ ಮಾತ್ರ ಮೇಲಿನ ಸಾಮಾನ್ಯ ನಿಯಮವು ಹತ್ತುವದಿಲ್ಲ.[೧] ಇವರಿಗೆ ಆದಷ್ಟು ತೀವ್ರವಾಗಿ ಜುಲಾಬು ಬಂದಾಗುವ ಔಷಧವನ್ನು ಕೊಡುವದೇ ವಿಹಿತವು.

ಅತಿಸಾರಕ್ಕೆ, ಪಿತ್ತಾಧಿಕ್ಯವೂ ಜ್ವರವೂ ಇಲ್ಲದಂಥ ಸಶಕ್ತ ಮನುಷ್ಯನ ಅತಿಸಾರ ರೋಗಕ್ಕೆ, ಮೊದಲು ೧–೨ ದಿವಸ ಉಪವಾಸ ಮಾಡಿಸುವದು ಆರೋಗ್ಯಕರವು. ಇದರ ಮೇಲಿಂದೇ "ಲಂಘನಂ ಪರಮೌಷಧಂ" ಎಂಬ ಗಾದೆಯ ಮಾತು ರೂಢಿಯಲ್ಲಿ ಬಂದಿದೆ. ಪಿತ್ತವೂ ಜ್ವರವೂ ಇದ್ದರೆ ಆಹಾರದ ಗೂಢ ಪಾಚಕ ಔಷಧವನ್ನು ಕೊಡುವದು ಒಳ್ಳೆಯದು. ಕೋತಂಬರಿ ಕಾಳು ೪ ತೊಲಿ, ಬಾಳದ ಬೇರು ೪ ತೊಲಿ, ಎಳೆ ಬೆಲಪತ್ರಿಕಾಯಿಯ ತಿಳಿಲು ೪ ತೊಲಿ, ಜೇಕಿನಗಡ್ಡಿ ೪ ತೊಲಿ, ಅಕ್ಕಿ ೨ ತೊಲಿ ೨ ಶೇರು ನೀರಿನಲ್ಲಿ ಕುದಿಸಿ ೪ ಶೇರು (೧೦ ತೊಲಿ) ಗಂಜೀ ಸೋಶಿಕೊಂಡು ಕುಡಿಸುವದು ಹಿತಕರವು. ಕಫವಾತಕೋಪವಿದ್ದರೆ—ಬೆಲಪತ್ರಿ ತಿಳಿಲು ೪ ತೊಲಿ, ಕೋತಂಬ್ರಿ ಕಾಳು ೪ ತೊಲಿ, ಜೀರಿಗೆ ೪ ತೊಲಿ, ಅಗಳಸುಂಟಿ ೪ ತೊಲಿ, ಎಳ್ಳು ೪ ತೊಲಿ, ಶುಂಟಿ ೪ ತೊಲಿ, ೨ ಶೇರು ನೀರಿಟ್ಟು ೧೦ ತೊಲಿ ಇಳಿಸಿ ಕುಡಿಸಬೇಕು. ಬಿಸಿನೀರು ಕೊಡಬೇಕು.

## ಸಾಮಾನ್ಯ ಅತಿಸಾರಕ್ಕೆ ೨–೩ ದಿವಸಗಳಾದ ತರುವಾಯ ಕೊಡುವ ಔಷಧಗಳು

೧. ಸುಂಟಿ, ಅಜಿವಾನ, ಬೂರಲಅಂಟು; ಧಾಯಟೀ (ಧಾತರೇ) ಹೂವು ಇವುಗಳನ್ನು ಸಮಭಾಗ ಹಾಕಿ ಮಾಡಿದ ಚೂರ್ಣವನ್ನು ಶಕ್ತಿ ನೋಡಿ ೪ ತೊಲಿ, ಇಂದ ೪ ತೊಲಿ ಒರೆಗೆ ತಾಜಾ ಮಜ್ಜಿಗೆಯಲ್ಲಿ ಕೊಡಬೇಕು. ಕಠಿಣವಾದ ಅತಿಸಾರವೂ ಕಡಿಮೆಯಾಗುವದು.

೨. ಶುದ್ಧವಾದ ಅಫು, ಕೇಶರ, ಮೇಣ ಇವುಗಳನ್ನು ಸಮಭಾಗ ಕೂಡಿಸಿ ಗುಳಿಗೇ ಮಾಡಿ ಒಂದು ಅಕ್ಕಿಕಾಳ ತೂಕ ತೆಗೆದುಕೊಳ್ಳಬೇಕು. ಇದು ವೃದ್ಧರ ಅನುಭವದ ಔಷಧವು.

---

ವರು; ಎಂದು ಡಾ. ತ್ರಿಭುವನದಾಸ ಶಹಾ, ಎಲ್. ಎಮ್. ರವರು ತಮ್ಮ "ಶಾರೀರ ಮತ್ತು ವೈದಿಕ" ಶಾಸ್ತ್ರದಲ್ಲಿ ಬರೆದಿರುತ್ತಾರೆ. (ಉಪಾಚಾರ ಮಾಡುವದೇ ಯೋಗ್ಯವು).

೧ ನಸ್ತಂಭಯೇದತೀಸಾರಮುಪಕ್ವಂ ವೃದ್ಧಿಮಾಗತಮ್ ॥
ವಿನಾಕ್ಷೀಣಸ್ಯ ವೃದ್ಧಸ್ಯಗರ್ಭಿಣ್ಯಾ ಬಾಲಕಸ್ಯಚ ॥ (ನಿಘಂಟು ರತ್ನಾಕರ)

೨. ಕೀಟನಿಷ್ಠೀವನೇ ಘೃಷ್ಟಂ ನಾಗಫೇನಂ (ಅಹಿಫೇನಂ) ಸಕುಂಕುಮಮ್ ।
ತಂಡುಲಪ್ರಮಿತಂ ದತ್ತಮತಿಸಾರನಿಷೂದನಮ್ ॥
ಇದಮ್ಮಯಾ ಗುರೋರ್ಲಬ್ಧನ್ನತು ಶಾಸ್ತ್ರಾದ್ಭಿಷಗ್ವರಾಃ ।
ಭವತಾಮುಪಕಾರಾಯ ಗುರೋಸ್ತತ್ತ್ವಂ ಪ್ರಕಾಶಿತಮ್ ॥

೩. ಶುದ್ಧವಾದ ಭಂಗಿಯ ೧೯ ತೊಲಿ ಪುಡಿಯನ್ನು ೧ ತೊಲಿ ಜೇನುತುಪ್ಪದಲ್ಲಿ ಮಲಗುವಾಗ್ಗೆ ಕೊಡಬೇಕು. ಅತಿಸಾರಕ್ಕೂ ನಿದ್ರಾನಾಶಕ್ಕೂ ಅಗ್ನಿಮಾಂದ್ಯಕ್ಕೂ ಹಿತಕರವು.

೪. **ಕಪಿತ್ಥಾಷ್ಟಕ ಚೂರ್ಣ:** ಬೆಳವಲ ಹಣ್ಣಿನ ಇಲ್ಲವೆ ಕಾಯತಿಳಲು ೮ ಭಾಗ, ಸಕ್ಕರೆ ೬ ಭಾಗ ದಾಳಿಂಬರಕಾಯಿ, ಹುಣಸೇಹಣ್ಣು, ಪತ್ರೀಕಾಯಿ, ದಾಯಟೀ ಹೂವು, ಅಜವಾನ, ಹಿಪ್ಪಲಿ ಇವು ಪ್ರತಿಯೊಂದು ಮೂರು ಮೂರು ಭಾಗ; ಮೆಣಸು, ಜೀರಿಗೆ, ಕೋತಂಬರೀಬೀಜ, ಹಿಪ್ಪಲೀಬೇರು, ಬಾಳದಬೇರು, ಸೈಂದವಲವಣ, ಅಜವಾನ, ದಾಲಚಿನ್ನಿ, ಪತ್ರರಾಜ, ಯಾಲಕ್ಕಿ, ಮೊಗ್ಗಿ, ಚಿತ್ರಮೂಲ, ಸುಂಟಿ, ಇವುಗಳೆಲ್ಲ ಒಂದೊಂದು ಭಾಗ ತಕ್ಕೊಂಡು ಒತ್ತಟ್ಟಿಗೆ ಚೂರ್ಣ ಮಾಡಿ ಶಕ್ತಿ ನೋಡಿ ೧ ತೊಲಿ ಇಂದ ೧ ತೊಲಿ ಒರೆಗೆ ಕೊಡಬೇಕು. ೧ ಕೆಟ್ಟ ನೀರಿನಿಂದುಂಟಾದ ಅತಿಸಾರವನ್ನೂ ಸಂಗ್ರಹಿಣಿಯನ್ನೂ ನಾಶ ಮಾಡುವದಕ್ಕೆ ಈ ಚೂರ್ಣವು ಉಪಯುಕ್ತವಾಗಿದೆ.

೫. ೨ಬಜೆ, ಅತಿಬಜೆ, ಜೇಕಿನಗಡ್ಡಿ, ಇಂದ್ರಜವಿ ಪ್ರತಿಯೊಂದು ೧ ತೊಲಿ ಹಾಕಿ ೨೦ ತೊಲಿ ನೀರಿನಲ್ಲಿ ಕುದಿಸಿ ಕಷಾಯ ಮಾಡಿ ೨೧ ತೊಲಿ ದಿನಕ್ಕೆ ಒಂದಾವರ್ತಿ ಕುಡಿಸಬೇಕು. ವಾತಾತಿಸಾರಕ್ಕೆ ಒಳ್ಳೇ ಮದ್ದು.

## ಜ್ವರಾತಿಸಾರಕ್ಕೆ

೧. ೩ ಕೆಂಪಚಂದನ, ಬಿಳೇಬಾಳದ ಬೇರು, ಕರೇ ಬಾಳದ ಬೇರು, ಕೋಲ ಮುರುಕನ ತೋಟೆ, (ಸಿಗದಿದ್ದರೆ ಇಂದ್ರಜವೆ) ಅಗಳಸುಂಟೆ, ಪದ್ಮಕಾಷ್ಠಿ, ಅಮೃತ ಬಳ್ಳಿ, ಚಿರಾಯತಕಡ್ಡಿ, ಕೋತಂಬರೀ ಬೀಜ, ಜೇಕಿನಗಡ್ಡೆ, ಎಳೆ ಬೆಲಪತ್ರೆಕಾಯಿ, ಅತಿಬಜಿ, ಸುಂಟಿ ಇವುಗಳನ್ನು ಪ್ರತಿಯೊಂದು ೧ ತೊಲಿಯಂತೆ ತಕ್ಕೊಂಡು ಜಜ್ಜಿ ೨೨ ಶೇರು ನೀರಿನಲ್ಲಿ ಕುದಿಸಿ ೬ ತೊಲಿಗೆ ಇಳಿಸಿ, ಆರಿದ ತರುವಾಯ ೧ ತೊಲಿ ಜೇನು ತುಪ್ಪಾ ಕೂಡಿಸಿ ಬಾಟ್ಲಿಯಲ್ಲಿಟ್ಟು ೪ ತಾಸಿಗೊಮ್ಮೆ ಕೊಟ್ಟು ೩ ಆವರ್ತಿಗೆ ಮುಗಿಸ

---

೧. ಕಪಿತ್ಥಾಷ್ಟಕಸಂಜ್ಞಂ ಸ್ಯಾಚ್ಚೂರ್ಣಮೇತಜ್ಜಲಾಮಯಾನ್ ।
ನಿಹಂತಿ ಗ್ರಹಣೀರೋಗಾನತಿಸಾರಂ ವ್ಯಪೋಹತಿ ॥

೨. ವಚಾಚಾತಿ ವಿಷಾಮುಸ್ತಂ ಬೀಜಾನಿ ಕುಟಜಸ್ಯ ಚ ।
ಶ್ರೇಷ್ಠಃ ಕಷಾಯ ಏತೇಷಾಂ ವಾತಾತೀಸಾರಶಾಂತಯೇ ॥
— (ನಿಘಂಟು ರತ್ನಾಕರ)

೩. ಶೀತೋಶೀರಕಯುಗ್ಮವತ್ಸರವೃಕೀ ಪದ್ಮಾಹ್ವಧಾನ್ಯಾಮೃತಾ,
ಭೂನಿಂ ಬಾಂಬುದಬಾಲಬಿಲ್ವಕವಿಷಾವಿಶ್ವೌಷಧೈಃ ಸಾಧಿತಃ ॥
ಕ್ವಾಥೋಪ್ರಾಕ್ಷಿಕಸಾಕ್ಷಿಕೋ ವಿಜಯತೇ ಹಲ್ಲಾಸತೃಷ್ಣಾವಮೀ,
ದಾಹಾರೋಚಕಕಸಂಘುಭಂಗಚತುರಃ ಸರ್ವಾತಿಸಾರಜ್ವರಾನ್ ॥

ಬೇಕು. ಈ ಕಷಾಯದಿಂದ ಜ್ವರ, ನೀರಡಿಕೆ, ದಾಹ, ವಾಂತಿಗಳಿಂದ ಕೂಡಿದ ಅತಿಸಾರವೂ ಹೋಗುವದು.

೨. ದೇವದ್ವಾರ, ಅತಿಬಜಿ, ಅಗಳಸುಂಟಿ, ವಾಯುವಡಂಗ, ಜೇಕಿನಗಡ್ಡಿ, ಮೆಣಸು, ಕೋಲಮುರಕನ ತೋಟಿ ಇವುಗಳನ್ನು ೧/೪ ತೊಲಿಯಂತೆ ತಕ್ಕೊಂಡು ೧ ಶೇರು ನೀರಿನಲ್ಲಿ ಕುದಿಸಿ ೧/೮ ಕ್ಕೆ ಇಳಿಸಿ ಕೊಟ್ಟರೆ ಬಾವು ಸಹಿತವಾದ ಅತಿಸಾರವು ಕಡಿಮೆಯಾಗುವದು.

೩. ಬೆಲಪತ್ರೀ ಬೇರು, ಶಿವನ್ನೀಬೇರು, ತರೋಟಿಗನ ಬೇರು, ಲೋದನಚಕ್ಕೆ, ಪಾದರೀ ಬೇರು, ಅಗಳಸುಂಟಿ, ತುರುಬೀ ಬೇರು, ಇಂದ್ರಜವಿ, ಕೋಲಮುರಕನ ಚಕ್ಕೆ, ಬಾಳದ ಬೇರು, ಕಟುಕರೋಣಿ, ಸುಂಟಿ, ಅಮೃತಬಳ್ಳಿ, ಎಳೆಬೆಲಪತ್ರಿಕಾಯಿ ಇವುಗಳ ಕಷಾಯವನ್ನು (೧ನೇದರಂತೆ ತಯಾರಿಸಿ) ಕೊಡಬೇಕು. ಇದರಿಂದ ಜ್ವರ, ಕೆಮ್ಮು, ದಮ್ಮು, ಶೂಲಿ ಇವುಗಳಿಂದ ಕೂಡಿದ ಅತಿಸಾರವೂ ಕಡಿಮೆಯಾಗುವದು.

## ರಕ್ತಾತಿಸಾರಕ್ಕೆ

೧. ಅಕ್ಕಿಕಚ್ಚಿ[೧]ನಲ್ಲಿ ಉತ್ತಮವಾದ ಗಂಧವನ್ನು ತೆಯ್ದು ೧ ತೊಲಿಯಷ್ಟು ರಾಡಿಯಲ್ಲಿ ೧/೪ ತೊಲಿ ಜೇನುತುಪ್ಪವನ್ನೂ ೧/೨ ತೊಲಿ ಕಲ್ಲುಸಕ್ಕರೆಯ ಪುಡಿಯನ್ನೂ ಬೆರಿಸಿಕೊಟ್ಟರೆ, ನೀರಡಿಕೆ, ದಾಹ, ಮೋಹಗಳಿಂದ ಕೂಡಿದ ರಕ್ತಾತಿಸಾರವು ಶಾಂತವಾಗುವದು.

೨. ಕೋಲಮುರಕನತೋಟಿ ೧/೨ ತೊಲಿ, ದಾಳಿಂಬರ ಕಾಯಿತೋಟಿ ೧/೨ ತೊಲಿ ಇವುಗಳ ೧/೮ ಕಷಾಯವನ್ನು ಮಾಡಿ ಆರಿಸಿ ೧/೨ ತೊಲಿ ಜೇನುತುಪ್ಪ ಬೆರಿಸಿ ತಕ್ಕೊಂಡರೆ ರಕ್ತಾತಿಸಾರವು ಹೋಗುವುದು.

೩. ದಾಳಿಂಬರ ಹಣ್ಣನ್ನು ಪುಟಪಾಕದಿಂದ ಬೇಯಿಸಿ ವಸ್ತ್ರಗಣಿಕೆ ಮಾಡಿ ರಸವನ್ನು ತೆಗೆದು ಜೇನುತುಪ್ಪವನ್ನು ಕೂಡಿಸಿಕೊಟ್ಟರೆ ರಕ್ತಾತಿಸಾರವು ನಿಲ್ಲುವದು. ರಕ್ತಗೂಡಿದ ಆವಿಗೂ ಇದು ಹಿತಕರವು.

## ಆಮಶೌಚಕ್ಕೆ

೧. ಕೋತಂಬ್ರಿಬೀಜ, ಜೇಕಿನಗಡ್ಡೆ, ಬಾಳದಬೇರು, ಸುಂಟಿ, ಬೆಲಪತ್ರಿಕಾಯಿ ತಿಳಲು ಪ್ರತಿಯೊಂದು ೧/೨ ತೊಲಿ ತಕ್ಕೊಂಡು ಕಷಾಯ ಮಾಡಿ ೧/೪ ಕ್ಕೆ ಇಳಿಸಿ ದಿನದಲ್ಲಿ ೨ ಸಾರೆ ತಕ್ಕೊಳ್ಳಬೇಕು.

---

೧. ಚಂದನಂ ವಿಮಲತಂಡುಲಾಂಬುನಾ, ಸಂಯುತಂ ಮಧುಯುತಂ ಸಿತಾಯುತಮ್ ॥
ತೃಡಿವಖಂಡನಮಸೃಗ್ವಿಖಂಡನಂ ಖಂಡನಂ ಪ್ರಚುರದಾಹಮೋಹಯೋಃ ॥
— ಲೋಲಿಂಬರಾಜ

೨. ಎಳೆಯುಳಲೀಕಾಯಿ, ಬಡೆಸೋಪು, ಸುಂಟಿ ಇವುಗಳನ್ನು ಸಮನಾಗಿ ತಕ್ಕೊಂಡು ಔಡಲೆಣ್ಣೆ ಒರೆಸಿ ಹುರಿದು ೩ ತೊಲಿ ಪುಡಿಮಾಡಿ ೩ ತೊಲಿ ಸಕ್ಕರೆ ಕೂಡಿಸಿ ೨-೩ ದಿವಸ ಸೇವಿಸಿದರೆ ಗುಣವಾಗುವದು.

೩. ಅರ್ಧ ತೊಲಿ ಇನಬಗೋಲದ ಕಾಫಿಯನ್ನು ಮಾಡಿ ತಕ್ಕೊಳ್ಳಬೇಕು.

೪. ೧½ ತೊಲಿ ಎಳೆಯುಳಲೀಕಾಯಿಯ ಕಷಾಯದಲ್ಲಿ ೧ ತೊಲಿ ಔಡಲೆಣ್ಣೆಯನ್ನು ಕೊಡುವದರಿಂದೂ ಆವು ಹೋಗುತ್ತದೆ. ಇದು ಮೊದಲೇ ಕೊಡುವದಕ್ಕೆ ತಕ್ಕ ಔಷಧವು (ಔಡಲೆಣ್ಣೆಯ ಹೊರತು ಮತ್ತಾವ ಜುಲಾಬಿನೌಷಧವನ್ನು ಈ ರೋಗದಲ್ಲಿ ಕೊಡಬಾರದು.)

೫. [1]ಆಗಳ ಸುಂಟಿ, ಇಂದ್ರಜವೆ, ನೆಲಬೇವು, ಕಲ್ಲುಸಬ್ಬಸಿಗೆ, ಸುಂಟಿ, ಅಮೃತ ಬಳ್ಳಿ ಇವುಗಳ ೧½ ಕಷಾಯವನ್ನು ಮಾಡಿ ಆರಿಸಿ ೧½ ತೊಲಿ ಜೇನುತುಪ್ಪ ಕೂಡಿಸಿ ಕೊಟ್ಟರೆ ಜ್ವರದಿಂದ ಕೂಡಿದ ಆಂವಶೌಚಿಕೆಯ ಉಪದ್ರವವೂ ಕಡಿಮೆಯಾಗುತ್ತದೆ.

## ಪಟಕೀ ಬೇನೆಗೆ

೧. ಅಫು ½ ಗುಂಜಿ, ಮೆಣಸು ೧ ಗುಂಜಿ, ಇಂಗು ೧ ಗುಂಜಿ ಇವುಗಳನ್ನು ಕುಟ್ಟಿ ಅಲ್ಲದ ರಸದಲ್ಲಿ ಒಂದು ಗುಳಿಗೆಯನ್ನು ಮಾಡಬೇಕು. ಎರಡು ಇಲ್ಲವೆ ಮೂರು ತಾಸಿಗೊಂದರಂತೆ ಕೊಡಬೇಕು.

೨. ಸುಂಟಿ ೩ ತೊಲಿ, ಅಫು ೧ ತೊಲಿ, ಕಾಜಿಮುಳದ ಬೀಜದ ಚೂರ್ಣ ೨ ತೊಲಿ, ಕೂಡಿಸಿ ಅಲ್ಲದ ರಸದಲ್ಲಿ ೧ ಗುಂಜಿ ತೂಕ ಗುಳಿಗೆಗಳನ್ನು ಮಾಡಿಡಬೇಕು. ೨ ತಾಸಿಗೊಂದರಂತೆ ಕೊಡಬೇಕು. ಬೇನೆಯ ವೇಗವು ಕಡಿಮೆಯಿದ್ದರೆ ೩ ತಾಸಿಗೊಂದರಂತೆ ಕೊಡಬೇಕು.

(ಅಫುಮಿಶ್ರಿತವಾದ ಯಾವ ಔಷಧವನ್ನಾಗಲೀ ಮೊದಲೇ ಕೊಡುವದು ಯೋಗ್ಯವು. ಮೈತಣ್ಣಗಾಗಹತ್ತಲು ಉಪಯೋಗಕ್ಕೆ ಬರುವದಿಲ್ಲ. ಮೂತ್ರವು ಬಂದಿದ್ದಾಗ್ಗೆ ಈ ಔಷಷಧಗಳು ಅಪಾಯವನ್ನುಂಟುಮಾಡುತ್ತವೆ. )

ಕಪ್ಪುರಪ್ಪರ್ಕು, ಕ್ಲೋರೋಡಾಯಿನ್ ಮೊದಲಾದ ಪೇಟಂಟ ಔಷಧಗಳಿದ್ದರೂ ಕೊಡಬೇಕು. ಗಂಜಿ ಮುಂತಾದ ಹಗುರಾದ ಆಹಾರಗಳನ್ನು ಹಾಕಬೇಕು. ಸಾಗತಕ್ಕವರು ಗಂಜಿಯಗೂಡ ತುಸು ಬ್ರಾಂಡಿಯನ್ನು ಬೆರಿಸಿ ತಕ್ಕೊಂಡರೆ ಉಷ್ಣತೆ ಹುಟ್ಟಿ ರೋಗವು ಹಿಮ್ಮೆಟ್ಟುತ್ತದೆ. ಬ್ರಾಂಡಿ ನಡಿಯದವರು ಅಲ್ಲದ ರಸವನ್ನು ತಕ್ಕೊಳ್ಳಬೇಕು. ಮೈ ತಣ್ಣಗಾಗಹತ್ತಿದರೆ (೩) ೧½ ಗುಂಜಿ ಕಸ್ತೂರಿಯನ್ನೂ ೪ ಗುಂಜಿ ಕಪ್ಪುರವನ್ನೂ

---

೧. ಪಾಠೇಂದ್ರಯವಭೂನಿಂಬವುುಸ್ತಪರ್ಪಟಕಾಮೃತಾಃ ।
ಜಯಂತ್ಯಾಮುಮತೀಸಾರಂ ಜಜ್ವರಂ ಸ ಮಹೌಷಧಾಃ ॥
— (ಚಕ್ರದತ್ತ)

ಕೂಡಿಸಿ ಬೆಲ್ಲದಲ್ಲಿ ೩ ಗುಳಗೀ ಮಾಡಿ ೩ ತಾಸಿಗೊಮ್ಮೆ ಕೊಡಬೇಕು. ಕೈಕಾಲು ಕಾಸಬೇಕು. ಹೊಟ್ಟೆಗೆ ಫ್ಲಾನೆಲ್ ಅರಿವೆಯನ್ನು ಸುತ್ತಬೇಕು. ನೀರಡಿಕೆಯಾದರೆ ಕೊಡಬಾರದೆಂದು ಬಹಳ ಜನರು ಹೇಳುತ್ತಿರುತ್ತಾರೆ. ಹಾಗೆ ಮಾಡುವದು ಸರಿಯಲ್ಲ. ಕೊತಂಬರಿ ಕಾಳು, ಲವಂಗ, ಜಾಜೀಕಾಯಿ, ಜೇಕಿನಗಡ್ಡೆ, ಇವುಗಳೊಳಗೆ ಯಾವದಾದರೊಂದು ಔಷಧವನ್ನು ಹಾಕಿ ಮರಳಿಸಿ ಆರಿಸಿದ ನೀರನ್ನು ಬೇಡಿಬೇಡಿದಾಗ ಕೊಡಬೇಕು. ವಾಂತಿಯಾಗುತ್ತಿದ್ದರೆ ಸೋಡಾವಾಟರವನ್ನು ಕೊಟ್ಟರೂ ನಿಲ್ಲುವದು. ಹೊಟ್ಟೆಯಲ್ಲಿ ಒರಟೆ ಬಂದರೆ ಸಾಸುವೆಯ ಪಟ್ಟಿಯನ್ನು ಕೂಡಿಸಬೇಕು. ರೋಗಿಯ ಮಲಮೂತ್ರಗಳನ್ನು ದೂರದಲ್ಲಿ ಒಯ್ದು ಹುಗಿದು ಬಿಡಬೇಕು. ಶುಶ್ರೂಷೆ ಮಾಡುವವರು ಸಾಬಾಣವನ್ನು ಹಚ್ಚಿ ಕೈಕಾಲು ತೊಳೆದುಕೊಳ್ಳುತ್ತಿರಬೇಕು. ಈ ರೋಗವು ಅಲ್ಪವಿರಾಮ (,) ದಂಥ ಕೃಮಿಯೊಳಗಿಂದ ಆಗುವದೆಂದೂ ಆ ಕೃಮಿಗಳು ಸಂಸರ್ಗದಿಂದ ಮನುಷ್ಯನಲ್ಲಿ ತೀವ್ರವಾಗಿ ಹೋಗುವವೆಂದೂ ಆಧುನಿಕ ಶೋಧಕರು ಬರೆಯುತ್ತಾರೆ. ಬಹಳ ಜನರು, ಕುಡಿಯುವ ನೀರು, ಹಾಲು ಮುಂತಾದ್ದು ಮೊದಲು ದೂಷಿತವಾಗಿ ಅವುಗಳ ದ್ವಾರಾ ರೋಗವು ಹಬ್ಬುವದೆಂದು ಹೇಳುತ್ತಾರೆ. ಪಟಕಿಯು ಪ್ರಾರಂಭವಾದ ಕೂಡಲೆ ರೋಗಿಯು ಮೊದಲು ಕುಡಿಯುತ್ತಿದ್ದ ನೀರನ್ನು ಬಿಟ್ಟು ಬೇರೆ ನಿರ್ಮಲವಾದ ನೀರನ್ನು ಕುಡಿಯುವದೇ ಒಳ್ಳೆಯದು. ಒಂದೇ ಭಾವಿಯಿದ್ದ ಪಕ್ಷದಲ್ಲಿ ಚನ್ನಾಗಿ ಮರಳಿಸಿ ಆರಿದ ನೀರನ್ನು ಎಲ್ಲರೂ ಕುಡಿಯಬೇಕು. ದನಗಳಿಗೆ ಹಿರೇಬ್ಯಾನಿ (ಪಟಕೀ) ಬಂದಾಗ್ಗೆ ಅವುಗಳ ಹೈನವನ್ನು ತಕ್ಕೊಳ್ಳಬಾರದು. ಅಂಥ ದನಗಳ ಸಂಸರ್ಗವೂ ಈ ಬೇನೆಗೆ ಕಾರಣವಾಗುವದೆಂದು ಬಲ್ಲವರು ಹೇಳುತ್ತಾರೆ.

ಶಹರದಿಂದ ಬಹಳ ದೂರಿರುವ ಹಳ್ಳಿಯವರು ಕೆಳಗಿನ ಸೂಚನೆಗಳನ್ನು ಲಕ್ಷ್ಯದೊಳಗಿಟ್ಟುಕೊಳ್ಳುವದು ಅಗತ್ಯವಾಗಿದೆ.

ಸುತ್ತುಮುತ್ತು ಪಟಕೀ ಪಿಡಗು ಇದ್ದದ್ದು ತಿಳಿದುಬಂದಕೂಡಲೆ, ವೈದ್ಯರಿದ್ದ ಊರಿಗೆ ಹೋಗಿ ಈ ಬೇನೆಗೆ ಒಸ್ತಾದಿಯಾದ ಔಷಧವನ್ನು ತಂದಿಟ್ಟುಕೊಳ್ಳಬೇಕು; ಉಪಚಾರವನ್ನೂ ಕೇಳಿಕೊಂಡಿರಬೇಕು; ಅದರಂತೆ ರೋಗಿಯನ್ನು ಉಪಚರಿಸಬೇಕು. ಇದೂ ಆಗದಿದ್ದರೆ ಮುಂದೆ ಹೇಳಿರುವ ಔಷಧವನ್ನು ಕೊಡಬೇಕು.

ಕೇರು ೧, ಉಳ್ಳೆಗಡ್ಡಿ ೧, ಹುಣಸೀಹಣ್ಣು ೧ ತೊಲಿ, ಇಂಗು ೨ ಗುಂಜಿ, ಕಪ್ಪುರಾ ೧ ಗುಂಜಿ, ಸೈಂಧವಲವಣ ಇಲ್ಲವೆ ಉಂಬುವ ಉಪ್ಪು ½ ತೊಲಿ ಕೂಡಿಸಿ ಕಲ್ಲಮೇಲೆ ಕಲ್ಲಿನಿಂದ ಇಲ್ಲವೆ ಒರಳೊಳಗೆ ಗುಂಡುಕಲ್ಲಿನಿಂದ ಸಣ್ಣಾಗಿ ಚಟ್ಟಣಿಯಂತೆ ಮಾಡಿ, ೧೦ ತೊಲಿ ಕಾದಾರಿದ ನೀರಿನಲ್ಲಿ ಕೂಡಿಸಿ ಕಿವಚಿ ಅರಿವೆಯಲ್ಲಿ ಸೋಸಿ ರೋಗಿಗೆ ಕುಡಿಸಬೇಕು. ೩ ತಾಸಿಗೊಂದು ಸಾರೆಯಂತೆ ೩-೪ ಸಾರೆ ಕೊಟ್ಟರೆ ಸಾಕು. ಇದರಿಂದ ಗುಣವಾಗುವದೆಂದು ಅನುಭವದಿಂದ ಗೊತ್ತಾಗಿದೆ. ರೋಗಿಯ ಶಕ್ತಿಗನುಸರಿಸಿ ಮೇಲಿನ

ಔಷಧದ ಪ್ರಮಾಣವನ್ನು ಕಡಿಮೆ ಮಾಡಬಹುದು. ಬಸರು ಹೆಂಗಸರಿಗೆ ಕೇರು ಬಿಟ್ಟು ಉಳಿದದ್ದನ್ನು ಕುಡಿಸಲಿಕ್ಕೆ ಅಡ್ಡಿಯಿಲ್ಲ.

ನೀರಡಿಕೆ ಆದಾಗ್ಗೆ ಕಾದಾರಿದ ನೀರನ್ನು ತುಸುತುಸು ಕೊಡಬೇಕು. ಮೇಲಿಂದ ಮೇಲೆ ಹಗುರಾದ ಆಹಾರ (ಗಂಜಿ ಬತ್ತರಳ ಹಿಟ್ಟು, ಜೇನತುಪ್ಪ ಸಕ್ಕರೆ ಕೂಡಿಸಿದ ಹುರಿದ ಹೆಸರಿನ [೧]ಕಟ್ಟು, ಅರ್ಧ ನೀರು ಹಾಕಿ ಮರಳಿಸಿದ ಹಾಲು[೨]) ಕೊಡುತ್ತಿರಬೇಕು. ಇದರಿಂದ ಪಟಕಿಯೊಳಗಿನ ನೀರಡಿಕೆ ವಾಂತಿಗಳು ಕಡಿಮೆಯಾಗಿ ತುಸು ಶಕ್ತಿಯು ಬರುತ್ತದೆ.

ಪಟಕಿ, ಪ್ಲೇಗು ಇವೆರಡೂ ತೀವ್ರ ಪ್ರಾಣವನ್ನು ತೆಗೆದುಕೊಳ್ಳುವಂಥ ಭಯಂಕರ ರೋಗಗಳಾದದರಿಂದ, ಇವುಗಳ ಸಂಶಯವು ಬಂದಾಗ್ಗೆ ಆದಷ್ಟು ಹೆಚ್ಚು ಬಲ್ಲ ವೈದ್ಯರ ಇಲ್ಲವೆ ಡಾಕ್ಟರರ ಉಪಚಾರವನ್ನು ನಡಿಸುವದೇ ಬಹಳ ಹಿತಕರವೆಂಬದನ್ನು ಮಾತ್ರ ಯಾರೂ ಮರಿಯಬಾರದು.

## ಸಂಗ್ರಹಿಣಿಗೆ

೧. [೩]ಚಿತ್ರಮೂಲ, ಚವ್ಯ, ಎಳೆಪತ್ರೀಕಾಯಿ, ಸುಂಟಿ ಇವುಗಳ ಸಮಭಾಗ ಚೂರ್ಣವನ್ನು ಮಾಡಿ ಶಕ್ತಿ ನೋಡಿ $\frac{1}{4}$ ತೊಲಿಯಿಂದ $\frac{1}{2}$ ತೊಲಿಯ ವರೆಗೆ ಮಜ್ಜಿಗೆ ಯಲ್ಲಿ ಕೊಟ್ಟರೆ ಸಂಗ್ರಾಣಿ ರೋಗವು ಪರಿಹಾರವಾಗುವದು.

೨. ಒಣಗಿದ ದಾಳಿಂಬರಕಾಯಿ ೮ ತೊಲಿ, ಯಾಲಕ್ಕಿ, ದಾಲಚಿನ್ನಿ, ಮಗ್ಗಿ ಕೂಡಿ ೪ ತೊಲಿ, ಕಲ್ಲಸಕ್ಕರೆ ೩೨ ತೊಲಿ ಇವುಗಳ ಚೂರ್ಣಕ್ಕೆ "ದಾಡಿಮಾಷ್ಟಕ ಚೂರ್ಣ" ವೆನ್ನುತ್ತಾರೆ. ಇದು ಸಂಗ್ರಾಣಿಯನ್ನು ಬಂದು ಮಾಡಿ ನಾಲಿಗೆಗೆ ರುಚಿ ಯನ್ನು ಕೊಡುತ್ತದೆ.

೩. ಜೇಕಿನಗಡ್ಡೆ, ಅತಿಭಜಿ, ಪತ್ರೀಕಾಯಿ, ಇಂದ್ರಜವೆ ಇವುಗಳ ಸಮಭಾಗ ಚೂರ್ಣವನ್ನು $\frac{1}{4}$ ತೊಲಿ, ಜೇನತುಪ್ಪ $\frac{1}{2}$ ತೊಲಿಯೊಳಗೆ ಕೊಟ್ಟರೆ ಎಲ್ಲ ಪ್ರಕಾರದ ಸಂಗ್ರಾಣಿಯೂ ನಿಲ್ಲುವದು.

---

೧. ಕಷಾಯೋ ಭ್ರಷ್ಟಮುದ್ಗಾನಾಂ ಸಲಾಜಮಧುಶರ್ಕರಃ ॥
ನಿಹನ್ಯಾಚ್ಛರ್ಧತೀಸಾರಂ ತೃಷ್ಣಾಂ ದಾಹಂ ಜ್ವರಂ ಭ್ರಮಮ್ ॥

೨. ವಿಬದ್ಧವಾತೋ ವಿಟ್‌ಶೂಲಪರೀತಃ ಸಪ್ರವಾಹಿಕಃ ॥
ಸರಕ್ತಪಿತ್ತಶ್ಚಪಯಃ ಪಿಬೇತ್ತೃಷ್ಣಾಸಮನ್ವಿತಃ ॥
ಯಥಾಮೃತಂ ತಥಾ ಕ್ಷೀರಮತಿಸಾರೇಷು ಪೂಜಿತಮ್ ॥
ಸರಕ್ತೋತ್ಥೇಷುತತ್ಪೇಯಮಮಯಾಂ ಭಾಗೇಷು ಸಂತಸಮ್ ॥—(ನಿಘಂಟು ರತ್ನಾಕರ)

೩. ಚೂರ್ಣಂ ಚಿತ್ರಕಚವ್ಯಶ್ರೀ ವಿಶ್ವಭೇಷಜನಿರ್ಮಿತಮ್ ॥
ತಕ್ರೇಣಸಹಿತಂ ಹಂತಿ ಗ್ರಹಣೀಂದುಃ ಖಕಾರಿಣೀಮ್ ॥ —(ಲೋಲಿಂಬರಾಜ)

ಅತಿಸಾರಕ್ಕೆ ಹೇಳಿದ "ಕಪಿಥಾಷ್ಟಕ ಚೂರ್ಣ"ವೂ ಗ್ರಹಣಿರೋಗದ ಮೇಲೆ ನಡೆಯುತ್ತದೆ.

ಬಹಳ ದಿವಸದ ಸಂಗ್ರಹಣಿಗೆ ಹವಾ ಬದಲಾಯಿಸುವದು ಹಿತವು.

ಸ್ವಾಭಾವಿಕ ಹೆಂಗಸರಿಗೆ, ಗಂಡಸರಿಗೆ ಕೊಡತಕ್ಕ ಔಷಧಗಳನ್ನೇ ಕೊಡಲಿಕ್ಕೆ ಅಡ್ಡಿ ಇಲ್ಲ. ಅವರು ಗರ್ಭಿಣಿಯರಿದ್ದು ಅತಿಸಾರ, ರಕ್ತಾತಿಸಾರ, ಅಥವಾ ಜ್ವರಗಳಿಂದ ಪೀಡಿತರಾಗಿದ್ದರೆ —

೧. [೧]ಮಂಜಿಷ್ಟ ೧/೪ ತೊಲಿ, ಜೇಷ್ಠಮಧು ೧/೪ ತೊಲಿ, ಲೋದನಚಕ್ಕೆ ೧/೪ ತೊಲಿ ಇವುಗಳ ಚೂರ್ಣವನ್ನು ಸಕ್ಕರೆಯ ಪಾಕಿನಲ್ಲಿ ಹಾಕಿ ಲೇಹವನ್ನು ಮಾಡಿಕೊಡಬೇಕು.

೨. ಮಾವಿನ ತೋಟೆ ೧/೩ ತೊಲಿ, ನೇರಿಲ ತೋಟೆ ೧/೩ ತೊಲಿ ಇವುಗಳ ೧/೪ ಕಷಾಯದಲ್ಲಿ ಬತ್ತರಳಿನ ಹಿಟ್ಟನ್ನೂ ಹುರಿದ ಸದುಕಿನ ಹಿಟ್ಟನ್ನೂ ಮರಳಿಸಿ ಕೊಟ್ಟರೆ ಬಸರು ಹೆಂಗಸರ ಸಂಗ್ರಾಣಿಯು ನಿಲ್ಲುವದು.

ಹೆಂಗಸರ ಬಾಣಂತಿತನವು ಮುಗಿದ ತರುವಾಯ ಸಂಗ್ರಾಣಿಯಾಯಿತೆಂದರೆ ಅದಕ್ಕೆ ಬಾಣಂತಿಬೇನೆ ಎನ್ನುತ್ತಾರೆ. ಇದರಲ್ಲಿ ಜ್ವರಾದಿ ರೋಗಗಳು ಕೂಡ ಅಸಾಧ್ಯಕ್ಕೆ ಬೀಳುತ್ತದೆ.

ಬಡತನದಿಂದೋ ಅನಾದರದಿಂದೋ ಬಾಣಂತಿತನದಲ್ಲಿ ತಕ್ಕ ಆರೈಕೆಯಾಗದ್ದರಿಂದ ಈ ಬೇನೆ ಹುಟ್ಟುವದೆಂದು ಬಹಳ ಜನ ಹೆಂಗಸರು ತಿಳಿಯುತ್ತಾರೆ. ಆ ಮಾತು ಕೆಲವಂಶದಿಂದ ನಿಜವಿರುತ್ತದೆ. ಆದರೆ ಬಹಳಪಾಲಿಗೆ ನಮ್ಮ ಹೆಣ್ಣುಮಕ್ಕಳ ಅಂಧ ಪ್ರೀತಿಯೇ ಈ ರೋಗಕ್ಕೆ ಕಾರಣವಾಗುವದೆಂದು ಖಂಡಿತವಾಗಿ ಹೇಳಬಹುದು. ಬಾಣಂತಿಯ ತಾಯಿಯಾಗಲಿ, ಮತ್ತಾವ ಆಪ್ತ ಹೆಣ್ಣು ಮಗಳಾಗಲಿ, ಬಾಣಂತಿಯ ಹಿತವನ್ನೇ ಮಾಡುತ್ತೇನೆಂದು ಗ್ರಹಿಸಿ, ಅವಳಿಗೆ ಅತ್ಯುಷ್ಣ ಔಷಧವನ್ನು ಕೊಟ್ಟು ಅದರ ಶಾಂತಿಗಾಗಿ ಬಹಳ ತುಪ್ಪವನ್ನೂ ಮತ್ತು ಅಂಟಿನುಂಡಿ, ಅಳವೇಉಂಡಿ ಮೊದಲಾದ ಪೌಷ್ಟಿಕಾಹಾರಗಳನ್ನೂ ಮಿತಿಮೀರಿ ಕೊಟ್ಟು ಅವಳಿಗೆ ಜನರ ದೃಷ್ಟಿಯಾದೀತೆಂದು ಗಾಳಿ ಸುಳಿಯದ ಹಗೆಯಂಥ ಕೋಣೆಯೊಳಗೇ ಕೂಡ್ರಿಸಿ ಅಜೀರ್ಣ ಮುಂತಾದ ರೋಗಕ್ಕೆ ಗುರಿಮಾಡುತ್ತಾಳೆ. ಅದೇ ಬರಬರುತ್ತ ಬಾಣಂತಿ ಬೇನೆಯ ಉಗ್ರಸ್ವರೂಪವನ್ನು ತಾಳುತ್ತದೆ.

ಇತ್ತಿತ್ತ ಸುಧಾರಿಸಿದ ರೀತಿ ನಡಾವಳಿಗಳನ್ನು ಬಲ್ಲಂಥವರಲ್ಲಿ ಮಾತ್ರ ಈ ಪ್ರಮಾದಗಳಾಗುವದು ಕಡಿಮೆ.

---

೧. ಜ್ವರಾತಿಸಾರೇ ಗರ್ಭಿಣ್ಯಾಃ ಶಸ್ತಂ ಸಾಮೇಸಶೋಣಿತೇ ॥
ಸಮಂಗಾಮಧುಕಂ ಲೋಧ್ರಂ ಫಾಣಿತಂ ಶರ್ಕರಾನ್ವಿತಮ್ ॥ — (ನಿಘಂಟು ರತ್ನಾಕರ)

ಅವರವರ ಪಚನಶಕ್ತಿಯನ್ನರಿತು ಆಹಾರವಿಹಾರ ಮಾಡಿಸುವದೇ ಹಿತಕಾರಿಯಾಗುತ್ತದೆ. ಈ ಮಾತನ್ನು ಶುಶ್ರೂಷೆ ಮಾಡತಕ್ಕವರು ಯಾವಾಗಲೂ ಧ್ಯಾನದಲ್ಲಿಡತಕ್ಕದ್ದು.

೧. **ಆದ್ರ್ರಕುಟಜಾವಲೇಹ :** ೧೦೦ ತೊಲಿ ಕೋಲಮುರಕನ ಹಸೀ ತೋಟಿಯನ್ನು ಜಜ್ಜಿ ೧೬ ಪಟ್ಟು ನೀರೊಳಗೆ ಕುದಿಸಿ ⅟ಗೆ ಇಳಿಸಿ ಬೇರೆ ಪಾತ್ರೆಗೆ ಬಸಿದುಕೊಂಡು ಅದರೊಳಗೆ ಮುಟ್ಟಲಮುರಿಕೆ, ಧಾತಕೀಕುಸುಮ, ಎಳೆಪತ್ರೀಕಾಯಿ, ಅಗಳಸುಂಟಿ, ಬೂರಲ ಅಂಟು, ಜೀಕಿನಗಡ್ಡೆ, ಅತಿಬಜಿ ಒಂದೊಂದು ತೊಲಿ ತಕ್ಕೊಂಡು ಚೂರ್ಣ ಮಾಡಿ ಹಾಕಬೇಕು. ಪುನಃ ಒಲೆಯಮೇಲಿಟ್ಟು ಸೌಟಿಗೆ ಹತ್ತುವಂತೆ ಪಾಕ ಮಾಡಿ ಹಳೇ ತುಪ್ಪದ ಪಾತ್ರೆಯಲ್ಲಾಗಲಿ ಚೀನೀಮಣ್ಣಿನ ಬರಣಿಯಲ್ಲಾಗಲಿ ಗಟ್ಟಿಯಾಗಿ ಮುಚ್ಚಿಡಬೇಕು. ೭ ದಿವಸಗಳಾದ ತರುವಾಯ ನೀರು, ಅಕ್ಕೀಗಂಜಿ, ಆಡಿನ ಹಾಲು, ಯಾವದಾದರೊಂದು ಅನುಪಾನದಲ್ಲಿ ದಿನಾಲು ⅟ ತೊಲಿಯಷ್ಟು ಸೇವಿಸಿದರೆ ವೇದನಾಯುಕ್ತವಾದ ಅತಿಸಾರ ರಕ್ತಶೌಚ, ಮೂಲವ್ಯಾಧಿ, ಸ್ತ್ರೀರೋಗ, (ಮುಟ್ಟು ಹರಿಯುವದು) ಇವುಗಳೆಲ್ಲ ದೂರಾಗುತ್ತವೆ.[೧]

೨. **ಮೆಂಥೇದ ಉಂಡೆ :** ಶುಂಠಿ, ಮೆಣಸು, ಹಿಪ್ಪಲಿ, ಅಳ್ಳೀಕಾಯಿ, ತಾರೇಕಾಯಿ, ನೆಲ್ಲೀಕಾಯಿ, ಜೀಕಿನಗಡ್ಡಿ, ಜೀರಿಗೆ, ಕಾಳಜೀರಿಗೆ, ಕೋತಂಬರೀಬೀಜ, ಕಾಯಿಫಳಾ, ಪುಷ್ಕರಮೂಲ, ಇಲ್ಲವೆ ಔಡಲಬೇರು, ಕಾಕಡಶಿಂಗಿ, ಅಜಿವಾನ, ಸೈಂಧವಲವಣ, ಬಿಡಾಲವಣ, ಚಾಳೀಸಪತ್ರಿ, ಮುಗ್ಗಿ, ಪತ್ರಾಜ, ದಾಲಚಿನ್ನಿ, ಯಾಲಕ್ಕಿ, ಜಾಜೀಕಾಯಿ, ಪತ್ರಿ, ಲವಂಗ, ಮುರಾ (ಒಂದು ತರದ ಸುಗಂಧ ದ್ರವ್ಯ, ಇದೇ ಹೆಸರಿನಿಂದ ಮಾರುತ್ತದೆ.) ಗಂಧದ ಕೆಚ್ಚು, ಪಚ್ಚಕರ್ಪೂರ ಇವುಗಳೆಲ್ಲ ಒಂದೊಂದು ತೊಲಿಯಂತೆ, ಸರಿಗೆ ಸರೀತೂಕ ಮೆಂಥೆ, ಇವುಗಳ ಚೂರ್ಣವನ್ನು ಮಾಡಿ ಹಳೇ ಬೆಲ್ಲವನ್ನು ಕೂಡಿಸಿ ಉಂಡೀ ಕಟ್ಟಬೇಕು. ಬೇರೆ ಪದಾರ್ಥಗಳ ಪುಡಿ ಎಲ್ಲಾ ಆದ ಬಳಿಕ ಬೆಲ್ಲವನ್ನು ಕೂಡಿಸುವಾಗ್ಗೆ ಪಚ್ಚಕರ್ಪೂರದ ಪುಡಿಯನ್ನು ಕೂಡಿಸಬೇಕು. ಪ್ರತಿಯೊಂದು ಉಂಡಿಯು ತೊಲಿಯಕ್ಕಿಂತ ದೊಡ್ಡದಿರಬಾರದು. ೧ ತೊಲಿ ತುಪ್ಪ, ⅟ ತೊಲಿ ಜೇನತುಪ್ಪ ಇವುಗಳ ಕೂಡ

---

೧ ಕುಟಜತ್ವಕ್ತುಲಾಮಾದ್ರಾಂ ದ್ರೋಣನೀರೇವಿಪಾಚಯತ್ ||
ಪಾದಶೇಷಂ ಶ್ರುತಂನೀತ್ವಾ ಚೂರ್ಣಾನ್ಯೇತಾನಿದಾಪಯೇತ್ ||
ಲಜ್ಜಾಲುರ್ಧಾತಕೀಬಿಲ್ವಂ ಪಾಠಾಮೋಚರಸಸ್ತಥಾ ||
ಮುಸ್ತಂ ಪ್ರತಿ ವಿಷಾಚೈವ ಪ್ರತ್ಯೇಕಂ ಸ್ಯಾತ್ಪಲಂ ಪಲಮ್ ||
ತತಸ್ತುವಿಪಚೇದ್ಭೂಯೋಯಾವಾದ್ದರ್ವೀಪ್ರಲೇಪನಮ್ ||
ಜಲೇನ ಛಾಗದುಗ್ಧೇನ ಪೀತೋಮಂಡೇನ ವಾಜಯೇತ್ ||
ಸರ್ವಾತಿಸಾರಾಂಘೋರಾಂಸ್ತು ನಾನಾವರ್ಣಾನ್ಸವೇದನಾನ್ ||
ಅಸೃಗ್ದರಂ ಲಸ್ಸಂ ಚ ಸರ್ವಾರ್ಶಾಂಸಿ ಪ್ರವಾಹಿಕಮ್ ||

—ಶಾರ್ಙ್ಗಧರ

ಈ ಉಂಡಿಯನ್ನು ಸೇವಿಸುವದರಿಂದ ಅಗ್ನಿಪ್ರದೀಪ್ತವಾಗಿ ಆಂವಶೌಚ ಮುಂತಾದ್ದು ನಿಲ್ಲುತ್ತದೆ.[೧] ಬಾಣಂತೀಬೇನೆ ಹೋಗಿ ಮೊಲೆಯಲ್ಲಿ ಹಾಲು ಹೆಚ್ಚುತ್ತದೆ.

ಹುಡುಗರ ಅತಿಸಾರಕ್ಕೆ ಅರಿವೆಯೆಂದು ಅನ್ನುವದುಂಟು. ಹುಡುಗರಿಗೆ ಹಲ್ಲು ಬರುವಾಗಲೂ ತರತರದ ಹೊರಕಡಿಗೆಯಾಗುತ್ತಿರುತ್ತದೆ. ಅನುಭವಿಕರಾದ ಕೆಲವು ಜನರು ಕೂಸುಗಳ (ಒಮ್ಮೊಮ್ಮೆ ದೊಡ್ಡವರ) ಪಾದದ ಮೇಲೆ ಕೊಬ್ಬರೇ ಎಣ್ಣೆಯನ್ನು ಹಚ್ಚಿ ನರಾ ಹಿಡಿದು ತಿಕ್ಕುತ್ತಾರೆ; ಇದಕ್ಕೆ "ಅರಿವೇಮುರಿಯೋಣ" ಎಂಬ ಹೆಸರು; ಇದರಿಂದ ರೋಗ ಶಾಂತಿಯಾಗುವದೂ ಕೆಲವು ಕಡಿಗೆ ಕಂಡುಬರುತ್ತದೆ. ಹುಡುಗರಿಗೆ ಅಜೀರ್ಣ, ಜಂತುಗಳು ಆಗುವ ಸಂಭವವು ಬಹಳ. ಆ ರೋಗಗಳಿಂದ ಹೊಟ್ಟೆ ಜಾಡಿಸುತ್ತಿದ್ದರೆ, ಆಯಾ ರೋಗದಲ್ಲಿ ಹೇಳಿದ ಔಷದಗಳನ್ನೇ ಕೊಡಬೇಕು. ಹಲ್ಲು ಬರುವಾಗ್ಗೆ ಹೀಗಾಗಹತ್ತಿದ್ದರೆ ಸೌಮ್ಯ ಆಹಾರದಲ್ಲಿಟ್ಟರೆ ೨-೩ ದಿವಸದಲ್ಲಿ ಔಷಧವಿಲ್ಲದೆಯೂ ಗುಣವಾಗುತ್ತದೆ.

ಹುಡುಗರ ಅತಿಸಾರಕ್ಕೆ (೧) ಧಾತಕೀಕುಸುಮ, ಎಳೆ ಬೆಲಪತ್ರೀಕಾಯಿ, ಲೋದನಚಕ್ಕೆ, ಬಾಳದಬೇರು, ದೊಡ್ಡಹಿಪ್ಪಲಿ ಇವುಗಳನ್ನು ಸಮವಾಗಿ ಹಾಕಿ ಕಷಾಯ ಮಾಡಿ ಶೀಶೆಯಲ್ಲಿ ತುಂಬಿಡಬೇಕು. ಸರ್ತಿಗೆ ೧-೨ ಸಣ್ಣ ಚಮಚೆ (ಅವರ ವಯಸ್ಸು ನೋಡಿ) ತಕ್ಕೊಂಡು, ಅದರಲ್ಲಿ ೩ ತೊಲಿ ಜೇನತುಪ್ಪ ಕೂಡಿಸಿ ಕುಡಿಸಬೇಕು. ಇಲ್ಲವೇ ಇದೇ ಕಷಾಯದಲ್ಲಿ ಸಕ್ಕರೆಯನ್ನು ಹಾಕಿ ಕಾಕವಿಯಂತೆ ಪಾಕ ಮಾಡಿ ಆರಿಸಿ ಜೇನುತುಪ್ಪ ಕೂಡಿಸಿ ಇಡಬೇಕು. ಅದನ್ನೇ ತುಸು ತುಸು ದಿನಕ್ಕೆ ೩ ಸಾರೆ ಕೊಡಬೇಕು. ಇದರಿಂದ ಹುಡುಗರ ಎಲ್ಲ ಬಗೆಯ ಅತಿಸಾರಗಳೂ ನಾಶವಾಗುತ್ತವೆ. (೨) ಹಿಪ್ಪಲಿ, ಅತಿಬಜಿ, ಜೇಕಿನಗಡ್ಡಿ, ಕಾಕಡಶಿಂಗಿ ಇವುಗಳ ಚೂರ್ಣವನ್ನು ಎರಡುಪಟ್ಟು ಜೇನುತುಪ್ಪದಲ್ಲಿ ತಿನಿಸಿದರೆ ಹುಡುಗರ ಜ್ವರ, ಅತಿಸಾರ, ದಮ್ಮು, ಕೆಮ್ಮು, ವಾಕರಿಕೆ ಇವುಗಳೆಲ್ಲ ಶಾಂತವಾಗುತ್ತವೆ. ದೊಡ್ಡವರ ಅತಿಸಾರದ ಮೇಲಿನ ಎಲ್ಲ ಔಷಧಗಳನ್ನು ಅಲ್ಪ ಪ್ರಮಾಣದಿಂದ ಕೊಟ್ಟರೂ ಗುಣವಾಗುತ್ತದೆ.

---

೧. ತ್ರಿಕಟು ತ್ರಿಫಲಾಮುಸ್ತಜೀರಕದ್ವಯಧಾನ್ಯಕಮ್ ||<br>
ಕಟಫಲಂ ಶೃಂಗೀಯವಾನೀಸೈಂಧವಂ ಬಿಡಮ್ ||<br>
ಕಾಸೀಸಂ ಕೇಸರಂ ಪತ್ರಂ ತ್ವ ಗೋಲಾ ಚ ಫಲಂ ತಥಾ ||<br>
ಜಾತೀಕೋಶಂ ಲವಂಗಂ ಚ ಮುರಾಕರ್ಪೂರ ಚಂದನಮ್ ||<br>
ಯಾವಂತ್ಯೇತಾನಿ ಚೂರ್ಣಾನಿ ತಾವದೇವತುಮೋಧಿಕಾ ||<br>
ಸಂಚೂರ್ಣ್ಯಮೋದಕಃ ಕಾರ್ಯಃ ಪುರಾತನ ಗುಡೇನ ಚ ||<br>
ಘೃತೇನಮಧುನಾ ಕಿಂಚಿತ್ಖಾದೇದಗ್ನಿಬಲಂ ಪ್ರತಿ ||<br>
ಅಗ್ನಿಂ ಚ ಕುರುತೇ ದೀಪ್ತಂ ಸಾಮೇ ಭೇದೇ ಮಹೌಷಧಮ್ ||

—ಭೈಷಜ್ಯರತ್ನಾವಲೀ

ಪಥ್ಯಾಪಥ್ಯಗಳು,[೧] ಉಪವಾಸ, ವಾಂತಿಯಾಗದಿದ್ದರೆ ವಾಂತಿ ಮಾಡಿಕೊಳ್ಳುವದು ಹಿತಕರವಾಗುತ್ತವೆ. ಹಳೇ ಅಕ್ಕಿ, ತೊಗರೀಬೇಳೆ, ಅಕಳು ಇಲ್ಲವೆ ಆಡಿನ ತುಪ್ಪ, ಬೆಣ್ಣೆ, ಬತ್ತರಳು, ಅಟೋಲಿ, ಗಂಜಿ, ಮೆಂಥೆಯಪಲ್ಲೆ, ಕೋತಂಬರಿ, ಕರಿಬೇವು, ಅಲ್ಲ, ಡಾಳಿಂಬರಹಣ್ಣು, ಬೆಳವಲಹಣ್ಣು, ಬೋರೇಹಣ್ಣು, ಜಾಜೀಕಾಯಿ ಇವೆಲ್ಲ ಪಥ್ಯವಾಗಿವೆ.

ಈಸುವದು, ಎಣ್ಣೆಹಚ್ಚಿ ಎರೆದುಕೊಳ್ಳುವದು, ವ್ಯಾಯಾಮ, ಬೆಂಕೀಕಾಸಿಕೊಳ್ಳುವದು (ಶೂಲಿಗೆ ಕಾಸುವದನ್ನು ಬಿಟ್ಟು ಬೇರೆ ತರದಿಂದ) ಹೊಸ ಕಾಳುಗಳು, ಖೀರುತುಪ್ಪ ಮುಂತಾದ ಹೆಡಸಿನ ಪದಾರ್ಥವನ್ನು ಹೆಚ್ಚಿಗೆ ತಿನ್ನುವದು, ಸ್ತ್ರೀಸಹವಾಸ, ಹೋಳಿಗೆ ಮೊದಲಾದ ಯಾವತ್ತು ಜಡ ಪದಾರ್ಥಗಳು, ತಣ್ಣೀರು, ಬೇರೆ ತೊಪ್ಪಲ ಪಲ್ಲೆಗಳು, ಸವತೀಕಾಯಿ, ಹಸೆಕೊಬ್ಬರಿ ಮುಂತಾದ ಬರ್ಷಣ ಪದಾರ್ಥಗಳು ಅಪಥ್ಯವಾಗಿವೆ.

ಜಂತುಗಳಾದರೂ ಅತಿಸಾರದಂತೆ ಭಯಂಕರ ಉಪದ್ರವವಾಗುತ್ತದೆ. ಅದನ್ನು ಚನ್ನಾಗಿ ವಿಚಾರಿಸಿ ಔಷಧಯೋಜನೆಯನ್ನು ಮಾಡಬೇಕು.

ಅತಿಸಾರ, ಆಂವಶೌಚ, ಸಾಂಗ್ರಾಣಿ ರೋಗದಿಂದ ಪೀಡಿತರಾದವರಿಗೆ ನೀರಡಿಕೆ, ದಮ್ಮು, ಕೆಮ್ಮು, ಜ್ವರ, ಬಾವು, ಮೂರ್ಛೆ, ಬಿಕ್ಕು, ಅನ್ನಾರುಚಿ, ಓಕರಿಕೆ, ಶೂಲಿ ಈ ಎಲ್ಲ ಉಪದ್ರವಗಳಾಗಲಿ, ಇದರೊಳಗಿನ ಹೆಚ್ಚು ಉಪದ್ರವಗಳಾಗಲಿ ಹೆಚ್ಚಾದರೆ ರೋಗವು ಅಸಾಧ್ಯವಾಯಿತೆಂದು ತಿಳಿಯಬೇಕು. ಈ ಸ್ಥಿತಿಯಲ್ಲಿ ತಮ್ಮ ಇಷ್ಟ ದೇವರನ್ನು ಸ್ಮರಿಸುವದೇ ಉಪಾಯವೆಂದು ಪ್ರಾಚೀನ ವೈದ್ಯರು ಹೇಳಿರುತ್ತಾರೆ.[೨]

## ಅರ್ಶ (ಮೂಲವ್ಯಾಧಿ)

ಅರ್ಶವೆಂದರೆ ಸೂಕ್ಷ್ಮ ಚರ್ಮದ ಮೊಳೆ ಎಂದೇ ಸಾಮಾನ್ಯ ಅರ್ಥವಿದೆ. ಈ ಮೊಳೆಗಳು ಕಣ್ಣು ಮೂಗು ಮುಂತಾದ ಸೂಕ್ಷ್ಮ ಸ್ಥಳಗಳೊಳಗೂ ಒಮ್ಮೊಮ್ಮೆ ಏಳು

---

೧. ಧಾತಕೀಬಿಲ್ವಲೋಧ್ರಾಣಿ ವಾಳಕಂ ಗಜಪಿಪ್ಪಲೀ ॥
ಏಭಿಃ ಕೃತಂಶ್ರಿತಂ ಶೀತಂ ಶಿಶುಭ್ಯಃ ಕ್ಷೌದ್ರಸಂಯುತಮ್ ॥
ಪ್ರದದ್ಯಾದವಲೇಹಂ ವಾ ಸರ್ವಾತೀಸಾರ ಶಾಂತಯೇ ॥
ಕೃಷ್ಣಾರುಣಾಮುಸ್ತಕಶೃಂಗಿಕಾಣಾಂ, ತುಲ್ಯೇನ ಚೂರ್ಣೇನ ಸಮಾಕ್ಷಿಕೇಣ ॥
ಜ್ವರಾತಿಸಾರಃ ಪ್ರಶಮಂಪ್ರಯಾತಿ ಸ ಶ್ವಾಸಕಾಸಃ ಸ ವಮಿಃ ಶಿಶೂನಾಮ್ ॥
—ಶಾರ್ಙ್ಗಧರ

೨. ತೃಟ್‌ಶ್ವಾಸಕಾಸಜ್ವರಶೋಥಮೂರ್ಛಾ ಹಿಕ್ಕಾನ್ನವಿದ್ವೇಷಣವಾಂತಿಶೂಲೈಃ ॥
ಯುಕ್ತೋಽತಿಸಾರೀಸ್ಮರತುಪ್ರಸಹ್ಯ ಗೋವಿಂದಗೋಪಾಲಗದಾಧರೇತಿ ॥
—ಲೋಲಿಂಬರಾಜ

ತ್ತಿರುತ್ತವೆ. ಮಲದ್ವಾರದಲ್ಲಿ ಬಹಳವಾಗಿ ಏಳುವದರಿಂದ ಅರ್ಶವೆಂದರೆ ಮೂಲವ್ಯಾಧಿ ಎಂದು ಬಹು ರೂಢವಾದ ಹೆಸರು ಬಂದಿದೆ. ಈ ಮೊಳೆಗಳಿಗೆ ಸ್ಥಳ ಪರತ್ವದಿಂದ ನಾಸಾರ್ಶ (ಮೂಗಿನಮೊಳೆ) ನೇತ್ರಾರ್ಶ (ಕಣ್ಣುಮೊಳೆ) ಮುಂತಾದ ಹೆಸರೂ ಕೊಡಲ್ಪಡುತ್ತದೆ.

ನಾವು ಇಲ್ಲಿ ಅರ್ಶವೆಂದರೆ ಬಹು ರೂಢವಾದ ಅರ್ಥದಂತೆಯೇ ಮೊದಲು ಅದರ ವಿಚಾರವನ್ನು ಮಾಡುತ್ತೇವೆ.

ಹಸಿವೆ ಕಡಿಮೆಯಾಗುವದು, ಅನ್ನದಲ್ಲಿ ರುಚಿ ಕಡಿಮೆಯಾಗುವದು, ಹೊಟ್ಟೆಯುಬ್ಬೋಣ, ಒಳಗೆ ಗುಡುಗುಡು ಶಬ್ದವಾಗೋಣ, ಮಲಬದ್ಧವಾಗೋಣ, ತೇಗು ಬರೋಣ, ಮಲವು ಎದೆಗೆ ಏರಿದಂತೆ ಅನಿಸೋಣ, ಅಲ್ಪಾಲ್ಪ ಮಲವಾಗಿ ಅದರಗೂಡ ರಕ್ತಬೀಳೋಣ, ಮಲವು ಗಟ್ಟಿ ಹೆಂಟೆಯಾಗಿ ಇಲ್ಲವೆ ಹಿಕ್ಕೆಯಾಗಿ ರಕ್ತಹತ್ತಿ ಬೀಳೋಣ, ಮೊದಲು ನಾಲ್ಕೆಂಟು ಹನಿ ರಕ್ತ ಬೀಳೋಣ ಇಲ್ಲವೆ ಹಿಂದಿನಿಂದ ಬಹಳ ರಕ್ತ ಬೀಳೋಣ, ಗುದದ್ವಾರದಲ್ಲಿ ತಿಂಡಿ, ಮೊಳೆಗಳು ಏಳೋಣ, ಬಾವು, ಉರುವು, ಶೂಲಿ, ಕೈಕಾಲಲ್ಲಿ ಸಾಮರ್ಥ್ಯವಿಲ್ಲದಂತಾಗೋಣ ಇವೆಲ್ಲ ಅಥವಾ ಇವುಗಳೊಳಗಿನ ಕೆಲವು ಲಕ್ಷಣಗಳಿದ್ದರೆ ಮೂಲವ್ಯಾಧಿಯೆಂದು ಹೇಳಬೇಕು.

ಕೆಲವರಿಗೆ ತಂದೆತಾಯಂದಿರ ದೋಷದಿಂದ ಹುಟ್ಟಾ ಈ ರೋಗವಿರುತ್ತದೆ. ೧೮–೨೦ ವರ್ಷ ಪ್ರಾಯದವರು ಕೂತಲ್ಲೇ ಕೂಡ್ರುವದರಿಂದೂ ಈ ರೋಗವಾಗುವ ಸಂಭವವದೆ. ಉಂಡುಂಡು ವ್ಯಾಯಾಮವಿಲ್ಲದೆ ಸುಮ್ಮನೆ ಕೂಡ್ರುವ ಶ್ರೀಮಂತರಿಗೂ ಈ ರೋಗವು ಹುಟ್ಟುತ್ತದೆ. ಹೊಟ್ಟೆಯೊಳಗಿನ ಗಂಟು, ಕಾಳಜರೋಗ, ಮೇಲಿಂದ ಮೇಲೆ ಜುಲಾಬಿನ ಔಷಧವನ್ನು ತೆಗೆದುಕೊಳ್ಳೋಣ ಇವುಗಳಿಂದ ಮೂಲವ್ಯಾಧಿಯು ಹುಟ್ಟುತ್ತದೆ.

ವಾತುಲ ಪದಾರ್ಥ (ಕಸದ ಬದಕು) ತಿನ್ನುವದರಿಂದಲೂ ಅತಿಶಯ ಮದ್ಯಪಾನ ಸ್ತ್ರೀವ್ಯಸನಗಳಿಂದಲೂ ಉಪವಾಸ ಅತಿಶ್ರಮ ಅತಿಶೋಕ ಮುಂತಾದವುಗಳಿಂದಲೂ ವಾತಮೂಲವ್ಯಾಧಿಯುಂಟಾಗುತ್ತದೆ. ಇದರಲ್ಲಿ ವಾತವಿಕಾರಗಳು ಹೆಚ್ಚು ಕಂಡು ಬರುತ್ತಿರುತ್ತವೆ.

ಬಹಳ ಕಾರ ತಿನ್ನೋಣ, ಬಿಸಲು ಬೆಂಕಿಗಳ ಜಳ ಬಡಿಸಿಕೊಳ್ಳೋಣ, ತೀಕ್ಷ್ಣವಾದ ಮದ್ಯಾರ್ಕವನ್ನು ಕುಡಿಯೋಣ, ಉಷ್ಣ ರೋಗವುಳ್ಳ ಸ್ತ್ರೀಯರ ಸಹವಾಸ ಮಾಡೋಣ, ಬೇರೆಯವರ ಏಳಿಗೆಯನ್ನು ನೋಡಿ ಹೊಟ್ಟೇಕಿಚ್ಚು ಮಾಡೋಣ ಇವುಗಳಿಂದ ಪಿತ್ತವಿಕಾರವುಳ್ಳ ಮೂಲವ್ಯಾಧಿಯುಂಟಾಗುತ್ತದೆ.

ಯಾವಾಗಲೂ ಸೀಯಾದ ಅನ್ನಪಾನ ಮಾಡೋಣ, ಹಗಲು ನಿದ್ದೆ, ಜಡಾನ್ನ ಅತಿಶೀತ ಇವುಗಳಿಂದ ಕಫದ ಲಕ್ಷಣವುಳ್ಳ ಮೂಲವ್ಯಾಧಿಯಾಗುತ್ತದೆ.

ಮಿಶ್ರಲಕ್ಷಣಗಳಿಂದ ಕೂಡಿದ್ದೇ ಸನ್ನಿಪಾತ ಮೂಲವ್ಯಾಧಿಯೆನಿಸುತ್ತದೆ. ವಾತದಿಂದುಟಾದ ಮೊಳೆಗಳು ತೊಂಡೀಕಾಯಿ, ಹತ್ತೀಕಾಯಿ ಮುಂತಾದ ತರತರದ ಆಕೃತಿಯವಿರುತ್ತವೆ. ಕೆಲವು ತೀರ ಸಾಸಿವೇ ಕಾಳಿನಷ್ಟು ಸಹ ಇರುತ್ತವೆ. ಮಲಮೂತ್ರ ಉಗುರು ಕಣ್ಣುಗಳು ಕಪ್ಪುಛಾಯವನ್ನು ಹೊಂದುತ್ತವೆ.

ಪಿತ್ತದ ಮಳೆಗಳು ಮೃದುವಾಗಿಯೂ ನೀಲಿಕೆಂಪು ಮಾಂಸಬಣ್ಣದವಾಗಿಯೂ ಬಿಸಿಯಾಗಿಯೂ ಇರುತ್ತವೆ. ಮಲಮೂತ್ರ ಮುಂತಾದ್ದು ಅರಿಸಿಣಬಣ್ಣದ್ದಾಗುತ್ತದೆ. ಕಫವಿಕಾರದಿಂದ ಮಿದುವಾಗಿಯೂ ಬಿಳೀ ಬಣ್ಣದವಾಗಿಯೂ ಬಹಳ ನೋವನ್ನುಂಟು ಮಾಡದೆ ಭಾರವಾಗಿದ್ದಂತೆ ಕಾಣಿಸುತ್ತಿರುತ್ತವೆ. ಇದರಿಂದ ಮಲಮೂತ್ರ ಮೊದಲಾದದ್ದು ಬಿಳೀಬಣ್ಣ ಒರೆಯುತ್ತದೆ.

ಒಳಗೆ ಮೊಳೆಗಳಿದ್ದು ರಕ್ತ ಸೋರದೆ ನೋವಾದರೆ ಒಣ ಮೂಲವ್ಯಾಧಿಯೆಂದೂ ರಕ್ತಸೋರಿ ಹೊರದೋರುವದಕ್ಕೆ ರಕ್ತಮೂಲವ್ಯಾಧಿಯೆಂದೂ ಸಾಮಾನ್ಯವಾಗಿ ಜನರೂಢಿಯುಂಟು. ಮೇಲೆ ಹೇಳಿದ ಲಕ್ಷಣಗಳನ್ನು ಚನ್ನಾಗಿ ಪರೀಕ್ಷಿಸಿ ಔಷಧ ಯೋಜನೆ ಮಾಡತಕ್ಕದ್ದು.

ಒಮ್ಮೊಮ್ಮೆ ಈ ರೋಗವು ಆಗಿ, ತಿಂಗಳೆರಡುತಿಂಗಳಲ್ಲಿ ತಾನೇ ಶಾಂತವಾಗುವದೂ ಉಂಟು. ಹಾಗೆ ಕಡಿಮೆಯಾಗದೆ ದಿನಂಪ್ರತಿ ರಕ್ತ ಹೋಗುವದರಿಂದಾಗಲಿ ಕೆಲವು ದಿವಸ ತಡೆದು ತಡೆದು ರಕ್ತ ಹೋಗುವದರಿಂದಾಗಲಿ ಮನುಷ್ಯನು ಕ್ಷೀಣನಾಗಹತ್ತಿದರೆ ಈ ರೋಗವು ಅಸಾಧ್ಯಕ್ಕೆಳಿಯಿತೆಂದು ತಿಳಿಯಬೇಕು. ಈ ರೋಗದಗೂಡ ಭಗೇಂದ್ರ (ಭಗಂದಿರ) ಮೈಹೊರಬೀಳೋಣ ಈ ರೋಗಗಳೂ ಕಂಡುಬರುತ್ತವೆ.

ಹೆಂಗಸರು ಗರ್ಭಿಣಿಯರಿರುವಾಗ ಗರ್ಭದ ಭಾರವು ಕೆಳಗಡೆ ಬಿದ್ದು ರಕ್ತವಾಹಿನಿಗಳು ಕುಪಿತವಾಗಿ ಮೂಲವ್ಯಾಧಿಯಾಗುವದುಂಟು. ಕೆಲವರಿಗೆ ಮುಟ್ಟು ತಡೆದು ಮೂಲವ್ಯಾಧಿಯ ರೂಪದಿಂದೇ ರಕ್ತವು ಹರಿದು ಹೋಗುವದೂ ಉಂಟು. ಗರ್ಭಿಣಿಯರಿಗೆ ಆಕಸ್ಮಿಕವಾಗಿ ಆದ ಮೂಲವ್ಯಾಧಿಯೂ ಅವರು ಹಡೆದ ಬಳಿಕ ತಾನೇ ಶಾಂತವಾಗುತ್ತದೆ.

## ಉಪಚಾರವು

ಮೂಲವ್ಯಾಧಿ[೧], ಅತಿಸಾರ, ಸಂಗ್ರಹಣಿ ರೋಗಗಳು ಒಂದೇ ವರ್ಗದವೆನ್ನಲಿಕ್ಕೆ ಅಡ್ಡಿಯಿಲ್ಲ. ಇವು ಒಂದರಿಂದೊಂದು ಹುಟ್ಟುತ್ತಿರುತ್ತವೆ. ಆದದರಿಂದ ಈ ರೋಗಗಳಲ್ಲಿ ಜಠರಾಗ್ನಿಯನ್ನು ಚನ್ನಾಗಿ ಕಾಯ್ದುಕೊಳ್ಳುವದೇ ಮುಖ್ಯವಾದ ಉಪಾಯವು.

೧. ಅರ್ಶೋಽತಿಸಾರಗ್ರಹಿಣೀ ವಿಕಾರಾಃ । ಪ್ರಾಯೇಣ ಚಾನ್ಯೋನ್ಯನಿದಾನಭೂತಾಃ ॥
ಸನ್ನೇನಲೇ ಸಂತಿ ನಸಂತಿ ದೀಪ್ತೇ । ರಕ್ಷೇದತಸ್ತೇಷು ವಿಶೇಷತೋಽಗ್ನಿಂ ॥
— ನಿಘಂಟು ರತ್ನಾಕರ

ದೀರ್ಘಾಯುಷ್ಯಕ್ಕೆ ಧಾತುಬಲವು ಮುಖ್ಯವಾಗಿರುವಂತೆ ಶರೀರಬಲಕ್ಕೆ ಅಗ್ನಿ[೧]ಯೇ ಪ್ರಬಲವಾದ ಕಾರಣವು. ಸ್ವಾಭಾವಿಕವಾಗಿ ಮುಪ್ಪಿನಲ್ಲಿ ಅಗ್ನಿಬಲವು ಕಡಿಮೆಯಾಗುವದರಿಂದ ಮೂಲವ್ಯಾಧಿ ಮುಂತಾದ ರೋಗಗಳು ಬರುವದು ಸರ್ವರ ಅನುಭವದ ಮಾತಾಗಿದೆ.

**ವಾತಾರ್ಶಕ್ಕೆ :** ಸೈಂಧವಲವಣ, ಬಿಡಲೌಣ, ಚಿತ್ರಮೂಲ, ಇಂದ್ರಜವೆ, ಪತ್ರೀಕಾಯಿ, ಬೇವಿನತೋಟಿ ಇವುಗಳ ಚೂರ್ಣವನ್ನು ಶಕ್ತಿಗನುಸರಿಸಿ ೄ ತೊಲಿಯಿಂದ ೧ತೊಲಿ ವರೆಗೆ ತಕ್ಕೊಂಡು ೫ ತೊಲಿ ಮಟ್ಠದಲ್ಲಿ (ಬೆಣ್ಣೆ ತೆಗೆಯದ ಮಜ್ಜಿಗೆಯಲ್ಲಿ) ೭ ದಿವಸ ಕೊಡುವದರಿಂದ ವಾತಾರ್ಶ ಪರಿಹಾರವಾಗುತ್ತದೆ.

ಆರ್ದ್ರಕುಟಜಾವಲೇಹವನ್ನು ಕೊಡಬೇಕು.

**ಪಿತ್ತಾರ್ಶ[೨]ಕ್ಕೆ :** ಕೇರು, ಎಳ್ಳು, ಅಳ್ಳೀಕಾಯಿ ಇವುಗಳ ಸಮಾನ ಚೂರ್ಣದಲ್ಲಿ ಅಷ್ಟೇ ಹಳೇ ಬೆಲ್ಲವನ್ನು ಕೂಡಿಸಿ ಗುಳಿಗೆಗಳನ್ನು ಮಾಡಿಡಬೇಕು. ೄ ತೊಲಿ ತೂಕದ ಗುಳಿಗೆಯನ್ನು ರೋಗಿಯ ಬಲವನ್ನು ನೋಡಿ ಒಪ್ಪತ್ತು ಇಲ್ಲವೆ ಎರಡೂ ಹೊತ್ತು ಕೊಡಬೇಕು. ಒಂದು ತಿಂಗಳೊಳಗೆ ಪಿತ್ತಾರ್ಶವು ಹೋಗುವದು. ಪಥ್ಯವು— ಹೆಸರಿನ ಕಟ್ಟು ಅನ್ನ.

**ಕಫಾರ್ಶ[೩]ಕ್ಕೆ :** ೧ ತೊಲಿ ಅಲ್ಲವನ್ನು ಜಜ್ಜಿ ೧ ಶೇರು ನೀರಿನಲ್ಲಿ ಕಷಾಯ ಮಾಡಿ ೧ ಇಳಿಸಿ ಕ್ಕೆ ದಿನಾಲು ತಕ್ಕೊಳ್ಳಬೇಕು.

**ಮೇಲುಪಚಾರ[೪] :** ಕೇರು, ಹಸ್ತಿದಂತ–ಆನೆಯ ಎಲವು ಸಿಕ್ಕರೆ ಒಳ್ಳೆಯದು. ಜ್ಯಾಮಳದ ಬೇರು, ಬೇವಿನಕೆಚ್ಚು, ಅಡಿವಿ ಪಾರಿವಾಳದ ಮಲ, ಬೆಲ್ಲ, ಪಟಕ, ಬಚನಾಗ ಇವುಗಳನ್ನು ನೀರಲ್ಲಿ ತೇಯ್ದು ಹಚ್ಚಬೇಕು.

---

೧. ಅಗ್ನಿಮೂಲಂ ಬಲಂ ಪುಸಾಂ ರೇತೋ ಮೂಲಂ ಚ ಜೀವಿತಮ್ ||
ತಸ್ಮಾತ್ಸರ್ವಪ್ರಯತ್ನೇನ ವಹ್ನಿಂ ಶುಕ್ರಂ ಚ ರಕ್ಷಯೇತ್ ||
— ಯೋಗರತ್ನಾಕರ

೨. ಭಲ್ಲಾತಕಂ ತಿಲಂ ಪಥ್ಯಾ ಚೂರ್ಣಂ ಗುಣಸಮನ್ವಿತಮ್ ||
ಮೋದಕಂ ಭಕ್ಷಯೇತ್ಕರ್ಷಂ ಮಾಸಾತ್ಪಿತ್ತಾರ್ಶಸಾಂಜಯೇ ||
ಪಥ್ಯಂ ಮುದ್ಗರಸೈರ್ದೇಯಂ ಶಾಲಿತಂಡುಲಸಂಯುತಮ್ ||
—ನಿಘಂಟು ರತ್ನಾಕರ

೩. ಕಫಜೇ ಶೃಂಗವೇರಸ್ಯ ಕ್ವಾಥೋ ಸಿತ್ಯೋಪಯೌಗಿಕಃ ||

೪. ಭಲ್ಲಾತಕಗಜಾಸ್ಥೀನಿ ದಂತೀ ನಿಂಬ ಕಪೋತವಿಟ್ ||
ಗುಡಸೌರಾಷ್ಟ್ರ್ಯಮೃತ (,) ಜೈರ್ಲೇಪಕ್ಕೆ ಶ್ಲೀಷ್ಮಾರ್ಶಸಾಂಜಯೇ ||
ನವನೀತತಿಲೈಃ ಕಲ್ಕೋಜೀತಾಸ್ಮಾರ್ಶಸಾಮ್ಮ್ಯತಃ ನವನೀತಸಿತಾನಾಗಕೇಶರೈ
ಶ್ಚಾಪಿತದ್ವಿಧಃ ||
—ಶಾರ್ಙ್ಗಧರ

**ರಕ್ತಮೂಲವ್ಯಾಧಿಗೆ :** ಒಂದು ತೊಲೆ ಬಿಳೀ ಎಳ್ಳನ್ನು ಜಜ್ಜಿ ಎರಡು ತೊಲೆ ತಾಜಾ ಬೆಣ್ಣೆಯಲ್ಲಿ ಬೆರೆಸಿ ತಕ್ಕೊಳ್ಳಬೇಕು. ಅಥವಾ ಮಗ್ಗೆ ೧/೨ ತೊಲಿ, ಕಲ್ಲುಸಕ್ಕರೆ ೧/೨ ತೊಲಿ, ತಾಜಾಬೆಣ್ಣೆ ೨ ತೊಲಿ ಕೂಡಿಸಿ ದಿನಾಲು ತಕ್ಕೊಂಡರೆ ರಕ್ತಮೂಲವ್ಯಾಧಿಯು ನಿಲ್ಲುವದು. ಕಪ್ಪುರ, ಊದು, ಗಾಂಜಿ ಇವುಗಳೊಳಗಿನ ಯಾವದಾದರೊಂದರ ಹೊಗಿ ಕೊಡುವದೂ ಹಿತಕರವು.

ಸೋನಾಮುಖಿ ಇಲ್ಲವೆ ಔಡಲೆಣ್ಣೆಯನ್ನು ಕೊಟ್ಟು ಜುಲಾಬು ಮಾಡಿಸಬೇಕು. ಈ ರೋಗಕ್ಕೆ ಮತ್ತ್ಯಾವ ಕಠೋರ ಜುಲಾಬಿನ ಔಷಧವನ್ನು ಕೊಡಕೂಡದು. ಔಡಲೆಣ್ಣೆಯನ್ನು ಬಸರು ಹೆಂಗಸರಿಗೆ ಸಹ ಕೊಡಬಹುದು.

೧. ಕಂಕೋಳ ಇಲ್ಲವೆ ಬಾಲಮೆಣಸು ೨ ತೊಲಿ, ಮೆಣಸು ೧/೪ ತೊಲಿ, ಸಬ್ಬಸಿಗೆ ೧ ತೊಲಿ, ಜೇನತುಪ್ಪ ೨ ತೊಲಿ ಕೂಡಿಸಿಟ್ಟು ಮುಂಜಾನೆ ೧/೨ ತೊಲಿ, ಸಂಜಿಗೆ ೧/೨ ತೊಲಿ, ದಿನಾಲು ತಕ್ಕೊಳ್ಳಬೇಕು. ಎಲ್ಲ ತರದ ಮೂಲವ್ಯಾಧಿಗೆ ಹಿತಕರವು.

೨. ಸಕ್ಕರೆ ೧೮ ತೊಲಿ, ಸುವರ್ಣಗಡ್ಡಿ ೫ ತೊಲಿ, ಬಿಳೀಗುಲಗಂಜಿ ೧ ತೊಲಿ, ಮಗ್ಗಿ ೧ ತೊಲಿ ಈ ಚೂರ್ಣವನ್ನು ಎರಡಾಣೆಯಿಂದ ಪಾವಲಿ ತೂಕದ ವರೆಗೆ ಜೇನು ತುಪ್ಪದಲ್ಲಿ ಅಥವಾ ಬೆಣ್ಣೆಯಲ್ಲಿ ತಕ್ಕೊಳ್ಳಬೇಕು.

**ಮೊಳಿಗಳಿಗೆ ಹಚ್ಚುವ ಮಲಾಮು :** ಮಾಪಾಳಕಾಯಿ ಪುಡಿ ೧ ತೊಲಿ, ಅಫು ೧/೨ ತೊಲಿ, ಬೆಣ್ಣೆ ೩ ತೊಲಿ ಕೂಡಿಸಿ ಮೇಲೆ ಹಚ್ಚಿದರೆ ಗುಣವಾಗುತ್ತದೆ.

ಮೊಳಿಗಳನ್ನು ತೊಳಿಯುವದಕ್ಕೆ ತ್ರಿಫಲಾದ ಕಷಾಯ ಇಲ್ಲವೆ ಪಟಕದ ಪುಡಿ ಹಾಕಿದ ನೀರು ಉಪಯೋಗಿಸಬೇಕು.

[1]ಅರಿಶಿಣಪುಡಿ ಹಾಗೂ ಕಳಿಗಳ್ಳಿಯ ಹಾಲು ಕೂಡಿಸಿ ಅದರಲ್ಲಿ ದಾರವನ್ನು ತೋಯಿಸಿ ಒಣಗಿಸಬೇಕು. ಹೀಗೆ ಬಹಳ ಸಾರೆ ತೋಯಿಸಿ ಒಣಗಿಸುವದರಿಂದ ದಾರಕ್ಕೆ ಔಷಧದ ಪುಟವು ಏರುತ್ತದೆ. ಆ ದಾರದಿಂದ ಮೂಲವ್ಯಾಧಿಯ ಮೊಳಿಗಳನ್ನು ಬಿಗಿದು ಕಟ್ಟುವದರಿಂದ ಅವು ಕತ್ತರಿಸಿ ಉದುರಿ ಬೀಳುತ್ತವೆ.

ಈಸಗುಂಬಳ ( ವಿಷಗುಂಬಳ ) ಕಾಯಿಯ ಕಷಾಯದಿಂದ ಗುದಪ್ರಕ್ಷಾಲನ ಮಾಡುತ್ತಿದ್ದರೆ ಮೊಳೆಗಳು ಕಡಿಮೆಯಾಗುತ್ತವೆ.

ಅರಿಷಿಣ, ಕಹಿಹೀರೀಕಾಯಿ, ಸೈಂಧವಲವಣ ಇವುಗಳ ಚೂರ್ಣಮಾಡಿ ಕಳ್ಳೀ ಹಾಲು, ಗೋಮೂತ್ರಗಳಲ್ಲಿ ಕಲಿಸಿ ಮೊಳಿಗಳಿಗೆ ಹಚ್ಚುವದರಿಂದ ಗುಣವಾಗುತ್ತದೆ.

---

೧ ಭಾವಿತಂ ರಜನೀ ಚೂರ್ಣೈಃ ಸ್ನುಹೀ ಕ್ಷೀರೇ ಪುನಃ ಪುನಃ ॥
ಬಂಧನಾತ್ಸುದೃಢಸೂತ್ರಂ ಭಿನತ್ಯರ್ಶೋ ಭಗಂದರಮ್ ॥

—ಚಕ್ರದತ್ತ

[೧] ಎಕ್ಕೆಯಬೇರು, ಬನ್ನೀಎಲೆ, ಮನುಷ್ಯರ ತಲೆಯ ಕೂದಲು, ಹಾವಿನಪರೆ, (ಸಿಕ್ಕರೆ ಸತ್ತ ಬೆಕ್ಕಿನ ಒಣಗಿದ ತೊಗಲು) ತುಪ್ಪ ಇವುಗಳನ್ನೆಲ್ಲ ಕೂಡಿಸಿ ಮೂಲವ್ಯಾಧಿಗೆ ಹೊಗೆ ಕೊಡಬೇಕು. ಹೊರಸು, ಬೆತ್ತದ ಖುರ್ಚಿಗಳ ಮೇಲೆ ಕೂತು ಕೆಳಗೆ ಅಗ್ಗಿಷ್ಟಿಗೆಯಲ್ಲಿ ಬೆಂಕೆಯ ಮೇಲೆ ಈ ಪದಾರ್ಥಗಳ ಪುಡಿಯನ್ನು ಹಾಕಿ ಹೊಗೆ ತೆಗೆದುಕೊಳ್ಳಬೇಕು. ಕೆಲವರು ಒರಳೊಳಗೆ ಬೆಂಕೆ ಹಾಕಿ ಅದರ ಮೇಲೆ ಈ ಪುಡಿ ಹಾಕಿ ಹೊಗೆ ತೆಗೆದುಕೊಳ್ಳುವರು. ಹ್ಯಾಗೇ ಆಗಲಿ ಮೂಲವ್ಯಾಧಿಗೆ ಹೊಗೆ ಬಡಿದರಾಯಿತು. ಯಾವದೂ ಪ್ರಕಾರದ ಉಗ್ರ ಔಷಧದ ಹೊಗೆ ತಕ್ಕೊಳ್ಳುವಾಗ ಆ ಹೊಗೆಯು ಕಣ್ಣು ಮೂಗು ಬಾಯಿಗಳಲ್ಲಿ ಹೋಗದಂತೆ[೨] ಎಚ್ಚರದಿಂದಿರಬೇಕು.

[೩]ಅಶ್ವಗಂಧ, ಲಕ್ಕೀಸೊಪ್ಪು, ನೆಲಗುಳ್ಳದಕಾಯಿ, ಹಿಪ್ಪಲಿ ಇವುಗಳ ಹೊಗೆಯಿಂದ ತೀವ್ರವಾಗಿ ಮೂಲವ್ಯಾಧಿಯ ಉಪದ್ರವವು ಕಡಿಮೆಯಾಗುತ್ತದೆ.

[೪]ಮೊಳೆಗಳು ಬೆಳಿಯುವದರಿಂದ ಮಲಬದ್ಧವಾಗಿ, ರಕ್ತಸುರಿದು, ತಿಂಡಿಬಿಟ್ಟು ಬಹಳ ತ್ರಾಸವಾದರೆ, ಜಿಗಳಿಗಳನ್ನು ಹಚ್ಚಿ, ರಕ್ತ ಹೀರಿಸಿ ತೆಗೆಯುವದೇ ಮಹತ್ವದ ಉಪಾಯವೆಂದು ಪೂರ್ವಿಕರು ತಿಳಿಯುತ್ತಿದ್ದರು. ಈ ಹೊತ್ತಿಗೂ ಅನುಭವಿಕರಾದ ಗೊಲ್ಲರು ಈ ಉಪಾಯದಿಂದ ಸೆಟ್ಟಗೆ ಮಾಡುತ್ತಾರೆ. ಮೊಳೆಗಳಿಗೇ ಜಿಗಳೆಯನ್ನು ಹಚ್ಚಿಸದೆ ಹತ್ತರಿರುವ ಸೋವಿನ ಪ್ರದೇಶದಲ್ಲಿ ಹಚ್ಚಿಸತಕ್ಕದೆಂದು ಅರ್ವಾಚೀನ ಅನುಭವಿಕ ವೈದ್ಯರೂ[೫] ಬರೆದಿರುತ್ತಾರೆ.

ಮೂಗು, ಕಿವಿ, ಕಣ್ಣು, ಜನನೇಂದ್ರಿಯ, ಹೊಕ್ಕಳು ಇಂಥ ನಾಜೂಕ ಸ್ಥಳಗಳಲ್ಲಿ ಹುಟ್ಟಿದ ಮೊಳೆಗಳಿಗೆ ಬಲ್ಲಂಥ ವೈದ್ಯರಿಂದೇ ಉಪಾಯ ಮಾಡಿಸಬೇಕು. ಈ ರೋಗಕ್ಕೆ ಕ್ಷಾರಗಳನ್ನು ಹಚ್ಚುವದು, ಉಷ್ಣದ್ರಾವಕಗಳ ಬೊಟ್ಟಿಡುವದು, ಕೊಯ್ಯುವದು ಮೊದಲಾದ ಬೇರೆ ಉಪಾಯಗಳೂ ಇವೆ. ಅವುಗಳನ್ನು ಆಯಾ ಕಸಬಿನಲ್ಲಿ ನುರಿತವರು ಮಾಡುವದೇ ಒಳ್ಳೆಯದು. ಶಸ್ತ್ರಾದಿ ಕ್ರಿಯೆಯಿಂದ ರಕ್ತ ಹೋಗುವ

---

೧. ಕರ್ಕನಮೂಲಂ ಶಮೀಪತ್ರಭೃಕೇಶಾಃ ಸರ್ಪಕಂಚುಕೀ ||
ಮಾರ್ಜಾರಚರ್ಮಚಾಜ್ಯಂ ಚ ಗುಧೂಪೋರ್ಶಸಾಂಹಿತಃ ||

೨. ಉಷ್ಣದ ದೆಸೆಯಿಂದ ಇಂಗಳೀಕದ ಹೊಗೆಯನ್ನು ತಕ್ಕೊಂಡು ಬಾಯಿಬಂದು ಕಣ್ಣು ಮಂದಾದ ಜನರನ್ನು ನೋಡಿದ್ದೇವೆ !

೩. ಅಶ್ವಗಂಧಾ ಚ ನಿರ್ಗುಂಡೀ ಬೃಹತೀಪಿಪ್ಪಲೀಫಲಮ್ ||
ಧೂಪೋಯಂ ಸ್ಪರ್ಶಮಾತ್ರೇಣ ಹ್ಯರ್ಶಸಾಂ ಶಮನಹ್ಯಲಮ್ ||
—ನಿಘಂಟು ರತ್ನಾಕರ

೪. ವಿಬಂಧೇರ್ಶಸಿಚೋತ್ಸಿಕ್ತೇ ಕಂಡೂಮದ್ರಕ್ತವಾಹಿನಿ ||
ಜಲೌಕಾಪಾತನಾದನ್ಯಃ ಪ್ರಯೋಗೋನಾಸ್ತಿಕಶ್ಚನ ||

೫. ಶಾರೀರ ಆಣಿ ವೈದ್ಯಕಶಾಸ್ತ್ರ, ಪುಟ ೬೧೨

ಸಂಭವವಿದೆ. ಮೊದಲೇ ರಕ್ತವು ಸೋರಿ ಕೆಲವು ರೋಗಿಗಳು ಹೈರಾಣವಾಗಿರುತ್ತಾರೆ. ಇಂಥವರಲ್ಲಿ ರಕ್ತವನ್ನು ಕಾಯ್ದುಕೊಂಡು ಕೆಲಸ ಮಾಡಬೇಕು.

ಹುಟ್ಟು ಇದ್ದಂಥ ಹಾಗೂ ತ್ರಿದೋಷಗಳ ಮಿಶ್ರಣದಿಂದುಂಟಾದಂಥ ಒಳಗೇ ಮೊಳಿಗಳಿಂದ ತುಂಬಿದಂಥ ಕೈಕಾಲು ಹೊಕ್ಕಳು ವೃಷಣಗಳು ಬಾತಂಥ ಪಕ್ಕಶೂಲಿ, ನೀರಡಿಕೆ, ಜ್ವರ ಮುಂತಾದ ಬೇರೆ ಉಪದ್ರವಗಳಿಂದ ಕೂಡಿದಂಥ ಅರ್ಶ ರೋಗವು ಅಸಾಧ್ಯವೆಂದು ತಿಳಿಯಬೇಕು.

**ಪಥ್ಯಾಪಥ್ಯ :** ಹಳೇ ಅಕ್ಕಿ, ಆಕಳತುಪ್ಪ, ತಾಜಾಬೆಣ್ಣೆ, ಪಡವಲಕಾಯಿ, ಬೆಳವಲಕಾಯಿ ತೀವ್ರ ಪಚನವಾಗುವಂಥ ಎಲ್ಲ ಆಹಾರಗಳು ಹಿತಕರವಾಗುತ್ತವೆ.

ಉದ್ದು, ಮೊಸರು, ಮಾವಿನಹಣ್ಣು, ಬಸಳೀಸೊಪ್ಪು ಮೊದಲಾದ ಜಡಾನ್ನವೂ ಬರಷಣದ ಹಾಗು ಕಸದ ಬದಕುಗಳೂ ಮಲಮೂತ್ರ ಬಿಗಿಹಿಡಿಯುವದೂ ಕುದುರೆ ಮುಂತಾದ್ದನ್ನು ಹತ್ತುವದೂ ಸ್ತ್ರೀ ಸಹವಾಸವೂ ಈ ರೋಗಕ್ಕೆ ಅಪಾಯಕರವಾಗುತ್ತವೆ.

## ಅಪಸ್ಮಾರ (ಮಲರೋಗ)

ಮಿದುಳಿನ ರೋಗ, ದುಃಖ, ಚಿಂತೆ, ಅಂಜಿಕೆ, ಮನಸ್ಸಿನ ದುಡಿಕೆ ಎಂದರೆ ನ್ಯಾಯಾಧೀಶರು, ವಕೀಲರು, ಲೇಖಕರು, ವಿದ್ಯಾರ್ಥಿಗಳು ಮುಂತಾದವರು ಎಡೆಬಿಡದೆ ವಿಚಾರ ಮಾಡುವದು, ತಲೆಗೆ ಪೆಟ್ಟು ತಗಲುವದು, ರಕ್ತ ಕೆಡುವದು, ಉಷ್ಣ (ಗರಮಿ) ರೋಗ, ಸಂಧಿವಾತ, ಮುಷ್ಟಿ ಮೈಥುನ, ಅತಿ ಸ್ತ್ರೀಸಂಗ, ಒಮ್ಮಿಂದೊಮ್ಮೆ ಹೆಚ್ಚು ಕಡಿಮೆಯಾಗೋಣ- ಉಷ್ಣ ದೇಶದಿಂದ ಅತಿ ಶೀತದೇಶಕ್ಕೆ ಹೋಗೋಣ, ನೆಟ್ಟಗಿದ್ದ ವ್ಯಾಳ್ಯೆದೊಳಗೆ ಆಪ್ತೇಷ್ಟರು ಅಕಸ್ಮಾತ್ ನಾಶವಾದ ವರ್ತಮಾನ ಬರೋಣ, ಶಿಡ್ಲು ಮಿಂಚು ಅಪಘಾತಗಳನ್ನು ನೋಡೋಣ- ಬೀಳೋಣ ಇಲ್ಲವೆ ಬೇರೆ ತರದ ಬೇನೆ ಮೊದಲಾದ ಕಾರಣದಿಂದ [೧]ಮಲಗಳು (ವಾತ ಪಿತ್ತ ಕಫಗಳು) ಕುಪಿತವಾಗಿ ಹದಿನೈದು ದಿವಸಕ್ಕೊಮ್ಮೆ ತಿಂಗಳಿಗೊಮ್ಮೆ ಅಪಸ್ಮಾರ ರೋಗವು ಬರುತ್ತದೆ.

ಈ ರೋಗದಿಂದ ಪೀಡಿತರಾದ ತಾಯಿ-ತಂದೆಗಳ ಸಂತತಿಗೆ ಶರೆಬಡಕರ ಸಂತತಿಗೆ, ಬಸರಿದ್ದಾಗ ಹೆಂಗಸಿಗೆ ಬಹಳ ಅಂಜಿಕೆಯುಂಟಾದಾಗ ಗರ್ಭದಲ್ಲಿ ವಿಕಾರ ಸಹಿತವಾಗಿ ಹುಟ್ಟಿದ ಸಂತತಿಗೆ ಮಲರೋಗವು ಬರುತ್ತದೆ. ಒಮ್ಮೊಮ್ಮೆ ಸಶಕ್ತ ಮನುಷ್ಯನಿಗೂ ಏನೂ ವಿಕಾರವಿಲ್ಲದೆ ಈ ಬೇನೆಯು ಬರುತ್ತದೆ. ಇದಕ್ಕೆ ದೇವರ ಕೋಪ ಇಲ್ಲವೆ ಪೂರ್ವಾರ್ಜಿತವೇ ಅನ್ನಬೇಕು. ಇದರ ಕಾರಣಗಳನ್ನು ಮಿದುಳಿನಲ್ಲಿ ಶೋಧಿಸಿ ನೋಡಿದರೆ ಏನೂ ಕಂಡುಬರುವದಿಲ್ಲವೆಂದು[೨] ಆಧುನಿಕ ವೈದ್ಯರು ಬರೆಯುತ್ತಾರೆ.

---

೧. ಪಕ್ಷಾದ್ವಾದ್ವಾದಶಾಹಾದ್ವಾಮಾಸಾದ್ವಾಕುಪಿತಾಮಲಾಃ ||
ಅಪಸ್ಮಾರಾಯ ಕುರ್ವಂತಿ ಕಿಂಚಿದ್ವೇಗಮಥಾಂತರಮ್ || —ನಿಘಂಟು ರತ್ನಾಕರ

೨. ಶಾರೀರ ಆಣಿ ವೈದ್ಯಕ ಶಾಸ್ತ್ರ, ಪುಟ ೪೯೪

ಅಪಸ್ಮಾರದಲ್ಲಿ ಸಾಧಾರಣಾಪಸ್ಮಾರವೆಂತಲೂ ವೇಗದ ಅಪಸ್ಮಾರವೆಂತಲೂ ಎರಡು ಪ್ರಕಾರಗಳಿವೆ. ಸಾಧಾರಣ ಅಪಸ್ಮಾರದ ಲಕ್ಷಣಗಳು : ಮೊದಲು ಏನೂ ಗೊತ್ತಿಲ್ಲದೆ ಮನುಷ್ಯನು ನಿಶ್ಚೇಷ್ಟನಾಗುತ್ತಾನೆ. ಖಬರು ತಪ್ಪುತ್ತದೆ; ಮೋರೆ ಕಪ್ಪಾಗುತ್ತದೆ, ಕೈಕಾಲುಗಳ ನರಗಳು ತುಸು ಜಗ್ಗಿದಂತಾಗುತ್ತವೆ. ಸ್ವಲ್ಪ ವೇಳೆಯೊಳಗೇ ರೋಗಿಯು ಎಚ್ಚರಾಗಿ ಗಾಬರಿಯಾದವನಂತೆ ಮಾಡುತ್ತಾನೆ. ಮೊದಲು ಏನಾಯಿತೆಂಬದು ಅವನಿಗೆ ಗೊತ್ತಾಗುವದಿಲ್ಲ.

ವೇಗದ ಅಪಸ್ಮಾರದಲ್ಲಿ ಮೂರು ಅವಸ್ಥೆಗಳಿದ್ದು ಇವುಗಳ ಚಿನ್ಹಗಳು ಬೇರೆ ಬೇರೆ ಇರುತ್ತವೆ.

ಮೊದಲನೇ ಅವಸ್ಥೆಯಲ್ಲಿ ಮನುಷ್ಯನಿಗೆ ಮೈಮೇಲಿ ಗಾಳಿಯೋ ನೀರೋ ಹುಳು ಕೀಡಿಗಳೋ ಕೈಮೇಲಿಂದ ತಲೆಯಕಡೆಗೆ ಇಲ್ಲವೆ ಕಾಲಕಡೆಯಿಂದ ಎದೆಯ ಕಡೆಗೆ ಏರಿದಂತೆ ಅನಿಸುತ್ತದೆ. ರೋಗಿಯು ಒಮ್ಮಿಂದೊಮ್ಮೆಲೇ ಚಟ್ಟನೆ ಚೀರುತ್ತಾನೆ. ಒಬ್ಬೊಬ್ಬರು ಒದರುವದೂ ಇಲ್ಲ. ನನಗೆ ಇನ್ನು ರೋಗವು ಬರುವದೆಂದು ಅವನಿಗೆ ಗೊತ್ತು ಮಾತ್ರ ಆಗುತ್ತದೆ. ಕೂಡಲೆ ನಿಂತಲ್ಲೇ ಬಿದ್ದು ಬಿಡುತ್ತಾನೆ. ನರಗಳು ಬಿಗಿಯ ಹತ್ತುತ್ತವೆ. ತಲೆಯು ಹಿಂದಕ್ಕೆ ಸೆಟೆಯುತ್ತದೆ, ಮೋರೆಯು ವಿರೂಪವಾಗಿ ಕಾಣ ಹತ್ತುತ್ತದೆ, ಹಲ್ಲುಗಟಗರಿಯುತ್ತವೆ. ಕಣ್ಣುಗಳು ಒಟಾರಿಸಿ (ಮುಚ್ಚದೆ) ಗುಡ್ಡಿಗಳು ಒತ್ತಟ್ಟಿಗೆ ಸರಿಯುತ್ತವೆ. ಶ್ವಾಸವು ಬಂದಾಗುತ್ತದೆ. ಮೋರೆ ಬಾಡಿದಂತಾಗಿ ಕೂಡಲೇ ಕಪ್ಪಾಗುತ್ತದೆ. ಕಣ್ಣುಗುಡ್ಡೆಯು ದೊಡ್ಡದಾದಂತೆ ಕಂಡು ನಾಡಿಯು ತೀರ ಮೆಲ್ಲನೆ ನಡೆಯುತ್ತದೆ. ಈ ಚಿಹ್ನಗಳೆಲ್ಲಾ ಕೆಲವು ಸೇಕಂದುಗಳಲ್ಲಿಯೇ ಆಗಿಹೋಗುತ್ತವೆ.

ಎರಡನೇ ಅವಸ್ಥೆಯಲ್ಲಿ ಉಸುಲು ಸಿಕ್ಕಂತಾಗಿ ಸ್ನಾಯುಗಳು ಬಿಗಿಯಹತ್ತುತ್ತವೆ; ರೋಗಿಯು ಹಲ್ಲು ಕಡೆಯುತ್ತಾನೆ. ಬಾಯಿಂದ ಬುರುಗು ಬರಹತ್ತುತ್ತದೆ. ಒಮ್ಮೊಮ್ಮೆ ನಾಲಿಗೇ ಕುಡಿದುಕೊಂಡದ್ದರಿಂದ ಬಾಯಿಂದ ರಕ್ತವೂ ಬರುತ್ತದೆ. ಬೊಟ್ಟುಗಳು ಒಳಸೇದಿ ಕೈಮುಟಿಕೆಯಾಗುತ್ತವೆ; ಬೆವರು ಬಂದು ಎದೆಯು ಹಾರಹತ್ತುತ್ತದೆ. ಮಲಮೂತ್ರವೀರ್ಯಗಳು ತಾವೇ ಹೋಗುತ್ತವೆ; ಹೊಟ್ಟೆಯಲ್ಲಿ ಗುಡುಗುಡು ಸಪ್ಪಳಾಗುತ್ತದೆ. ಈ ಲಕ್ಷಣಗಳೆಲ್ಲ ಹತ್ತೆಂಟು ಮಿನಿಟುಗಳಲ್ಲಿ ಆಗಿಹೋಗುತ್ತದೆ.

ಮೂರನೇ ಅವಸ್ಥೆಯಲ್ಲಿ ಶಳವು ಬಂದಾಗಿ, ರೋಗಿಯು ತುಸುತುಸು ಶುದ್ಧಿಯ ಮೇಲೆ ಬರಹತ್ತುತ್ತಾನೆ. ಅವನು ಗಾಬರೆಯಾಗುತ್ತಾನೆ. ಮೈಯೆಲ್ಲ ಬೆವರಿನಿಂದ ತೊಯ್ದು ಬಸಿಯುತ್ತಿರುತ್ತದೆ. ಎಚ್ಚರಾಗಿ ಏನೋ ವಿಚಾರದಲ್ಲಿದ್ದವನಂತೆ ತೋರುತ್ತಾನೆ. ಕೆಲವರು ಹಾಗೇ ನಿದ್ದೆ ಮಾಡಹತ್ತುತ್ತಾರೆ; ಕೆಲವರಿಗೆ ಒಮ್ಮಿಂದೊಮ್ಮೆ ಬಹಳ ಮೂತ್ರವು ಹೋಗುತ್ತದೆ. ಕೆಲವರು ಸುಂದಾಗಿ ಬಿದ್ದುಕೊಂಡಿರುತ್ತಾರೆ, ಅವರ ಕೈಕಾಲು ಹೋದಂತಾಗಿರುತ್ತವೆ.

ಈ ಅಪಸ್ಮಾರದ ರೋಗವು ದಿನಕ್ಕೊಂದು ಸಾರೆ ಇಲ್ಲವೆ ವರ್ಷಾರು ತಿಂಗಳಿಗೊಮ್ಮೆ ಬರುತ್ತದೆ. ಮೊದಲು ಮೊದಲು ತಡವಾಗಿಯೇ ಬರುವದುಂಟು. ಅಂತೂ ಇದಕ್ಕೆ ಯಾವ ನಿಯಮವೂ ಹತ್ತುವದಿಲ್ಲ. ಹೆಂಗಸು ಇರಲಿ ಗಂಡಸು ಇರಲಿ, ಹುಡುಗರಿರಲಿ ಮುದುಕರಿರಲಿ, ಹಗಲಾಗಲಿ ರಾತ್ರಿಯಾಗಲಿ, ನಿದ್ದೆ ಹತ್ತಿದಾಗಾಗಲಿ ಎಚ್ಚರವಿರುವಾಗಾಗಲಿ, ಬೇಕಾದಾಗ ಬೇಕಾದ ಸ್ಥಿತಿಯಲ್ಲಿ ಇದರ ಉಪದ್ರವವಾಗುತ್ತದೆ.

ನಡುವಿನ ಸ್ಥಿತಿಯಲ್ಲಿ ಶಳವು ಹೆಚ್ಚಾಗಿ ಒಮ್ಮೊಮ್ಮೆ ರೋಗಿಯ ಯಾವದಾದರೊಂದು ಅವಯವವೇ ಬಾಧಾಗುತ್ತದೆ. ಒಮ್ಮೊಮ್ಮೆ ಮಿದುಳಿನ ಮೇಲೆ ಪರಿಣಾಮವಾಗಿ ಹುಚ್ಚು ಹಿಡಿಯುವದುಂಟು.

## ಉಪಚಾರವು

ರೋಗಿಯ ದೇಹವನ್ನು ಚನ್ನಾಗಿ ಕಾಯ್ದುಕೊಳ್ಳುತ್ತಿರಬೇಕು. ನಾಲಿಗೆಯನ್ನು ಕಡಿದುಕೊಳ್ಳಬಾರದೆಂದು ಹಲ್ಲುಗಳಲ್ಲಿ ತೀರ್ಥಸವಟು ಬೂಚು ಮೊದಲಾದ ಪದಾರ್ಥಗಳನ್ನು ಸೇರಿಸಬೇಕು. ಅಂಗಿಯ ಕಸಿಬಿರಡಿಗಳನ್ನು ಉಚ್ಚಿ ಗಾಳಿ ಬಡಿಯಗೊಡಬೇಕು. ಶಳತವು ಬಹಳ ಹೊತ್ತು ನಡೆದರೆ, ಮೋರೆಗೆ ನೀರು ಉಗ್ಗಬೇಕು. ಪಕಡಿಗಳಿಗೆ ಹಾಗು ನೆತ್ತಿಗೆ ಬರ್ಫು ಹಚ್ಚಬೇಕು. ಕುತ್ತಿಗೆಯ ಹಿಂಭಾಗಕ್ಕೆ ಸಾಸಿವೆಯ ಪಟ್ಟಿಯನ್ನು ಕೂಡಿಸಬೇಕು. ಇಂಥ ರೋಗಿಗಳನ್ನು ಒಬ್ಬರನ್ನೇ ನೀರು-ಬೆಂಕಿಗಳಿದ್ದಲ್ಲಿ ಎಂದೂ ಹೋಗಗೊಡಬಾರದು. ಅಗ್ನಿಪ್ರದೀಪ್ತವಾಗಿ ಮಲಶುದ್ಧಿಯಾಗುವಂಥ ಔಷಧವನ್ನು ಕೊಡಬೇಕು. ಬೇರೆ ರೋಗಗಳು (ಉಷ್ಣ ಮುಂತಾದ್ದು) ಇದ್ದರೆ ಅವುಗಳಿಗೆ ಪರಿಹಾರಕವಾದ ಔಷಧ ಕೊಡಿಸಬೇಕು. ಸಾರಾಯಿ ಮುಂತಾದ ವ್ಯಸನಗಳಿದ್ದರೆ ಕೂಡಲೆ ಬಿಡಿಸಬೇಕು. ರೋಗಿಯನ್ನು ಚಲೋ ಹವೆಯಲ್ಲಿ ಅಥವಾ ತೀರ್ಥಕ್ಷೇತ್ರಗಳಲ್ಲಿ ಇಡಬೇಕು.

೧. ಚವಲಿಯಿಂದ ಪಾವಲಿಯ ವರೆಗೆ (ಅವರವರ ಶಕ್ತಿಗನುಸರಿಸಿ) ಬಜೀ ಪುಡಿಯನ್ನು ಅರ್ಧರೂಪಾಯಿ ತೂಕ ಜೇನುತುಪ್ಪದಲ್ಲಿ ದಿನಾಲು ಸೇವಿಸಿದರೆ ಕಠಿಣವಾದ ಅಪಸ್ಮಾರವೂ ನಾಶವಾಗುತ್ತದೆ. ಈ ಔಷಧವನ್ನು ತಕ್ಕೊಳ್ಳುವವರೆಗೆ ಹಾಲು ಅನ್ನವನ್ನೇ ಉಣ್ಣುತ್ತಿರಬೇಕು.

೨. ಸಂಡಿಗಿಗುಂಬಳದ ತಿಳಲಿನ ರಸದೊಳಗೆ ಜ್ಯೇಷ್ಟಮಧುವನ್ನು ತೆಯ್ದು ಒಂದು ತೊಲಿಯಷ್ಟು ಮೂರು ದಿವಸ ತಕ್ಕೊಂಡರೂ ಗುಣವಾಗುವದೆಂದು ಹೇಳಲ್ಪಟ್ಟಿದೆ. ರೋಗವು ಬಂದಾಗ ೩ ದಿವಸ ಈ ಔಷಧವನ್ನು ಸೇವಿಸಬೇಕು.

೩. ಒಂದೆಲಗಿನ (ಸರಸ್ವತೀ ಬಳ್ಳಿಯ) ರಸದಲ್ಲಿ ಕೋಷ್ಠ ಕೊಳಿಂಜನದ ಪುಡಿಯನ್ನೂ ಜೇನುತುಪ್ಪವನ್ನೂ ಬೆರಿಸಿ ದಿನಾಲು ಸೇವಿಸಿದರೆ ಅಪಸ್ಮಾರ, ಉನ್ಮಾದ ರೋಗಗಳು ದೂರಾಗುತ್ತವೆ.

೪. ಈದು ೩-೪ ತಿಂಗಳಾದ ಕರವಿದ್ದ ನಿರೋಗಿ ಆಕಳದ ತಾಜಾ ಸೆಗಣೆಯನ್ನು ಅರಿವೆಯಲ್ಲಿ ಹಿಂಡಿ ತೆಗೆದ ಷೀರು, ಅದರ ಮೂತ್ರ, ಹಾಲು, ಮಸರು, ತುಪ್ಪ ಇವು

ಗಳನ್ನೆಲ್ಲ ಸಮನಾಗಿ ತಕ್ಕೊಂಡು ಒತ್ತಟ್ಟಿಗೆ ಕೂಡಿಸಿ ಮಣ್ಣಿನ ಕಲ್ಲಿನ ಇಲ್ಲವೆ ಕಲಾಯಿ ಮಾಡಿದ ಪಾತ್ರೆಯಲ್ಲಿ ಹಾಕಿ, ತುಪ್ಪ ಉಳಿಯುವ ವರೆಗೆ ಕಾಸಬೇಕು. ಕೆಲವರು ಮಾದಾಳ ಹಣ್ಣಿನ ರಸವನ್ನೂ ಇದರೊಳಗೆ ಹಾಕಿ ಸಿದ್ಧ ಮಾಡಬೇಕೆಂದು ಹೇಳಿರುವರು. ಇದಕ್ಕೆ ಪಂಚಗವ್ಯಘೃತ* ವೆನ್ನುತ್ತಾರೆ. ದಿನಾಲು ೧ ತೊಲಿಯಷ್ಟು ಇದನ್ನು ಸೇವಿಸಿದರೆ ಅಪಸ್ಮಾರವೂ ಉನ್ಮಾದವೂ ಚಾತುರ್ಥಿಕ ಜ್ವರವೂ ಗೃಹಬಾಧೆ(ಗಾಳಿ)ಯೂ ನಾಶವಾಗುತ್ತವೆ

ಬ್ರಾಹ್ಮಣರಲ್ಲಿ ದೇಹಶುದ್ಧಿಯ ದೆಸೆಯಿಂದ ಪರ್ವಪುಣ್ಯ ಕಾಲದೊಳಗೂ ಆಶೌಚಾದಿಗಳ ನಿವೃತ್ತಿಯಾದಾಗ್ಯೂ ಪಂಚಗವ್ಯವನ್ನು ತೆಗೆದುಕೊಳ್ಳುವ ರೂಢಿಯುಂಟು. ದೀರ್ಘದರ್ಶಿಗಳಾದ ಋಷಿಗಳು ಮನೋವ್ಯಥೆಯನ್ನು ಕಳೆದು ಸಮಾಧಾನವಾಗಬೇಕೆಂದೇ ಇದರ ಯೋಜನೆಯನ್ನು ಮಾಡಿರಬಹುದು.

೫. **ಪಾನೀಯಕಲ್ಯಾಣಘೃತ** : ಅಳಲೇಕಾಯಿ, ನೆಲ್ಲೀಚಟ್ಟು, ತಾರೇಕಾಯಿ, ಅರಿಷಿಣ, ಮರದರಿಸಿಣ, ಚಂಚಲಬೀಜ, ಕರಿಬಂಟನ (ಅಗ್ಗರ) ಬೇರು, ಬಿಳೀ ಅಗ್ಗರ ಬೇರು, (ಇದಕ್ಕೆ ಉಪ್ಪರಸಾಳಿಯೂ ಅನ್ನುವರು.) ತೊಟ್ಟಿಲಬೇರು, ಕಾಡಗಾಂಜಿ, ನಾಹೊನ್ನೇಬೇರು, ದೇವದ್ವಾರ, ಬಾಳವಬೇರು, ನಂದಿಬಟ್ಟಲಬೇರು, ಕಕ್ಕವಡೇಬೇರು, ದಂತಿಮೂಲ, ದಾಳಿಂಬರಕಾಯತೊಟೆ, ಮುಗ್ಗಿ, ಕರೇಕಮಲ, ಯಾಲಕ್ಕಿ, ಮಂಜಿಷ್ಟ, ವಾಯುವಿಡಂಗ, ಕೋಷ್ಠ, ಪದ್ಮಕಾಷ್ಟ, ಜಾಜೀಹೂವು, ಗಂಧದ ಕೆಚ್ಚು, ಚಾಳೀಸಪತ್ರಿ, ನೆಲಗುಳ್ಳದಬೇರು ಇಷ್ಟು ಔಷಧಗಳ ಕಲ್ಕವನ್ನು ಮಾಡಿ ೬೪ ತೊಲಿ ತುಪ್ಪದಲ್ಲಿ ಕೂಡಿಸಿ ತುಪ್ಪದ ನಾಲ್ಕುಪಟ್ಟು ನೀರು ಹಾಕಿ ಕುದಿಸಿ, ತುಪ್ಪವನ್ನು ಸಿದ್ಧ ಮಾಡಬೇಕು. ಇದನ್ನು ದಿನಾಲು ತೊಲಿಯಷ್ಟು ಹೊಟ್ಟೆಯಲ್ಲಿ ತಕ್ಕೊಂಡರೆ ಮಲರೋಗ, ಜ್ವರ, ಕ್ಷಯರೋಗ, ಉನ್ಮಾದ, ಗಿಣ್ಣೀರೋಗ, ಕೆಮ್ಮು, ಅಗ್ನಿಮಾಂದ್ಯ, ನೆಗಡಿ, ನಡಶೂಲಿ, ತೃತೀಯ ಚಾತುರ್ಥಿಕ ಚಳಿಜ್ವರಗಳು, ಮೂತ್ರ ಕಟ್ಟುವದು, ಇಸಬು, ತಿಂಡಿ, ಪಾಂಡುರೋಗ, ವಿಷಬಾಧೆ, ಧಾತುಸ್ರಾವ ಈ ರೋಗಗಳೆಲ್ಲ ಹೋಗುತ್ತವೆ. ಮುಖ್ಯವಾಗಿ ಈ ಯೋಗವು ಅಪಸ್ಮಾರದ ಮೇಲೆ ಇರುವದರಿಂದ ಅಪಸ್ಮಾರ ರೋಗಿಗೆ ಮೇಲಿನ ಬೇನೆಗಳಿದ್ದರೆ ಇದರಿಂದ ಬಹಳ ಗುಣವಾಗುವದೆಂದು ತಿಳಿಯಬೇಕು. ಕಾರಣಾಂತರದಿಂದ ಬಂಜಿತನವು ಬಂದ ಹೆಂಗಸರಿಗೂ ಇದರ ಸೇವನ •

---

೧. ಯಃ ಖೋದತ್ಕ್ಷೀರಭಕ್ತಾಶೀ ಮಾಕ್ಷಿಕೇಣ ವಚಾರುತಃ ||
ಅಪಸ್ಮಾರಂ ಮಹಾಘೋರಂ ಸುಚಿರೋತ್ಥಂ ಜಯೇತ್ಧ್ರುವಮ್ ||

೨. ಕೂಷ್ಮಾಂಡಕಗಿರೋತ್ಥೇನ ರಸೇನ ಪರಿಪೇಷಿತಮ್ ||
ಅಪಸ್ಮಾರವಿನಾಶಾಯ ಯಷ್ಟ್ಯಾಹ್ವಂ ಸಂಪಿಬೇತ್ತ್ರ್ಯಹಮ್ || —ನಿಘಂಟು ರತ್ನಾಕರ

* ಗೋಶಕೃದ್ರಸದಧ್ಯಮ್ಲಕ್ಷೀರಮೂತ್ರೈಃ ಸಮಂ ಘೃತಮ್ ||
ಸಿದ್ಧಂ ಚಾತುರ್ಥಿಕೋನ್ಮಾದಗ್ರಹಾಪಸ್ಮಾರನಾಶನಮ್ || —ನಿಘಂಟು ರತ್ನಾಕರ

ದಿಂದ ಕಲ್ಯಾಣವಾಗುತ್ತದೆ (ಸಂತತಿಯಾಗುವದು.) ಎಂದು ಇದಕ್ಕೆ ಪಾಸೀಯ ಕಲ್ಯಾಣಘೃತ[೧]ವೆಂಬ ಹೆಸರು ಬಿದ್ದಿದೆ. ಇದರಿಂದ ಹೆಂಗಸರ ಭೂತಬಾಧೆ (ಹಿಸ್ಟೇರಿಯಾ ಎಂಬ ವಾಯುಬಾಧೆ)ಯೂ ದೂರಾಗುತ್ತದೆ.

**ನಸ್ಯ :** ಇಪ್ಪೇ ಮರದಕೆಚ್ಚು, ಹಿಪ್ಪಲಿ, ಬಜೆ, ಮೆಣಸು, ಸೈಂಧವಲವಣ ಈ ಔಷಧಗಳನ್ನು ಬಿಸಿನೀರಿನಲ್ಲಿ ತೆಯ್ದು ಎರಡೂ, ಮೂಗಿನ ಹೊರಳಿಯಲ್ಲಿ ನಾಲ್ಕು ಹನಿ ಹಾಕುವದರಿಂದ ಅಪಸ್ಮಾರ ಉನ್ಮಾದ ರೋಗಗಳು ಕಡಿಮೆಯಾಗುತ್ತವೆ.

ಕ್ಷಯದಿಂದ ಕೂಡಿದ ಹಾಗು ಅನ್ನವನ್ನು ಬಿಟ್ಟ ಮಲರೋಗಿಯು ಬದುಕುವದು ಅಸಾಧ್ಯವು.

**ಈ ರೋಗಕ್ಕೆ ಪಥ್ಯ :** ಕೆಂಪುಬತ್ತ, ಗೋದಿ, ಹೆಸರು, ಹಾಲು, ತುಪ್ಪ, ಹಳೇಸಂಡಿಗಿಗುಂಬಳಕಾಯಿ, ಪಡವಲಕಾಯಿ, ನುಗ್ಗೀಕಾಯಿ, ದಾಳಿಂಬರ ಹಣ್ಣು, ದ್ರಾಕ್ಷಿ ಮೊದಲಾದ ಸೌಮ್ಯವಾದ ಆಹಾರದ ಪದಾರ್ಥಗಳೂ ನೆಲಿಂಗಳ, ಬಜೆ, ಜಾಳದ ಬೇರು ಮೊದಲಾದ ಔಷಧಗಳೂ ಹಿತಕರವಾಗಿವೆ.

**ಅಪಥ್ಯ :** ಸಾರಾಯಿ, ಮೀನ, ತೊಂಡೀಕಾಯಿ, ಉದ್ದು, ತೊಗರೆ, ತೊಪ್ಪಲ ಪಲ್ಯೆ ಎಲ್ಲ ತರದ ಜಡಾನ್ನ (ಪಚನಕ್ಕೆ ಬಹಳ ವೇಳೆ ಹಿಡಿಯುವಂತಹದು) ಚಿಂತೆ, ಸಿಟ್ಟು ಮುಂತಾದ ಮನಸ್ತಾಪದ ಕಾರಣಗಳು, ಮಲಮೂತ್ರಾದಿ ವೇಗವನ್ನು ತಡೆಯುವದು, ಅತಿ ಸ್ತ್ರೀಸಹವಾಸ, ಅತಿ ದೇಹಶ್ರಮ; ಮಾನಸೀಯರಿಗೆ ಅವಮಾನ ಮಾಡೋಣ, ಅದ್ಭುತವಾದ ಇಂದ್ರಜಾಲ ಮೊದಲಾದ ಆಟಗಳನ್ನು ನೋಡೋಣ ಇವೆಲ್ಲಾ ಅಪಸ್ಮಾರಕ್ಕೆ ವಿರುದ್ಧವಾಗಿವೆ.

—

೧. ತ್ರಿಫಲಾದ್ವೇಸಿಶೇಕೌಂತೀ ಸಾರಿವೇದ್ವೇಪ್ರಿಯಂಗುಕಾ ।
ಶಾಲಿಪರ್ಣೀಂ ಪೃಷ್ಣಿಪರ್ಣೀ ದೇವದಾರ್ವೇಲವಾಲುಕಮ್ ॥
ನತಂ ವಿಶಾಲಾ ದಂತೀ ಚ ದಾಡಿಮಂನ್ನಾಗಕೇಸರಮ್ ।
ನೀಲೋತ್ಪಲೈಲಾಮಂಜಿಷ್ಠಾ ವಿಡಂಗಂ ಕುಷ್ಠಪಪ್ರಕಮ್ ॥
ಜಾತೀಪುಷ್ಪಂ ಚಂದನಂ ಚ ತಾಲೀಸಂ ಬ್ರಹತೀ ತಥಾ ।
ಏತೈಃ ಕರ್ಷಸಮೈಃ ಕಲ್ಕೈರ್ಜಲಂ ದತ್ವಾ ಚತುರ್ಗಣಮ್ ॥
ಘೃತಪ್ರಸ್ಥಂ ಪಚೇದ್ಧೀಮಾ ನಪಸ್ಮಾರೇ ಜ್ವರೇ ಕ್ಷಯೇ ।
ಉನ್ಮಾದೇ ವಾತರಕ್ತೇ ಚ ಕಾಸೇ ಮಂದಾನಿಲೇ ತಥಾ ॥
ಪ್ರತಿಶ್ಯಾಯೇ ಕಟೀಶೂಲೇ ತ್ರ ತೀಯಕಚತುರ್ಥಕೇ ।
ಮೂತ್ರಕೃಚ್ಛ್ರೇ ವಿಸರ್ಪೇ ಚ ಕಂಡೂಪಾಂಡ್ವಾಮಯೇ ತಥಾ ॥
ವಿಷದ್ವಯೇ ಪ್ರಮೇಹೇಷು ಸರ್ವಥೈವೋಪಯುಜ್ಯತೇ ।
ವಂಧ್ಯಾ ನಾಂ ಪುತ್ರದಂಭೂತಯಕ್ಷರಕ್ಷೋಹರಂ ಸ್ಮೃತಮ್ ॥ —ಶಾರ್ಙ್ಗಧರ

# ಅರುಚಿಯು

ಬಾಯಿಗೆ ಯಾವ ಅನ್ನವೂ ಸವಿ ಹತ್ತದಿರುವ ರೋಗಕ್ಕೆ ಅರುಚಿ (ಅರೋಚಕ) ರೋಗವೆನ್ನುತ್ತಾರೆ. ಇದು ಸ್ವತಂತ್ರವಾದ ದೊಡ್ಡ ರೋಗವೆಂದು ಹೇಳಲಿಕ್ಕೆ ಬರುವದಿಲ್ಲ. ಬಹುತರವಾಗಿ ಜ್ವರಾದಿ ರೋಗಗಳನ್ನಾಶ್ರಯಿಸಿಯೇ ಇರುತ್ತದೆ. ಒಂದೊಂದು ಕಡೆಗೆ ಇದೊಂದೇ ಇದ್ದದ್ದು ಕಂಡುಬಂದಿರಬಹುದೆಂದು ಆರ್ಯ ವೈದ್ಯರು ಸ್ವತಂತ್ರ ರೋಗಗಳಲ್ಲಿ ಹಿಡಿದಿರುತ್ತಾರೆ.

ವಾತಾದಿದೋಷಗಳ ಕೋಪದಿಂದ ನಾಲಿಗೆ ಹೃದಯಗಳು ದೂಷಿತವಾಗಿ ಇಲ್ಲವೆ ಶೋಕ ಚಿಂತಾದಿಗಳಿಂದ ಒಮ್ಮೊಮ್ಮೆ ಬೀಭತ್ಸ (ಮಲಮೂತ್ರಾದಿ ಅತ್ಯಂತ ಹೊಲಸು) ಪದಾರ್ಥಗಳನ್ನು ನೋಡುವದರಿಂದ ಅರುಚಿಯು ಹುಟ್ಟುತ್ತದೆ. ಬಾಯಿ ಕಹಿಯಾಗಲೀ ಸಪ್ಪಗಾಗಲೀ ಸುಟ್ಟಂತಾಗಲೀ ಆಗಿರುತ್ತದೆ; ಅನ್ನವನ್ನು ನೋಡುವದು ಕೂಡ ಅಸಹ್ಯವಾಗುತ್ತದೆ.

## ಉಪಚಾರವು

೧. **ತಾಲೀಸಾದಿಚೂರ್ಣ[೧]** : ತಾಳೀಸಪತ್ರಿ ೧ ತೊಲಿ, ಮೆಣಸು ೨ ತೊಲಿ, ಸುಂಟಿ ೩ ತೊಲಿ, ಹಿಪ್ಪಲಿ ೪ ತೊಲಿ, ಬಿದರಸುಣ್ಣ ೫ ತೊಲಿ, ಯಾಲಕ್ಕಿ ಹಾಗು ದಾಲಚಿನ್ನಿ ಅರ್ಧ ಅರ್ಧ ತೊಲಿ ಸೂಕ್ಷ್ಮವಾದ ಚೂರ್ಣವನ್ನು ಮಾಡಿ ೩೨ ತೊಲಿ ಸಕ್ಕರೆಯನ್ನು ಕೂಡಿಸಿಡಬೇಕು. ಅಥವಾ ಸಕ್ಕರೆಯ ಪಾಕಿನಲ್ಲಿ ಮೇಲಿನ ಚೂರ್ಣವನ್ನು ಬೆರಿಸಿ ೧ ತೊಲಿ ಒಡಿಗಳನ್ನು ಮಾಡಿಡಬೇಕು. ದಿನಾಲು ೧ ತೊಲಿ ಸೇವಿಸುವದರಿಂದ, ಅಜೀರ್ಣ, ಕೆಮ್ಮು, ದಮ್ಮು, ಜ್ವರ, ಓಕರಿಕೆ, ಅತಿಸಾರ, ಕ್ಷಯ ಮುಂತಾದ ರೋಗಗಳನ್ನಾಶ್ರಯಿಸಿದ ಅರುಚಿಯೂ ನಾಶವಾಗುತ್ತದೆ.

೨. ಬಾಯಿ ಕಹಿಯಾಗಿ ರುಚಿ ಇಲ್ಲದಿದ್ದರೆ ೧/೪ ತೊಲಿ ಕಟಕರೋಣಿಯನ್ನು ಜಜ್ಜಿ ೧೦ ತೊಲಿ ನೀರಲ್ಲಿ ಕುದಿಸಿ ೨೧/೨ ತೊಲಿಗೆ ಇಳಿಸಿ ದಿನಾಲು ಸಾಯಂಕಾಲಕ್ಕೆ ತಕ್ಕೊಂಡರೆ ಗುಣವಾಗುತ್ತದೆ. ಜ್ವರವಿದ್ದಾಗ್ಯೂ ಈ ಕಷಾಯವು ಉಪಯುಕ್ತವದೆ.

---

೧. ತಾಲೀಸಂ ಮರಿಚಂ ಶುಂಠೀ ಪಿಪ್ಪಲೀ ವಂಶರೋಚನಾ ||
ಏಕದ್ವಿತ್ರಿಚತುಃ ಪಂಚಕರ್ಷೈರ್ಭಾಗಾನ್ಪ್ರಕಲ್ಪಯೇತ್ ||
ಏಲಾತ್ವಚೋಶ್ಚ ಕರ್ಷಾರ್ಧಂ ಪ್ರತ್ಯೇಕಂ ಭಾಗಮಾವಹೇತ್ ||
ದ್ವಾತ್ರಿಂಶಾತ್ಕರ್ಷತುಲಿತಾ ಪ್ರದೇಯಾ ಶರ್ಕರಾ ಬುಧೈಃ ||
ತಾಲೀಸಾಘುಮಿದಂ ಚೂರ್ಣಂ ರೋಚನ ಪಾಚನಂ ಸ್ಮೃತಮ್ ||
ಕಾಸಶ್ವಾಸಜ್ವರಹರಂ ಛರ್ದ್ಯತೀಸಾರನಾಶನಮ್ ||
ಶೋಷಾಧ್ಮಾನಹರಂ ಪ್ಲೀಹಗ್ರಹಣೀ ಪಾಂಡುರೋಗಜಿತ್ ||
ಪಕ್ತ್ವಾ ವಾ ಶರ್ಕರಾಂ ಚೂರ್ಣಂ ಕ್ಷಿಪೇತ್ಸ್ಯಾದ್ಗುಟಿಕಾ ತತಃ ||

—ಶಾರ್ಙ್ಗಧರ

**೩.** ೧ ಮಾದಾಳಹಣ್ಣಿನ ಕೇಶರಗಳನ್ನೂ ಸೈಂಧವಲವಣವನ್ನೂ ಕೂಡಿಸಿ ತಿನ್ನುತ್ತಿರಬೇಕು. ದಾಳಿಂಬರಹಣ್ಣನ್ನು ಸೇವಿಸಿದರೂ ಅರೋಚಕವು ದೂರಾಗುತ್ತದೆ.

**೪.** ೨ ಹುಣಸೀಹಣ್ಣಿನರಸ, ದಾಳಿಂಬರಹಣ್ಣಿನರಸ, ದ್ವೀಪದ್ರಾಕ್ಷೆ, ಬೆಲ್ಲ, ಜೇನುತುಪ್ಪ, ಜೀರಿಗೆ, ಶಾಜೀರಿಗೆ, ಸಂಚಳಕಾರ (ಇದೊಂದು ಜಾತಿಯ ಉಪ್ಪು) ಹಾಕಿ ಒಂದು ಮಿಶ್ರಣವನ್ನು (ಗೊಜ್ಜು) ತಯಾರಿಸಿ ಸೇವಿಸಿದರೆ ಎಲ್ಲ ಬಗೆಯ ಅರುಚಿಯೂ ದೂರವಾಗುತ್ತದೆ.

**ಪಥ್ಯವು :** ಈ ರೋಗವು ಯಾವ ಬೇನೆಯಿಂದ ಕೂಡಿದ್ದೀತು, ಆ ಬೇನೆಗೆ ಅಪಥ್ಯವಾಗದಂಥ ಅನ್ನವನ್ನು ಸರ್ತಿಗೊಂದು ತರದಂತೆ ಬದಲಾಯಿಸಿ ತಿನ್ನಬೇಕು. ಸುಮ್ಮಸುಮ್ಮನೇ ಅರೋಚಕವಾಗಿದ್ದರೆ, ಅನ್ನಕ್ಕೆ ನಿಂಬೇಹಣ್ಣನ್ನು ಹಿಂಡಿಕೊಂಡು ಉಣಬೇಕು. ಕರಿಬೇವು, ಅಲ್ಲ, ಸಾಸಿವೆ, ಹುಲ್ಲು, ಚಹಾ ಇದರೊಳಗಿನ ಯಾವದಾದರೊಂದನ್ನು ಹಚ್ಚಿದ ಪಳದೆ (ಮಜ್ಜಿಗೆಯಾಂಬ್ರ) ಉಣಬೇಕು. ಹಗುರಾದ ಆಹಾರ ತಾಜಾ ಇಲ್ಲವೆ ಕಾಯ್ದಾರಿದ ನೀರು.

**ಅಪಥ್ಯ :** ಜಡಾನ್ನ, ಮೊಸರು, ಗಿಣ್ಣ, ತಣ್ಣೀರಿನ ಸ್ನಾನ, ಹಗಲು ಮಲಗೋಣ, ಕಾಯಿಸದ ಹಾಲು, ಬೇಯಿಸದ ಕಾಯಿಪಲ್ಯೆ ಹಿತಕರವಲ್ಲ.

## ಅನ್ನನಾಳ ಹಾಗು ಅನ್ನಾಶಯದ ರೋಗಗಳು

ಮೊದಲು ಮೊದಲು ಬಿರುಸಾದ ತಿನ್ನುವ ಪದಾರ್ಥಗಳು ಗಂಟಲದೊಳಗೆ ಇಳಿಯಲಿಕ್ಕೆ ತೊಂದರೆಯಾಗುತ್ತದೆ; ಆ ಮೇಲೆ ಸಾಬುಅಕ್ಕಿಯ ಗಂಜಿ ಹಾಲು ಮುಂತಾದ ಮಿದುವಾದ ಪದಾರ್ಥಗಳೂ ಹೋಗದಾಗುತ್ತವೆ. ಅನ್ನ ಹೋಗುವ ಮಾರ್ಗವು ಸಂಕೋಚವಾದ್ದರಿಂದ ಹೀಗಾಗುತ್ತದೆ.

ಒಳಗೆ ಹುಣ್ಣು ಹುಟ್ಟುವದರಿಂದಲೂ ಉಷ್ಣ (ಗರಮೀ) ವಿಕಾರದಿಂದಲೂ ಹಿಸ್ಟೀರಿಯಾ ಎಂಬ ವಾಯುವಿನಿಂದಲೂ ಈ ರೋಗವು ಹುಟ್ಟುತ್ತದೆ. ಮೊದಲು ಓಕರಿಕೆಯೂ ಬರಬರುತ್ತ ಅನ್ನ ಕಡಿಯುವದೂ ಆದ್ದರಿಂದ ರೋಗಿಯು ಅಶಕ್ತನಾಗುತ್ತಾನೆ.

---

೧. ಶಮಯತಿಕೇಸರಮರುಚಿಂ ಸ ಲವಣಮಾಶುಮಾತುಲುಂಗಸ್ಯ ॥
ದಾಡಿಮಚರ್ವಣಮಥವಾ ಚರಶೋರುಚಿಕಾರಿಸೂಚಯಾಮಾಸ ॥

—ಲೋಲಿಂಬರಾಜ

೨. ಕಾರವ್ಯಜಾಜೀಮರಿಚಂ ದ್ರಾಕ್ಷಾವೃಕ್ಷಾಮ್ಲದಾಡಿಮಮ್ ॥
ಸೌವರ್ಚಲಂ ಗುಡಂ ಕ್ಷೌದ್ರಂ ಸರ್ವಾರೋಚಕನಾಶನಮ್ ॥

—ಚಕ್ರದತ್ತ॥

ಇದಕ್ಕೆ ದೇಶೀ ಉಪಚಾರಗಳು ಇಲ್ಲ. ಸಂಪೂರ್ಣ ಚಿನ್ಹಗಳು ಕಂಡುಬಂದ ಕೂಡಲೆ ರೋಗಿಯನ್ನು ಡಾಕ್ಟರರಿದ್ದಲ್ಲಿ ತೀವ್ರವಾಗಿ ಕಳಿಸುವದೇ ಉತ್ತಮವು. ಅವರು ಜೀಕಲಳಿಗೆಯಿಂದ ಅನ್ನರಸವನ್ನು ಪಕ್ವಿಮದ್ವಾರದ ಮಾರ್ಗವಾಗಿ ಹೊಟ್ಟೆಯಲ್ಲಿ ಹಾಕಿ ರೋಗಿಯನ್ನು ಬದುಕಿಸಿಕೊಳ್ಳುತ್ತಾರೆ. ಒಮ್ಮೊಮ್ಮೆ ಶಸ್ತ್ರಕ್ರಿಯೆಯನ್ನೂ ಮಾಡ ಬೇಕಾಗುತ್ತದೆ.

**ಅನ್ನಾಶಯದ ದಾಹ :** ಬಹಳ ಬಿಸಿಯಾದ ಇಲ್ಲವೆ ಅತಿಶಯ ತಣ್ಣಗಾದ ಅನ್ನಸೇವನದಿಂದ, ತಂಬಾಕು, ಗಾಂಜಿ, ಸರಾಯಿ ಮುಂತಾದ ವ್ಯಸನದಿಂದ ಜಡಾನ್ನ ಭಕ್ಷಣದಿಂದ ಈ ರೋಗವಾಗುತ್ತದೆ. ಕಮರದೇಗು ಮುಂತಾದ ಅಜೀರ್ಣದ (ವಿದಾಹಿ ಅಜೀರ್ಣದ) ಲಕ್ಷಣಗಳೇ ಇದರಲ್ಲಿ ತೋರುತ್ತವೆ. ಹೊಟ್ಟೆಯಲ್ಲಿ ಉರಿಯುವದೂ ಮೂತ್ರ ಕೆಂಪಾಗುವದೂ ಜುಲಾಬುಗಳಾಗುವದೂ ಇದರ ವಿಶಿಷ್ಟ ಚಿನ್ಹಗಳು. ಸುಂಬಳ ಖಾರ ಮೊದಲಾದ ವಿಷದ ಪ್ರಯೋಗದಿಂದಲೂ ಈ ಲಕ್ಷಣಗಳಾಗುತ್ತವೆ.

ಇದು ಮೇಲಿನ ರೋಗದಷ್ಟು ಭಯಂಕರವಲ್ಲ, ಅನುಕೂಲವಿದ್ದವರು ಡಾಕ್ಟರರಿಗೆ ತೋರಿಸುವದು ಒಳ್ಳೆಯದು. ದ್ರಾಕ್ಷೆ, ಹಣ್ಣಾದ ಅಡಸಾಲ ಎಲೆ, ಕಲ್ಲು ಸಕ್ಕರಿ ಪಾವತೊಲೆ ಪಾವತೊಲೆ ಹಾಕಿ ಕಷಾಯ ಮಾಡಿ ಕೊಡಬೇಕು. ಅರಾರೂಟದ ಇಲ್ಲವೆ ಅಕ್ಕಿಯ ಗಂಜಿಯನ್ನು ಕೊಡಬೇಕು. ಸುಣ್ಣದ ಮೇಲಿನ ತಿಳಿನೀರನ್ನು ಹಾಲೊಳಗೆ ಬೆರಿಸಿ ಕುಡಿಸಬೇಕು. ಮಲಗಿದಲ್ಲೇ ಹೌಂಗೆ ಮಲಗಿಕೊಳ್ಳಬೇಕು. ಆಯಾಸವಾಗ ದಂತೆಯೂ ರಕ್ತಾಭಿಸರಣಕ್ಕೆ ಅಡ್ಡಿಯಾಗದಂತೆಯೂ ಹೊಟ್ಟೆಕಿ ಓಡ್ಯಾಡಿದರೆ ಅಡ್ಡಿಯಿಲ್ಲ.

ಕಾಯಿಪಲ್ಲೆ ಸೀ ಪದಾರ್ಥಗಳನ್ನು ವರ್ಜ ಮಾಡಬೇಕು. ಬಿಸ್ಕೀಟು, ಅರಾ ರೋಟಿನ ಹಿಟ್ಟು, ಬೇಂಜರ್ಸಫುಡ್ (ಮಾನ್ಯವಾದ ಕೃತ್ರಿಮ ಆಹಾರಗಳು) ಹಳೇ ಅಕ್ಕಿಯ ವಿದುವಾದ ಅನ್ನ ಮೊದಲಾದ ಲಘು ಆಹಾರಗಳನ್ನು ಸೇವಿಸಬಹುದು.

**ಅನ್ನಾಶಯದ ಕ್ಷತಗಳು :** ದೇಹದ ಮೇಲೆ ಯಾವದಾದರೊಂದು ಸ್ಥಳದಲ್ಲಿ ಗಾಯವಾಗುವಂತೆ ಒಳಗಡೆಯಲ್ಲಿಯೂ ಗಾಯವಾಗುವದುಂಟು. ಅನ್ನಾಶಯದೊಳಗಿನ ಗಾಯದ ವಿಶಿಷ್ಟ ಕಾರಣಗಳು ಇನ್ನೂ ಗೊತ್ತಾಗಿಲ್ಲ. ವಾಡಿಕೆಯಾಗಿ ಈ ರೋಗವು ಗಂಡಸರಿಗಿಂತ ಹೆಂಗಸರೊಳಗೇ ಹೆಚ್ಚಾಗಿ ಕಂಡುಬರುತ್ತದೆ. ಮುಟ್ಟಾಗುವ ಕಾಲ ದೊಳಗೆ ಮುಟ್ಟಿನ ಪ್ರಮಾಣದೊಳಗೂ ಹೆಚ್ಚುಕಡಿಮೆಯಾದರೆ ಕ್ಷತಗಳಾಗುವ ಸಂಭವ ವದೆ. ಒಮ್ಮೊಮ್ಮೆ ಈ ಗಾಯಗಳು ತಾವೇ ಆಗಿ ಅಲ್ಪಸಲ್ಪ ಉಪದ್ರವ ಮಾಡಿ ತಾವೇ ಮಾಯ್ದುಹೋಗುತ್ತವೆ; ಒಮ್ಮೊಮ್ಮೆ ಬಹಳ ರಕ್ತವು ಸೋರಿ ಇಲ್ಲವೆ ಅನ್ನಾಶಯಕ್ಕೆ ಆರುಪಾರು ತೂತಾಗಿ ಮರಣಕ್ಕೆ ಕಾರಣವಾಗುತ್ತವೆ.

**ಚಿನ್ಹಗಳು :** ಹೊಟ್ಟೆಯೊಳಗೆ ನೋವು, ವಾಂತಿ, ವಾಂತಿಯಗೂಡ ಇಲ್ಲವೆ ಮಲದಗೂಡ ರಕ್ತಹೋಗುವದು, ಪಕ್ಕಡಿಯೊಳಗೂ ಎದೆಗುಂಡಿಗೆಯ ಹತ್ತರವೂ ಉರಿ ಯುವದು ಇವೇ ಮುಖ್ಯವಾದ ಲಕ್ಷಣಗಳು. ಹೊಟ್ಟೆಯಲ್ಲಿ ಗಾಳಿ ತುಂಬಿದಂತಾಗಿ

ಕವುರದೇಗುಗಳು ಬರುತ್ತವೆ. ಅನ್ನಾಶಯವನ್ನು ತಡವಿದರೆ ಬಹಳ ನೋಯುತ್ತದೆ. ಊಟದ ಕೂಡಲೆ ಇಲ್ಲವೆ ತುಸು ಅವಕಾಶದ ಮೇಲೆ ವಾಂತಿಯಾಗುತ್ತದೆ. ವಾಂತಿಯ ಗೂಡ ಅತಿಶಯ ರಕ್ತವು ಹೋಗಿ ರೋಗಿಯು ಗಾಬರಿಯಾಗುವದೂ ಉಂಟು. ಮಲದ ಗೂಡ ಬಿದ್ದ ರಕ್ತದ ಬಣ್ಣವು ಕಪ್ಪಾಗಿದ್ದು ಬಹಳ ಹೊಲಸು ನಾರುತ್ತಿರುತ್ತದೆ. ಕ್ಷತ ಗಳು ಬಲಿತವೆಂದರೆ ಮಲಮೂತ್ರಗಳು ಬಂದಾಗುತ್ತವೆ. ಜ್ವರವೂ ಅಶಕ್ತತೆಯೂ ಉಂಟಾಗಿ ರೋಗಿಯು ಮರಣ ಹೊಂದುತ್ತಾನೆ.

**ಉಪಾಯವು :** ಒತ್ತಟ್ಟಿಗೆ ಹಾಸಿಗೆಯಲ್ಲಿ ಸ್ವಸ್ಥವಾಗಿ ಮಲಗಿಕೊಳ್ಳಬೇಕು. ಹಗುರಾದ ಆಹಾರಗಳನ್ನು ತಕ್ಕೊಳ್ಳಬೇಕು. ಸಾರಾಯಿ, ಚಹಾ, ಕಾಫಿ ಮೊದಲಾದ ಉದ್ರೇಕಿಸುವ ಉಷ್ಣಪೇಯಗಳನ್ನು ಸರ್ವಥಾ ಬಿಡಬೇಕು. ರೋಗವು ಹೆಚ್ಚಾದ ಕಾಲದೊಳಗೆ ಶಕ್ತಿವರ್ಧಕವಾದ (ಬ್ರ್ಯಾಂಡಿ, ಕಾಡ್ಲಿವರಾಯಿಲ್ ಮುಂತಾದ) ಆಹಾರ ವನ್ನು ಅಧೋದ್ವಾರದಿಂದೇ ಹಾಕುವದು ತಕ್ಕದ್ದಾದ್ದರಿಂದ [೧] ತಜ್ಞರಾದ ಡಾಕ್ಟರರಿಗೆ ತೋರಿಸುವದು ಬಹಳ ಒಳ್ಳೆಯದು.

## ಅಂಡವೃದ್ಧಿ

ವಾತಾದಿ ದೋಷ ಹಾಗು ರಕ್ತ ಇವುಗಳ ಕೋಪದಿಂದಲೂ ಪೆಟ್ಟು ತಗಲುವದ ರಿಂದಲೂ ವೃಷಣವು ಬಾಯುತ್ತದೆ. ಮೂತ್ರ ಮಾರ್ಗದಲ್ಲಿ ಸಳೀ ಹಾಕುವದರಿಂದಲೂ ಹೀಗೆ ಬಾಯುವದುಂಟು. ಹುಣ್ಣು ಪರಮೆ (ಧಾತು ಹೋಗುವದು,) ಈ ರೋಗಗಳಿದ್ದ ವರಿಗೆ ಅಂಡವೃದ್ಧಿಯಾಗುವ ಸಂಭವವಿರುತ್ತದೆ. ಅರ್ವಾಚೀನ ವೈದ್ಯರು ಇದರಲ್ಲಿ ಎಂಟು ವಿಧಗಳನ್ನು ಕಲ್ಪಿಸಿದ್ದಾರೆ : ೧) ದಾಹದಿಂದ, ೨) ನೀರು ತುಂಬುವದರಿಂದ, ೩) ರಕ್ತ ತುಂಬುವದರಿಂದ, ೪) ನರಗಳು ಒತ್ತಟ್ಟಿಗೆ ಬೆಳೆಯುವದರಿಂದ, ೫) ಒಳಗೆ ಗಂಟಾಗುವದರಿಂದ, ೬) ಬೀಜಗಳು ಇಳಿಯುವದರಿಂದ, ೭) ವಾಳ ಕುರುವು ಮುಂತಾದ್ದ ರಿಂದ, ೮) ತೊಗಲು ದಪ್ಪಾದ್ದರಿಂದ (ಅಂಡವೃದ್ಧಿಯಾಗುತ್ತದೆ). ಇವುಗಳ ಲಕ್ಷಣ ಗಳು ಹೆಸರಿನಂತೆ ಬೇರೆ ಬೇರೆ ತೋರುತ್ತವೆ.

ಹುಡುಗರಿಗೆ, ಜಿಗಿಯುವದರಿಂದಲೂ ಮಲಬದ್ಧವಾದಾಗಲೂ ವಿಷಯುಕ್ತವಾದ ಕೃಮಿ ದಂಶ ( ಸೊಳ್ಳೆ ) ಮೊದಲಾದವುಗಳು ಕಚ್ಚುವದರಿಂದಲೂ ಕಳ್ಳಿ, ಕ್ಯಾರು

---

೧ ಈ (ಅನ್ನನಾಳ ಅನ್ನಾಶಯದ ರೋಗಗಳ) ವಿಷಯವು ವಿದೇಶಿ ವೈದ್ಯಶಾಸ್ತ್ರದ ಆಧಾರದಿಂದ ಬರೆಯಲ್ಪಟ್ಟಿದೆ. ನಮ್ಮಲ್ಲಿ ಈ ರೋಗವು ಇದೇ ಹೆಸರಿನಿಂದ ಹಾಗು ಸಂಪೂರ್ಣ ಲಕ್ಷಣಗಳಿಂದ ಪ್ರಸಿದ್ಧವಿಲ್ಲವಾದ್ದರಿಂದ ದೇಶೀ ಉಪಚಾರಗಳನ್ನು ಹೆಚ್ಚಿಗೆ ಬರೆಯಲಿಕ್ಕೆ ಆಸ್ಪದ ವಿಲ್ಲ. ಆರ್ಯವೈದ್ಯಕದೊಳಗಿನ ಅಜೀರ್ಣ, ರಕ್ತಪಿತ್ತ, ಅಂತರ್ವಿದ್ರಧಿ, ಉರಕ್ಷತ ರೋಗ ಗಳೊಳಗೂ (ಗಲರೋಗ) ಕಂಠಕುಬ್ಜವೆಂಬ ಸನ್ನಿಪಾತಗಳೊಳಗೂ ಈ ರೋಗದ ಕೆಲಕೆಲವು ಲಕ್ಷಣಗಳು ಕಂಡುಬರುತ್ತವೆ.

ಮುಂತಾದ ತೀಕ್ಷ್ಣ ಔಷಧಗಳು ತಗಲುವದರಿಂದಲೂ ಪಿತ್ತಗಾದಿ (ಗಾಜರಿ) ಏಳುವದರಿಂದಲೂ ವೃಷಣವು ಒಮ್ಮೊಮ್ಮೆ ಬಾತಂತೆ ಕಾಣುತ್ತದೆ. ಅದು ಅಷ್ಟು ಭಯಂಕರವಲ್ಲ, ಎಣ್ಣೆ ಹಚ್ಚಿ ಕಾಸುವದರಿಂದಾಗಲಿ ಬಿಸಿ ನೀರು ಹಾಕುವದರಿಂದಾಗಲಿ ತಾನೇ ನೆಟ್ಟಗಾಗುತ್ತದೆ.

ದೊಡ್ಡವರಿಗಾದರೂ ಪೆಟ್ಟು ತಗಲಿ ರಕ್ತಗಟ್ಟಿ ನೋವಾಗಿದ್ದರೆ, ಮಲಗಿದಲ್ಲೇ ಮಲಗಿಕೊಂಡು ತಣ್ಣೀರಲ್ಲಿ ಅರಿವೇ ತೋಯಿಸಿ ಅದರ ಪಟ್ಟಿ ಹಾಕುವದರಿಂದ ಕಡಿಮೆಯಾಗುತ್ತದೆ.

ಅಂಡವೃದ್ಧಿಯಿಂದ ಸ್ವಲ್ಪ ಜ್ವರವೂ ಒಣ ಓಕರಿಕೆಯೂ ಶೂಲಿಯೂ ಹುಟ್ಟುತ್ತವೆ.

## ಉಪಾಯಗಳು

೧. [೧]ಕಚ್ಚಾಪಾವಶೇರು ಹಾಲು ಕಾಸಿ ಕೆನೆ ತೆಗೆದು ಅದರಲ್ಲಿ ೧ ತೊಲಿ ಔಡಲೆಣ್ಣೆ (ಹರಳೆಣ್ಣೆ)ಯನ್ನು ಹಾಕಿ ರೋಗವಿದ್ದಂತೆ ನೋಡಿ, ಒಂದೆರಡು ಸಪ್ತಕದಿಂದ ತಿಂಗಳವರೆಗೂ ತಕ್ಕೊಳ್ಳಬೇಕು. ಜುಲಾಬು ಬಹಳಾದರೆ ಒಂದು ದಿನ ಬಿಟ್ಟು ಬಿಟ್ಟು ತಕ್ಕೊಳ್ಳುವದು ಹಿತಕರವು. ಇದರಿಂದ ವಾತದ ಲಕ್ಷಣದಿಂದ ಕೂಡಿದ ಅಂಡವೃದ್ಧಿಯು ಕಡಿಮೆಯಾಗುತ್ತದೆ. ಶೂಲಿ ಮುಂತಾದ ವಾತವಿಕಾರಗಳು ಬಹಳವಾಗಿದ್ದರೆ ೧ ಆಣೆ ತೂಕ ಶುದ್ಧ ಗುಗ್ಗಳವನ್ನು ೧ ತೊಲಿ ಔಡಲೆಣ್ಣೆಯನ್ನು ೪ ತೊಲಿ ಗೋಮೂತ್ರದಲ್ಲಿ ಕೊಡಬೇಕು.

೨. [೨]ಅಲ್ಲದ ರಸ ೧ ತೊಲಿ, ಜೇನುತುಪ್ಪ ½ ತೊಲಿ ಕೂಡಿಸಿ ಒಂದೆರಡು ವಾರ ತಕ್ಕೊಳ್ಳಬೇಕು. ಇದರಿಂದ ತ್ರಿದೋಷದ ಅಂಡವೃದ್ಧಿಯೂ ಮುಖ್ಯವಾಗಿ ವಾತದಿಂದ ಹುಟ್ಟಿದ ವೃದ್ಧಿರೋಗವೂ ಹೋಗುತ್ತದೆ.

೩. [೩]ರಾಶ್ಮಿ (ಸಿಗದಿದ್ದರೆ ದಾಗಡೀಬೇರು ಹಾಕುವದುಂಟು) ಅಮೃತಬಳ್ಳಿ, ತುರುಬೆಯಬೇರು, ನೆಗ್ಗಿಲಮುಳ್ಳು, ಔಡಲಬೇರು, ಪ್ರತಿಯೊಂದು ½ ತೊಲಿ ತೂಕ ತಕ್ಕೊಂಡು ಕಷಾಯ ಮಾಡಿ ೧ ತೊಲಿ ಔಡಲೆಣ್ಣೆ ಹಾಕಿ ಕೊಡಬೇಕು. ಇದರಿಂದ ಎಲ್ಲ ಬಗೆಯ ಅಂಡವೃದ್ಧಿಯೂ ವಿಶೇಷವಾಗಿ ಪಿತ್ತದಿಂದ ಹುಟ್ಟಿದ ವೃದ್ಧಿಯೂ ಕಡಿಮೆಯಾಗುತ್ತದೆ.

---

೧. ಸ ಕ್ಷೀರಂ ವಾಪಿ ಬೇತ್ತೈಲಂ ಮಾಸಮೇರಂಡಸಂಭವಮ್ ॥
ಗುಗ್ಗುಲುಂ ರುಬುತೈಲಂ ವಾ ಗೋಮೂತ್ರೇಣ ಪಿಬೇನ್ನರಃ ॥
ವಾತವೃದ್ಧಿಂ ನಿಹಂತ್ಯಾಶು ಚಿರಕಾಲಾನುಬಂಧಿನೀಮ್ ॥ —ನಿಘಂಟು ರತ್ನಾಕರ

೨. ಆರ್ದ್ರಕಃ ಸ್ವರಸಕ್ಷೌದ್ರಯುಕ್ತೋ ವೃಷಣವಾತನುತ್ ॥
ಶ್ವಾಸಕಾಸಾರುಚೀರ್ಹಂತಿ ಪ್ರತಿಶ್ಯಾಯಂ ವ್ಯಪೋಹತಿ ॥ —ಶಾರ್ಙ್ಗಧರ

೩. ರಾಸ್ನಾಮೃತಾಬಲಾಯಷ್ಟೀ ಗೋಕಂಟೈರಂಡಜಃ ಶೃತಃ ॥
ಏರಂಡತೈಲಸಂಯುಕ್ತೋ ವೃದ್ಧಿಮಂತ್ರಭವಾಂ ಜಯೇತ್ ॥

೪. [1]ಗಂಧಪಕೆಚ್ಚು, ಜೇಷ್ಠಮಧು, ಬಿಳಿ ಹಾಗು ಕರಿಕಮಲಗಳು, ಲಾಳದ ಬೇರು ಇವುಗಳನ್ನು ಹಾಲೊಳಗೆ ಸಣ್ಣಾಗಿ ಅರೆದು ಮೇಲೆ ಹಚ್ಚಬೇಕು. ಇದರಿಂದ ಉರುಪು ಮುಂತಾದ ಪಿತ್ತದ ಲಕ್ಷಣಗಳೆಲ್ಲ ಕಡಿಮೆಯಾಗುವವು.

೫. [2]ಬಜೆ ಸಾಸಿವೆಗಳನ್ನು ಗೋಮೂತ್ರದಲ್ಲಿ ಸಣ್ಣಾಗಿ ಅರೆದು ಹಚ್ಚುತ್ತಿದ್ದರೆ ಕಫದಿಂದ ಹುಟ್ಟಿದ ಅಂಡವೃದ್ಧಿಯ ಬಾವು ಕಡಿಮೆಯಾಗುತ್ತದೆ.

ಈ ರೋಗಕ್ಕೆ ಶಸ್ತ್ರಕ್ರಿಯೆಯು ಹಿತಕರವಾದ್ದರಿಂದ ಸರ್ಜನ್ನರ ಕಡಿಗೆ (ಶಸ್ತ್ರ ಕ್ರಿಯೆಯನ್ನು ಚನ್ನಾಗಿ ಬಲ್ಲ ಡಾಕ್ಟರರ ಕಡಿಗೆ) ಹೋಗುವದೇ ಒಳ್ಳೆಯದು.

**ಅಸಾಧ್ಯ ಲಕ್ಷಣಗಳು :** ಒಳಗೆ ನರದ ಜಾಳಿಗೆಗಟ್ಟಿದಂತಾಗಿ ಹೊಟ್ಟೆಯ ಕಡಿಗೆ ಶಿಖರದಂತೆ ಬಾತು ಬಹಳ ದಿವಸ ತ್ರಾಸ ಕೊಡುವ ಬೇನೆಯು ಕಠಿಣವು. ಇದರಿಂದ ಪುರುಷತ್ವವೂ ನಷ್ಟವಾಗುತ್ತದೆ. ಚೀಲದೊಳಗೆ ಹುಳಗಳು ತುಂಬಿದರೆ ಹೇಗೋ ಹಾಗೆ ಕಾಣುತ್ತದೆ. ಇದರಿಂದ ಮರಣವುಂಟಾಗುವದೆಂತಲ್ಲ, ಕಡೆಗೂ ನೆಟ್ಟಗಾಗುವ ಸಂಭವ ಕಡಿಮೆ. ಡಾಕ್ಟರರ ಕಡೆಯಿಂದ ರಬ್ಬರ ಮುಂತಾದ್ದರ ಪಟ್ಟಿಯನ್ನು ಹಾಕಿಸಿಕೊಳ್ಳಬೇಕು.

ಕಾಲಮೇಲೆ ಹುತ್ತು ಬೆಳೆಯುವಂತೆ ವೃಷಣದ ತೊಗಲು ದಪ್ಪಾಗಿ ಬಿಂದಿಗೆ ಆಕಾರ ವೃಷಣವು ದೊಡ್ಡದಾಗುತ್ತದೆ. ಇದು ಸಮುದ್ರದ ತೀರದ (ಮಲಬಾರ ಮುಂತಾದ) ದೇಶಗಳೊಳಗೂ ಆಫ್ರಿಕಾಖಂಡದೊಳಗೂ ಹೆಚ್ಚಿರುವದಂತೆ. ಇದು ಬಹಳ ಬೆಳೆಯಿತೆಂದರೆ ೧೦೦ ಪೌಂಡಿನ ವರೆಗೆ ಭಾರವಾಗಿರುತ್ತದೆ. ಗಂಡಸರಂತೆ ಹೆಂಗಸರ ಯೋನಿಯ ಒಂದು ಪಕ್ಕದ ತುಟಿಗೂ ಈ ರೋಗವು ಆಗುವದುಂಟು. ಇದು ಶಸ್ತ್ರಕ್ರಿಯೆಯಿಂದೂ ಕಷ್ಟ ಸಾಧ್ಯವೇ ಸರಿ.

**ಪಥ್ಯಾಪಥ್ಯ :** ಲಘು ಪೌಷ್ಟಿಕವಾದ ಆಹಾರವೂ, ಬಿಸಿನೀರೂ ಪಥ್ಯವು. ಗುರುವಾತುಲ ಆಹಾರಗಳೂ ವ್ಯಾಯಾಮ ಸ್ತ್ರೀಸಂಗಗಳೂ ಅಪಥ್ಯವಾಗಿವೆ.

—

## ಆಮವಾತ

ವಿರುದ್ಧವಾದ ಆಹಾರ ಹಾಗೂ ಆಚರಣೆಗಳಿಂದಲೂ ಹಾಲು ಬೆಣ್ಣೆ ಗಿಣ್ಣ ಮುಂತಾದ ಹೆಡಸಿನ ಆಹಾರವನ್ನು ತಕ್ಕೊಂಡು ಕೂಡಲೆ ವ್ಯಾಯಾಮ ಮಾಡುವದರಿಂದಲೂ ಕಫ ವಾತಗಳು ಕುಪಿತವಾಗಿ ಸಂಧಿಸಂಧಿಯನ್ನು ಹಿಡಿದು ಆಮವಾತವನ್ನುಂಟು

---

೧. ಚಂದನಮ್ಮಧುಕಂ ಪದ್ಮಮುಶೀರಂ ತಿಲಮುತ್ಪಲಮ್ ॥
ಕ್ಷೀರಪಿಷ್ಟ ಪ್ರಲೇಪಸ್ಯಾತ್ ಪಿತ್ತವೃದ್ಧೌ ಪ್ರಶಸ್ಯತೇ ॥

೨. ವಚಾಸರ್ಷಪಕಲ್ಕೇನ ಲೇಪಃ ಶೋಥವಿನಾಶನಃ ॥ —ನಿಘಂಟು ರತ್ನಾಕರ

ಮಾಡುತ್ತವೆ. ಹುಣ್ಣು ಹಚ್ಚಿಕೊಂಡು ಅರ್ಧಮರ್ಧ ಗುಣವಾಗಿ ಅಶಕ್ತರಾದ ವರಲ್ಲಿ ಈ ರೋಗವು ಹೆಚ್ಚಿಗೆ ಕಂಡುಬರುತ್ತದೆ. ಅಂಥವರಿಗೆ ಅಗ್ನಿ ಬಲವು ಕಡಿಮೆ ಯಾಗಿರುತ್ತದೆ. ಶಕ್ತಿ ಬರಬೇಕೆಂಬ ಹಪಹಪಿಯಿಂದ ಸ್ನಿಗ್ಧವಾದ ಪದಾರ್ಥಗಳನ್ನು ಸೇವಿಸಿ, ಬೇಗನೆ ಪುಷ್ಟರಾಗಲಿಚ್ಛಿಸುತ್ತಾರೆ; ಇದರಿಂದ ಆಮವಾತವಾಗುವದು ಸ್ವಾಭಾವಿಕವೇ ಸರಿ. ಹೆಂಗಸರಿಗಿಂತ ಗಂಡಸರಿಗೇ ಈ ರೋಗೋಪದ್ರವು ಬಹಳ. ಬಾಣಂತಿತನ ದಲ್ಲಿ ಉಪಚಾರವು ಸರಿಯಾಗದ್ದರಿಂದ ಮಾತ್ರ ಹೆಂಗಸರಿಗೆ ಆಮವಾತವಾಗುವದು ಕಂಡುಬಂದಿದೆ.

ಆಧುನಿಕ ಶೋಧಕರು ಇದಕ್ಕೆ ಸಂಧಿವಾತವೆನ್ನುತ್ತಾರೆ. ರಕ್ತಕೋಪವೇ-ದೂಷಿತರಕ್ತವೇ-ಇದಕ್ಕೆ ಕಾರಣವೆಂದು ಅವರ ಅಭಿಪ್ರಾಯವಿರುವದು. ಸೂಕ್ಷ್ಮವಾದ ಜಂತುಗಳಿಂದಲೂ ಸಂಧಿಗಳು ಹಿಡಿಯುವವೆಂದು ಕೆಲವರು ಹೇಳುತ್ತಾರೆ.

ಹಿರಿಹಿರಿಯರಿಂದ ಬಂದ ಸಂಧಿವಾತವು ಮಾತ್ರ ಹೆಂಗಸರಿಗೂ, ಗಂಡಸರಿಗೂ ಸರಿಯಾಗಿಯೇ ಉಪದ್ರವ ಕೊಡುತ್ತದೆ.

**ಲಕ್ಷಣಗಳು :** ಮೈಮುರಿದು ಜ್ವರ ಬರುತ್ತದೆ. ಅರುಚಿ, ನೀರಡಿಕೆ, ಅಪಚನ, ಜಾಡ್ಯ ಮೊದಲಾದ ಚಿನ್ಹಗಳು ಮೊದಲು ತೋರುತ್ತವೆ. ಬಳಿಕ ಯಾವದಾದರೊಂದು ಸಂದು ಬಾತು ನೋವಾಗುತ್ತದೆ. ಒಳಗೆ ಚೇಳು ಕಡಿದಂತೆ ಹೊಡಿಸುತ್ತದೆ. ಬರ-ಬರುತ್ತ ಕೈ, ಕಾಲು, ನಡ ಮೊದಲಾದ ಎಲ್ಲ ಸಂಧಿಗಳೊಳಗೂ ನೋವು ಹೆಚ್ಚಾಗಿ ರೋಗಿಯು ಬಹಳ ಚಡಪಡಿಸುತ್ತಾನೆ. ಇದರಿಂದ ಮಲಬದ್ಧವೂ ಹೊಟ್ಟೆಯೊಳಗೆ ಗುರುಗುರು ಶಬ್ದವೂ ಆಗುವದುಂಟು. ಪ್ರಾಚೀನ ವೈದ್ಯರು ಇದು ಬಹಳ ಕಠಿಣ[೧] ರೋಗವೆಂದು ಬರೆದಿರುವರು. ಆಧುನಿಕ ವೈದ್ಯರಾದರೂ ಈ ರೋಗವು ಫುಪ್ಪುಸವನ್ನು ಸೇರಿತೆಂದರೆ ರೋಗಿಯು ಉಳಿಯುವದು ಕಷ್ಟವೆಂದು ಹೇಳುತ್ತಾರೆ.

ಒಮ್ಮೊಮ್ಮೆ ಈ ಬೇನೆಯು ೪-೬ ವಾರಗಳೊಳಗೆ ಉಪಚಾರದಿಂದ ಕಡಿಮೆ ಯಾಗುತ್ತದೆ. ಒಮ್ಮೊಮ್ಮೆ ಆಮರಣವೂ ಉಳಿಯುತ್ತದೆ. ಇದರಿಂದ ಕೈಕಾಲು ಊನ ವಾಗುವದೂ ಉಂಟು.

**ಉಪಾಯವು :**

೧. ರಾಸ್ನೆ, (ಸಿಗದಿದ್ದರೆ ದಾಗುಡಿಬೇರು) ನೆಗ್ಗಿನಮುಳ್ಳು, ಔಡಲಬೇರಿನ, ಮೇಲಿನ ತೊಗಟೆ, ದೇವದ್ವಾರ, ಬಿಳಿಗಣಜಲೆಬೇರು, ಕಕ್ಕೀಕಾಯಿತಿಳಲು, ಅಮೃತ ಬಳ್ಳಿ ಇವುಗಳನ್ನು ಸರಿಯಾಗಿ ಹಾಕಿ ಮಾಡಿದ ಕಷಾಯವನ್ನು ½ ತೊಲಿ ಶುಂಠೀ

---

೧. ಆಮವಾತಃ ಸಉಚ್ಯತೇ ।
ಸಕಷ್ಟಃ ಸರ್ವ ರೋಗಾಣಾಂ ಯದಾ ಪ್ರಕುಪಿತೋ ಭವೇತ್॥
—ನಿಘಂಟು ರತ್ನಾಕರ

ಪುಡಿಯನ್ನು ಹಾಕಿ ೫ ತೊಲಿಯಂತೆ ಎರಡೂ ವೇಳೆ ಕೊಡಬೇಕು. ಇದರಿಂದ ಸರ್ವಾಂಗವನ್ನು ವ್ಯಾಪಿಸಿದ ಆಮವಾತವೂ ನಾಶವಾಗುತ್ತದೆ.[೧]

೨. ಔಡಲಬೇರು ೨ ತೊಲಿ, ಸುಂಟಿ ೧/೮ ತೊಲಿ, ೪೦ ತೊಲಿ ನೀರಲ್ಲಿ ಕಷಾಯ ಮಾಡಿ ೧೦ ತೊಲಿಗೆ ಇಳಿಸಬೇಕು. ಅದರಲ್ಲಿ ೨ ತೊಲಿ ಔಡಲೆಣ್ಣೆಯನ್ನೂ ೧/೪ ತೊಲಿ ಜವಖಾರದ ಪುಡಿಯನ್ನು ಹಾಕಿ ದಿನಾಲು ೨ ಹೊತ್ತು ತಕ್ಕೊಳ್ಳಬೇಕು.

೩. ಸುಂಟಿ, ಅಳಲೇಕಾಯಿ, ಸಣ್ಣಹಿಪ್ಪಲಿ, ಕರೇತಿಗಡಿ, ಪಾದೇಲವಣ ಇವುಗಳನ್ನು ಸಮನಾಗಿ ತಕ್ಕೊಂಡು ಚೂರ್ಣ ಮಾಡಿ ದಿನಾಲು ೧/೮ ತೊಲಿ ಚೂರ್ಣವನ್ನು ಬಿಸಿನೀರಿನ ಅನುಪಾನದೊಂದಿಗೆ ತಕ್ಕೊಳ್ಳಬೇಕು. ಇದರಿಂದ ಶೂಲಿ, ಹೊಟ್ಟೆಯ ಬಾವು, ಮೂಲವ್ಯಾಧಿ, ಸಂಧಿವಾಯು ಈ ರೋಗಗಳು ಪರಿಹಾರವಾಗುವವು.[೨]

೪. ಕಕ್ಕೇಮುಗುಳನ್ನು ತಂದು ಸಾಸುವೆಯೆಣ್ಣೆಯಲ್ಲಿ ಕರಿದು ಅನ್ನದ ಮೇಲೆ ಹಾಕಿಕೊಂಡು ಉಣ್ಣುವದರಿಂದ ಆಮವಾತವು ಶಾಂತವಾಗುವದು.[೩]

೫. ಯೋಗರಾಜಗುಗ್ಗಳ — ಚಿತ್ರಮೂಲ, ಹಿಪ್ಪಲೀಬೇರು, ಖುರಾಸಾನೀ ಅಜಿವಾನ, ಕಾಳಜೀರಿಗೆ, ವಾಯುವಡಂಗ, ಅಜಿವಾನ, ಜೀರಿಗೆ, ದೇವದಾರು, ಚವ್ಯ, ಯಾಲಕ್ಕಿ, ಸೈಂಧವಲವಣ, ಕೋಷ್ಠ, ರಾಶ್ಮಿ, ನೆಗ್ಗಿನಮುಳ್ಳು, ಕೋತಂಬರೀಬೀಜ, ಅಳಲೀಕಾಯಿ, ನೆಲ್ಲೀಕಾಯಿ, ತಾರೀಕಾಯಿ, ಜೇಕಿನಗಡ್ಡೆ, ಶುಂಠಿ, ಮೆಣಸು, ಸಣ್ಣಹಿಪ್ಪಲಿ, ದಾಲಚಿನ್ನಿ, ಬಾಳದಬೇರು, ಜವಖಾರ, ತಮಾಲ, ಪತ್ರಿ, ಚಾಕೀಸಪತ್ರಿ; ಇವೆಲ್ಲ ಸಮತೂಕ ತಕ್ಕೊಂಡು ಸಣ್ಣಾಗಿ ಚೂರ್ಣಮಾಡಿ ಸಮಭಾಗ ಶುದ್ಧ ಮಾಡಿದ ಗುಗ್ಗುಳವನ್ನೂ ತುಸು ತುಪ್ಪವನ್ನೂ ಕೂಡಿಸಿ ಕುಟ್ಟಿ ರೀತಿಯಂತೆ ಗುಳಿಗೆ ಮಾಡಿ ಸೀಸೆಯೊಳಗಾಗಲಿ, ತುಪ್ಪ ಹಾಕಿದ ಹಳೇ ಗಡಿಗೆಯೊಳಗಾಗಲಿ ಮುಚ್ಚಿಟ್ಟು, ದಿನಾಲು ಪ್ರಕೃತಿಮಾನ ನೋಡಿ ೧/೪ ತೊಲಿಯಿಂದ ೧ ತೊಲಿ ಒರೆಗೆ ಕೊಡಬೇಕು. ಇದರ ಸೇವನದಿಂದ ಆಮವಾತ, ಜಂತು, ದುಷ್ಟಗಾಯ, ಅಡಗಯ್ಯು, ಮೂಲವ್ಯಾಧಿ, ಬೇರೆ ತರದ

---

೧. ರಾಸ್ನಾಗೋಕ್ಷುರಕೈರಂಡದೇವದಾರುಪುನರ್ನವ ॥
ಗುಡೂಚ್ಯಾರಗ್ವಧಶ್ಚೈವ ಕ್ವಾಥ ಏಷಾಂ ಪಿಪಾಚಯೇತ್ ॥
ಶುಂಠೀಚೂರ್ಣೇನ ಸಂಯುಕ್ತೋ ಪಿಬೇಜ್ಜಂಘಾಕಟಿಗ್ರಹೇ ॥
ಪಾರ್ಶ್ವಪೃಷ್ಠೋರುಪೀಡಾಯಾಮಾಮವಾತೇಸು ದುಸ್ತರೇ ॥ —ಶಾರ್ಙ್ಗಧರ

೨. ಶುಂಠೀಹರೀತಕೀಕೃಷ್ಣಾ ತ್ರಿವೃತ್ಸಾವರ್ಚಲಂ ತಥಾ ॥
ಜ್ಞೇಯಂ ಪಂಚಸಮಂ ಚೂರ್ಣಮೇತಚ್ಛೂಲಹರಂ ಪರಮ್ ॥
ಅಧ್ಮಾನ ಜಠರಾರ್ಶೋಘ್ನಮಾಮವಾತ ಹರಂ ಸ್ಮೃತಮ್ ॥ —ನಿಘಂಟು ರತ್ನಾಕರ

೩. ಆರಗ್ವಧಸ್ಯ ಪತ್ರಾಣಿ ಭೃಷ್ಟಾನಿ ಕಟುತೈಲತಃ ॥
ಆಮವಾತಪ್ರಶಾಂತ್ಯರ್ಥಂ ಖಾದೇದ್ಭಕ್ತಾನ್ವಿತಾನಿ ಚ ॥ —ನಿಘಂಟು ರತ್ನಾಕರ

ವಾತರೋಗ ಮುಂತಾದವು ನಾಶವಾಗುತ್ತವೆ. ಇದಕ್ಕೆ ಪಥ್ಯವಿಲ್ಲ. ಆದರೂ ಬೇಕೆಂದು ಅಪಥ್ಯ ಮಾಡುವದು ಸರಿಯಲ್ಲ.[೧]

೬. [೨]ಕೇರು ೧ ತೊಲಿ, ಎಳ್ಳು ೧/೨ ತೊಲಿ, ಅಳಲೀಕಾಯಿತೋಟೆ ೧/೨ ತೊಲಿ ಇವುಗಳನ್ನು ಕುಟ್ಟಿ ಪುಡಿ ಮಾಡಿ ಅದರಲ್ಲಿ ೨ ತೊಲಿ ಹಳೆ (ಬಿಳೇ ಕಬ್ಬಿನದಿದ್ದರೆ ಒಳ್ಳೆಯದು) ಬೆಲ್ಲವನ್ನು ಕೂಡಿಸಿ ಕುಟ್ಟಿ ದಿನಾಲು ಒಪ್ಪತ್ತಿನಂತೆ ತಕ್ಕೊಳ್ಳಬೇಕು. ೧ ವಾರದೊಳಗೆ ಗುಣವಾಗುತ್ತದೆ; ಇಲ್ಲದಿದ್ದರೆ ಮತ್ತೊಂದು ವಾರ ಕೊಡಬೇಕು. ಪಥ್ಯಕ್ಕೆ ಕಾಯಿಸಿ ಕೆನೆತೆಗೆದ ಆಕಳಹಾಲು, ತಾಜಾತುಪ್ಪ, ಅನ್ನ, ಗೋದಿ, ಸಜ್ಜಿಗೆ ಕೊಡಬೇಕು. ಇದು, ಬಡ ಹಳ್ಳಿಗಾಡ ಊರವರಿಗೆ ಸುಲಭವಾಗಿದೆ. ಇದನ್ನು ಜ್ವರವಿಲ್ಲದ ಸಂಧಿವಾತದಲ್ಲಿಯೇ ಕೊಡಬೇಕು. ಜ್ವರವಿದ್ದರೆ ಬೇರೆ ಔಷಧ ಕೊಡಬೇಕು. ಬರೆ ಶುಂಠಿ ೧/೨ ತೊಲಿ, ಬೆಲ್ಲ ೧ ತೊಲಿ ಕೂಡಿಸಿ ತಕ್ಕೊಂಡರೂ ಆ ವಾತವು ವಾಸಿಯಾಗುತ್ತದೆ.

ಈ ರೋಗದಲ್ಲಿ ನೀರಡಿಕೆ ಹೆಚ್ಚಿದರೆ– ಶುಂಠಿ, ಮೆಣಸು, ಹಿಪ್ಪಲಿ, ಚವ್ಯ, ಚಿತ್ರಮೂಲ ಇವುಗಳನ್ನು ೧/೪ ತೊಲಿ ಹಾಕಿ ೧ ತಂಬಿಗಿ ನೀರು ಕಾಯಿಸಿ ಅರ್ಧ ಇಳಿಸಿ ಸೋಸಿ ಕಬ್ಬಿನ ಇಲ್ಲವೆ ಮಂಣಿನ ಪಾತ್ರೆಯಲ್ಲಿ ಮುಚ್ಚಿಡಬೇಕು. ನೀರು ಬೇಡಿದಾಗ ಇದನ್ನು ಕೊಡುವದರಿಂದ ಆರೋಗ್ಯವಾಗುತ್ತದೆ.[೩]

---

೧. ಚಿತ್ರಕಂ ಪಿಪ್ಪಲೀಮೂಲಂ ಯವಾನೀಂ ಕಾರವೀಂ ತಥಾ ।
ವಿಡಂಗಾನ್ಯಜಮೋದಾಶ್ಚ ಜೀರಕಂ ಸುರದಾರುಚ ॥
ಚತ್ಯೈಲಾಸ್ಯೆಂಧವಂ ಕುಷ್ಠಂ ರಾಸ್ನಾಗೋಕ್ಷುರಧಾನ್ಯಕಮ್ ।
ತ್ರಿಫಲಾಮುಸ್ತಕಂ ವ್ಯೋಷಂ ತ್ವಗುಶೀರಂ ಯವಾಗ್ರಜಮ್ ॥
ತಾಲೀಶ ಪತ್ರಂ ಪತ್ರಂ ಚ ಸೂಕ್ಷ್ಮಚೂರ್ಣಾನಿಕಾರಯೇತ್ ।
ಯಾವಂತ್ಯೇತಾವಿ ಚೂರ್ಣಾನಿ ತಾವನ್ಮಾತ್ರಂ ತು ಗುಗ್ಗುಲಮ್ ॥
ಸಮ್ಮರ್ಘ ಸರ್ಪಿಷಾಗಾಢಂ ಸ್ನಿಗ್ಧೇ ಭಾಂಡೇ ನಿಧಾಪಯೇತ್ ।
ತತೋ ಮಾತ್ರಾಂ ಪ್ರಯುಂಜೀತ ಯಥೇಷ್ಟಾಹಾರವಾನಪಿ ॥
ಯೋಗರಾಜ ಇತಿ ಖ್ಯಾತೋ ಯೋಗೋಽಯಮಮೃತೋಪಮಃ ।
ಆಮವಾತ (ಭವಾಂ ಪೀಡಾಂ) ಕ್ರಿಮಿಮುಷ್ಟವ್ರಣಾನಿ ಚ ॥
ಪ್ಲೀಹಗುಲ್ಮೋದರಾನಾಹದುರ್ನಾಮಾನಿ ವಿನಾಶಯೇತ್ ।
ಅಗ್ನಿಂ ಚ ಕುರುತೇ ದೀಪ್ತಂ ತೇಜೋ ವೃದ್ಧಿಂ ಬಲಂ ತಥಾ ॥
ವಾತರೋಗಾನ್ಯಜತ್ಯೇಷ ಸಂಧಿಮಜ್ಜಾಗತಾನಪಿ —ಚಕ್ರದತ್ತಃ

೨. ಭಲ್ಲಾತತಿಲಪಥ್ಯಾನಾಂ ಚೂರ್ಣಂ ಗುಡಸಮನ್ವಿತಮ್ ।
ಆಮವಾತಂ ಕಟೀಶೂಲಂ ಹನ್ಯಾದ್ವಾಗುಡನಾಗರಮ್ ॥

೩. ಆಮವಾತಾಭಿಭೂತಾಯ ಪೀಡಿತಾಯ ಪಿಪಾಸಯಾ ।
ಪಂಚ ಕೋಲೇನ ಸಂಸಿದ್ಧಂ ಪಾನೀಯಂ ಹಿತಮುಚ್ಯತೇ ॥
—ನಿಘಂಟು ರತ್ನಾಕರ

## ಮೇಲುಪಚಾರವು

೧. ಖಚನಾಗವನ್ನು ಮದ್ದುಗುಣಿಕೆಯು ರಸದಲ್ಲಿ ತೆಯ್ದು ಹಚ್ಚಿ ಕಾಸಿದರೆ ಬಾತು ಬಹಳ ಹೊಡೆಸುವ ಬೊಟ್ಟು ಮುಂತಾದ ಸಂದಿನ ಸೋವು ಕಡಿಮೆಯಾಗುತ್ತದೆ.

೨. ಬಡೇಸೋಪು, ದೇವದಾರು, ಸಾಸಿವೆ, ಸೈಂಧವಲವಣ ಇವುಗಳನ್ನು ಎಕ್ಕೆ ಹಾಲಿನಲ್ಲಿ ಅರೆದು ಹಚ್ಚಬೇಕು. ಬಾವೂ ಏನೂ ಇಲ್ಲದ ಸ್ಥಳಕ್ಕೆ ಹಚ್ಚಕೂಡದು.

೩. ತರ್ಪಣತೈಲ, ಪಿಟ್ಲಬೀಜದಎಣ್ಣೆ, ಔಡಲೆಣ್ಣೆ ಇವುಗಳನ್ನು ಹಚ್ಚಿ ತಿಕ್ಕಿದರೂ ಈ ನೋವು ಕಡಿಮೆಯಾಗುತ್ತದೆ.

**ಪಥ್ಯಾಪಥ್ಯಗಳು :** ಕಾಸುವದು, ಕಟ್ಟುವದು, ಬೆವರು ಬರುವಂತೆ ಮಾಡುವದು, ಉಪವಾಸ, ಹಳೆಅಕ್ಕಿ, ಬಳ್ಳುಳ್ಳಿ, ಹಾಗಲಕಾಯಿ, ಪಡುವಲಕಾಯಿ, ನುಗ್ಗೀಕಾಯಿ; ತುಪ್ಪ, ಔಡಲೆಣ್ಣೆ, ಗೋಮೂತ್ರ, ಖಾರಗೆಣಸು, ಬಿಸಿನೀರು ಇವೆಲ್ಲ ಪಥ್ಯಕರವಾಗಿವೆ.

ಹಾಲು, ಮೊಸರು, ಮೀನ, ಮಾಂಸ, ಉದ್ದು, ಕಸದ ಹಾಗು ಬರ್ಷಣದ ಪದಾರ್ಥಗಳೆಂದು ಪ್ರಸಿದ್ಧವಿರುವ ಜೀನಸುಗಳು, ಗಾಳೀ ಬಡಿಸಿಕೊಳ್ಳುವದು, ಮಲಮೂತ್ರಗಳ ವೇಗವನ್ನು ತಡೆಯುವದು, ಮೇಲಿಂದ ಮೇಲೆ ತಿನಸು, ತಣ್ಣೀರು, ಸ್ತ್ರೀಸೇವನ ಇವೆಲ್ಲ ಅಪಥ್ಯಗಳು.

ಔಷಧಗಳನ್ನು ಬಲ್ಲೆವೆಂದು ಬಂದ ಬಾವಾ ಭೈರಾಗಿಗಳ ಕಡೆಯಿಂದ ತಾಮ್ರ ಮುಂತಾದ ಅಶುದ್ಧ ಭಸ್ಮಗಳನ್ನು ತಕ್ಕೊಂಡು, ಹೊಟ್ಟೆಯಲ್ಲಿ ದಾಹವಾಗಲು ತಣ್ಣೀರನ್ನು ಸುರವಿಕೊಂಡದ್ದರಿಂದ ಕೈಕಾಲು ಹಿಡಿದು ಬಿದ್ದವರನ್ನು ಸ್ವತಃ ನೋಡಿದ್ದೇವೆ. ಇಂಥ ಮೋಹಕ್ಕೆ ಬೀಳಬಾರದು.

---

# ಆಮ್ಲಪಿತ್ತ

ತಂಗುಳದ ಹಾಗು ಹಳಸಿದ ಅನ್ನವನ್ನು ತಿನ್ನುವದರಿಂದಲೂ ದೋಸೆ ಮುಂತಾದ ಹುಳಿಯೊಡಸಿದ ಪದಾರ್ಥಗಳ ಅತಿ ಸೇವನದಿಂದಲೂ ಪಿತ್ತಾಧಿಕ್ಯದಿಂದಲೂ ಆಮ್ಲಪಿತ್ತವು ಹುಟ್ಟುತ್ತದೆ.

**ಲಕ್ಷಣಗಳು :** ಅನ್ನ ಪಚನವಾಗುವದಿಲ್ಲ; ದಣಿಯದೆ ಶ್ರಮವಾದಂತೆ ಅನಿಸುವದು, ಹೊಟ್ಟೆಯಲ್ಲಿ ಮಳಮಳಿಸುವದು, ತೊಳಿಸುವದು, ಮೈಗೆ ತಿಂಡಿ, ಹುಳಿಸುಟ್ಟು ತೇಗು ಅಬ್ಬಳಿಕೆ ಬರುವದು, ಎದೆ ಕುತ್ತಿಗೆಗಳು ಉರಿಯುವದು, ಮೈ ಜಡವಾದಂತೆ ಭಾಸವಾಗುವದು. ಈ ಬೇನೆ ಬಲಿಯುತೆಂದರೆ ಮೈ ಹಸರು ಅರಿಸಿಣ ಬಣ್ಣದ್ದಾಗುತ್ತದೆ,

ಮೈಮೇಲೆ ಪಿತ್ತಗಾದಿ-ಗಾಜರಿ-ಗಳೇಳುತ್ತವೆ, ಕಿವಿಗಳು ಬೆವರುತ್ತವೆ, ನೀರಡಿಕೆ, ಓಕರಿಕೆ, ತಲೆ ತಿರುಗುವದು, ತರತರದ ಬಣ್ಣದ ಜುಲಾಬುಗಳಾಗುವದು ಮೊದಲಾದ ಪಿತ್ತದ ಚಿನ್ಹಗಳು ವಿಶೇಷವಾಗಿ ತೋರುತ್ತವೆ.

ಇದರಲ್ಲಿ ಅಧೋಗತ ಊರ್ಧ್ವಗತವಾದರೆ ತರತರದ ಬಣ್ಣದ ವಾಂತಿ ಒಮ್ಮೊಮ್ಮೆ ರಕ್ತಗೂಡಿದ ವಾಂತಿ ಸಹಾ ಆಗುವದೂ ಉಂಟು.

**ಉಪಾಯಗಳು :** ಆಮ್ಲಪಿತ್ತವು ಊರ್ಧ್ವಗತವಾಗಿದ್ದರೆ ಜುಲಾಬಿನ ಔಷಧ ಕೊಡುವದೂ ಒಳ್ಳೆಯದು. ಕಹಿಯಾದ ಔಷಧಗಳನ್ನು ಮೊದಲು ಪಾಚನಕ್ಕಾಗಿ ಕೊಟ್ಟು, ಪಥ್ಯದಿಂದ ಇಡಬೇಕು. ಸರ್ವಾಂಗದಲ್ಲಿ ಉರಿಯುತ್ತಿದ್ದರೆ ಸೌಮ್ಯವಾದ ವಿರೇಚನವನ್ನು ಅವಶ್ಯವಾಗಿ ಕೊಡಬೇಕು.

೧. [೧] ಕಹಿಪಡುವಲು, ಬೇವಿನ ತೊಗಟೆ, ಮುಂಗಾರಿಕಾಯಿ ಇವುಗಳ ಕಷಾಯದೊಳಗೆ ಸೈಂಧವಲವಣವನ್ನು ಹಾಕಿ ಕೊಟ್ಟರೆ ವಾಂತಿಯಾಗುತ್ತದೆ.

ತ್ರಿಫಲಾದ ಕಷಾಯದಲ್ಲಿ ತಿಗಡಿಯ ಪುಡಿಯನ್ನೂ ಜೇನುತುಪ್ಪವನ್ನೂ ಕೂಡಿಸಿ ಕೊಟ್ಟರೆ ಹೊಟ್ಟೆ ಜಾಡಿಸಿ ಪಿತ್ತವು ಕಿತ್ತುತ್ತದೆ.

೨. ಆಶ್ವಿನ ಕಾರ್ತಿಕ ಮಾಸಗಳಲ್ಲಿ ಆಮ್ಲಪಿತ್ತದ ಉಪದ್ರವವು ಹೆಚ್ಚಾಗಿ ದಾಹ ವಾಂತಿ ಮೊದಲಾದ್ದು ಆಗುತ್ತಿದ್ದರೆ,

[೨] ೧ ತೊಲಿ ದ್ರಾಕ್ಷಿಯನ್ನು ಮುನ್ನಾದಿವಸ ಜಜ್ಜಿ ೧ ಕಚ್ಚಾಶೇರು ನೀರೊಳಗೆ— ಚೀನೀಮಣ್ಣಿನ ಪಾತ್ರೆಯಲ್ಲಿ ಇಲ್ಲವೆ ಬೆಳ್ಳಿಯ, ಕಲಾಯದ ಅಥವಾ ಕಲ್ಲುಮಣ್ಣಿನ ಪಾತ್ರೆಯಲ್ಲಿ ಹಾಕಿ ನೆನಿಯಿಡಬೇಕು. ಮುಂಜಾನೆ ಸೋಸಿಕೊಂಡು, ತಿಗಡಿ ೧/೪ ತೊಲಿ, ನೆಲಿಂಗಳ ೧/೪ ತೊಲಿ, ಜೇಕಿನ ಗಡ್ಡಿ ೧/೪ ತೊಲಿ, ಕಲ್ಲುಸಕ್ಕರೆ ೧/೨ ತೊಲಿ, ಬಾಳದ ಬೇರು ೧/೪ ತೊಲಿ, ಗಂಧದಕೆಚ್ಚು ೧/೪ ತೊಲಿ, ಜ್ಯೇಷ್ಠಮಧು ೧/೪ ತೊಲಿ ಇವುಗಳ ವಸ್ತ್ರಗಾಳಿತ ಚೂರ್ಣವನ್ನು ಹಾಕಿ ಕೊಡಬೇಕು. ಈ ಔಷಧವನ್ನು ಒಂದು ದಿನ ಬಿಟ್ಟು ಒಂದುದಿನ ಹೀಗೆ ೭ ದಿವಸ ಮುಂಜಾನೆ ಒಂದೇಸಾರೆ ತಕ್ಕೊಂಡರೆ ಆರೋಗ್ಯವಾಗುವದು.

---

೧. ಆಮ್ಲಪಿತ್ತೇ ತು ವಮನಂ ಪಟೋಲಾರಿಷ್ಟವಾರಿಣಾ ||
ಕಾರಯೇನ್ಮದನಕ್ಷೌದ್ರಸಿಂಧುಯುಕ್ತಂ ತತೋ ಭಿಷಕ್ ||
ವಿರೇಚನಂ ತ್ರಿವೃಚ್ಚೂರ್ಣಂ ಮಧುನಾ ತ್ರಿಫಲಾದ್ರವೈಃ || — ನಿಘಂಟು ರತ್ನಾಕರ

೨. ತ್ರಿವೃದ್ದುರಾಲಭಾಮುಸ್ತಾ ಶರ್ಕರೋದೀಚ್ಯಚಂದನಮ್ ||
ದ್ರಾಕ್ಷಾಂಬುನಾಸಯಷ್ಟೀಕಂ ಶೀತಲಂ ಚ ಘನಾತ್ಯಯೇ ||
(ಹಿತಕಾರಿವಿರೇಚನ ಪಿತ್ತಿಭಾವಃ)
— ಶಾರ್ಙ್ಗಧರ

೩. ಆಮ್ಲಪಿತ್ತದಲ್ಲಿ ಜೀರ್ಣಜ್ವರವೂ ಕೂಡಿದ್ದರೆ ದಿನಾಲು ಮಲಗುವಾಗ್ಗೆ ೧/೩ ತೊಲಿ ಜೇನುತುಪ್ಪದಲ್ಲಿ ೧/೪ ತೊಲಿ ತೂಕ ಸಣ್ಣಹಿಪ್ಪಲೀ ಪುಡಿಯನ್ನು ಹಾಕಿಕೊಡಬೇಕು. ಪಥ್ಯಕ್ಕೆ ಆಕಳಹಾಲು, ಸಕ್ಕರಿ ಅನ್ನದಗೂಡ ಕೊಡಬೇಕು.

ಹುಳಿಸುಡುವದೂ ಗಂಟಲಲ್ಲಿ ಉರಿಯುವದೂ ಇದ್ದರೆ, ಸಂಜಿಯ ಮುಂದೆ ಸಿಂಬೀಹಣ್ಣಿನ ೨ ತೊಲಿ ರಸದಲ್ಲಿ ೧/೪ ತೊಲಿ ಕಲ್ಲುಸಕ್ಕರೆ ಬೆರಸಿ ಕೊಡಬೇಕು.[೧]

೪. ಬಹಳ ದಿವಸದ ಆಮ್ಲಪಿತ್ತಕ್ಕೆ– ಚಿರಾಯಿತಕಡ್ಡಿ ೧/೪ ತೊಲಿ, ಬೇವಿನಕಡ್ಡಿ ೧/೪ ತೊಲಿ, ಅಡಸಾಲದ ಎಲೆ ೧/೪ ತೊಲಿ, ತ್ರಿಫಲಾ ೧/೪ ತೊಲಿ, ಚಿಹುಪಡವಲ ೧/೪ ತೊಲಿ, ಅಮೃತಬಳ್ಳಿ ೧/೪ ತೊಲಿ, ಕಾಡಿಗಿಗಂಗಿನ ತೊಪ್ಪಲ ೧/೪ ತೊಲಿ ಇವುಗಳ ಕಷಾಯ ಮಾಡಿ ಆರಿಸಿ, ಅದರಲ್ಲಿ ೧/೩ ತೊಲಿ ಜೇನುತುಪ್ಪವನ್ನು ಹಾಕಿಕೊಟ್ಟರೆ–ದೂಷಿತವಾದ ಮನಸ್ಸು ವೇಶ್ಯೆಯರ ಕಡೆಗಣ್ಣಿನ ನೋಟದಿಂದ ಕರಗಿಹೋಗುವಂತೆ ಆಮ್ಲಪಿತ್ತವು ಈ ಕಷಾಯದಿಂದ ಕರಗಿ ಹೋಗುವದೆಂದು– ಒಬ್ಬ ವೈದ್ಯ ಕವಿಯು ಬಣ್ಣಿಸಿರುವನು.[೨]

೫. ಶತಾವರೀಬೇರು ೬೪ ತೊಲಿ, ಆಕಳತುಪ್ಪ ೬೪ ತೊಲಿ ಇವುಗಳ ನಾಲ್ಕು ಪಟ್ಟು ಆಕಳ ಹಾಲು ಹಾಕಿ ತುಪ್ಪವನ್ನು ಸಿದ್ಧ ಮಾಡಿ ದಿನಾಲು ಸಂಜೆ ಮುಂಜಾನೆ ೧ ತೊಲಿ ಸೇವಿಸಿದರೆ, ಆಮ್ಲಪಿತ್ತ, ನೀರಡಿಕೆ, ಧಾಪು, ಸಂತಾಪ ಮುಂತಾದ ವಿಕಾರಗಳು ನಾಶವಾಗುತ್ತವೆ.[೩] (ಇದಕ್ಕೆ "ಶತಾವರೀಘೃತ"ವೆನ್ನುತ್ತಾರೆ. ಆಕಳತುಪ್ಪವೂ ಹಾಲೂ ಸಿಗದಿದ್ದರೆ ಎಮ್ಮೆಯದನ್ನು ಹಾಕಿದರೂ ಸಾಗುವದು.)

೬. ನೆಲ್ಲೀಕಾಯಿಗುಳಂಬು–ಮುರಾವಳಾ-ಆಗಲೀ ಕುಶ್ಮಾಂಡ-ಸಂಡಿಗಿಗುಂಬಳ-ದ ಪಾಕವಾಗಲೀ ಈ ರೋಗಕ್ಕೆ ಗುಣಕಾರಿಯಾಗಿವೆ.[೪]

ಈ ರೋಗವು ಪಿತ್ತಾತಿಸಾರದಂತೆ ಒಮ್ಮೊಮ್ಮೆ ಭ್ರಾಂತಿಯನ್ನುಂಟು ಮಾಡುತ್ತದೆ. ವಿಚಾರಿಸಿ ಔಷಧಯೋಜನೆ ಮಾಡಬೇಕು.

---

೧. ಪಿಪ್ಪಲೀಮಧುಸಂಯುಕ್ತಾ ಚಾಮ್ಲಪಿತ್ತವಿನಾಶನೀ ॥
ಜಂಬೀರಸ್ವರಸಃ ಪೀತಃ ಸಾಯಂ ಹಂತ್ಯಮ್ಲಪಿತ್ತಕಮ್ ॥ —ನಿಘಂಟು ರತ್ನಾಕರ

೨. ಭೂನಿಂಬನಿಂಬತ್ರಿಫಲಾಪಟೋಲೀ ವಾಸಾಽಮೃತಾಪರ್ಪಟಮಾರ್ಕವಾಣಾಮ್ ॥
ಕ್ವಾಥೋ ಹರೇತ್ಕ್ಷೌದ್ರಯುತೋಽಮ್ಲಪಿತ್ತಂ ಚಿತ್ತಂ ಯಥಾವಾರವಧೂಕಟಾಕ್ಷಃ ॥
— ಲೋಲಿಂಬರಾಜ

೩. ಶತಾವರೀಮೂಲಕಲ್ಕೇ ಘೃತಪ್ರಸ್ಥಂ ಪಯಃ ಸಮಮ್ ॥
ಪಚೇನ್ಮೃದ್ವಗ್ನಿನಾಸಮ್ಯಕ್ ಕ್ಷೀರಂ ದತ್ವಾ ಚತುರ್ಗುಣಮ್ ॥
ನಾಶಯೇದಾಮ್ಲಪಿತ್ತಂ ಚಂ ವಾತಪಿತ್ತೋದ್ಭವಾಂಗದಾನ್ ॥
ರಕ್ತಪಿತ್ತಂ ತೃಷಾಂಮೂರ್ಛಾಂ ಶ್ವಾಸಂ ಸಂತಾಪಮೇವ ಚ ॥

೪. ಆಮ್ಲಪಿತ್ತೇ ಪ್ರಯೋಕ್ತವ್ಯಃ ಕಫಪಿತ್ತಹರೋವಿಧಿಃ ॥
ಗುಡಕೂಷ್ಮಾಂಡಕಂ ಚೈವ ತಥಾ ಖಂಡಾಮಲಕ್ಯಪಿ ॥ ——ನಿಘಂಟು ರತ್ನಾಕರ

ಹೆಂಗಸರಿಗೂ ಹುಡುಗರಿಗೂ ಮೇಲೆ ಹೇಳಿದ ಔಷಧಗಳನ್ನೇ ಅವರವರ ಬಲಾಬಲ ನೋಡಿ ಕೊಡಲಿಕ್ಕೆ ಅಡ್ಡಿಯಿಲ್ಲ.

**ಪಥ್ಯಾಪಥ್ಯಗಳು :** ಗೋಧಿ, ಜವೆಗೋಧಿ, ಹೆಸರು, ಹಳೆಬತ್ತದ ಅಕ್ಕಿ, ಬತ್ತರಳು, ಮಡಿವಾಳ ಹಾಗಲಕಾಯಿ, ಬಾಳೆಹೂವು, ಪಡವಲಕಾಯಿ, ಸೆಂಡಿಗೆಗುಂಬಳ ಕಾಯಿ, ದಾಳಿಂಬರ, ಕಿತ್ತಳೆ, ಅಂಜೀರ ಹಣ್ಣುಗಳು, ಜೇನುತುಪ್ಪ, ಸಕ್ಕರೆ, ಕಾದಾರಿದ ನೀರು, ಕಫ ಪಿತ್ತನಾಶಕವಾದ ಮಿಕ್ಕ ಆಹಾರಗಳು ಪಥ್ಯಕರವಾಗಿವೆ.

ಮಲಮೂತ್ರಗಳ ವೇಗವನ್ನು ಕಟ್ಟಿಕೊಳ್ಳೋಣ, ಅತಿಶ್ರಮ, ಸ್ತ್ರೀಸೇವನ ಇವುಗಳು ಅಪಾಯುವನ್ನುಂಟು ಮಾಡುವವು. ಅದರಂತೆ ಎಣ್ಣೆ, ಎಳ್ಳು, ಹುಳಿ, ಹುರುಳಿ, ಇಂಗು, ಸಾಸಿವೆ, ಕಾರ, ಉಪ್ಪು, ಜಡಗೂಳು, ಮೊಸರು ಮಜ್ಜಿಗೆ, ಸಾರಾಯಿ ಇವು ಅಪಥ್ಯವೆಂದು ತಿಳಿಯಬೇಕು.

—

## ಇಸಬು

ಮೈಯೊಳಗಿನ ಶಕ್ತಿ ಕಡಿಮೆಯಾಗುವದರಿಂದಲೂ ಹುಣ್ಣು ಹಚ್ಚಿಕೊಂಡು ರಕ್ತ ಕೆಟ್ಟದರಿಂದಲೂ ಹೆಂಗಸರು ವೇಳೆವೇಳೆಗೆ ಮುಟ್ಟಾಗದೆ ಋತುದೋಷವಾಗುವದರಿಂದಲೂ ನಿಸ್ಸತ್ವವಾದ ಆಹಾರದಿಂದಲೂ ಅಜೀರ್ಣ ಮಲಾವರೋಧಗಳಿಂದಲೂ ಮಧುಮೇಹ, ಸಂಧಿವಾತ, ಮೂತ್ರದೋಷ ಹಾಗು ರಕ್ತದೋಷ ಮುಂತಾದವುಗಳಿಂದಲೂ ಇಸಬು ಹುಟ್ಟುತ್ತದೆ. ಸಣ್ಣ ಮಕ್ಕಳಿಗೆ ಹಲ್ಲು ಬರುವಾಗ್ಗೆ, ಜಂತಿನ ಉಪದ್ರವವಾದಾಗ್ಗೆ, ಇಲ್ಲವೆ ತಾಯಿಯ ಹಾಲು ಕೆಟ್ಟಾಗ್ಗೆ ಇಸಬು ಹುಟ್ಟುವದುಂಟು. ಅತಿಶಯ ಅಭ್ಯಾಸ, ಮಾನಸಿಕ ವ್ಯಥೆ ಮೊದಲಾದವುಗಳಿಂದಲೂ ಇಸಬು ಆಗುತ್ತದೆ.

**ಲಕ್ಷಣಗಳು :** ಮೊದಲು ತೊಗಲು ಕೆಂಪಗಾದಂತಾಗಿ ಸಣ್ಣಸಣ್ಣ ಬಕ್ಕೆಗಳೇಳುತ್ತವೆ. ಅವು ಒಡೆದು ನೀರು ಸೋರಿ ಜಿಗಿಜಿಗಿಯಾಗಿ ಹಕ್ಕಳಿಗಟ್ಟಿ ಹಬ್ಬುತ್ತ ನಡೆಯುತ್ತದೆ. ಬೇಗನೆ ಹಬ್ಬುವದರಿಂದೇ ಇದಕ್ಕೆ (ವಿಸರ್ಪ) ಇಸಬು ಎಂಬ ಹೆಸರು ಬಂದಿದೆ. ಬಹಳ ತಿಂಡಿಬಿಟ್ಟು ರೋಗಿಯು ರಕ್ತ ಬರುವವರೆಗೆ ಕೆರೆದುಕೊಳ್ಳುತ್ತಾನೆ. ಇದು ಸಾಮಾನ್ಯವಾದರೂ ತ್ರಾಸದಾಯಕ ರೋಗವು. ಒಮ್ಮೆ ಹೋದಂತೆ ಕಂಡರೂ ಮತ್ತೆ ಆಗುತ್ತದೆ. ಇಸಬು ಒಂದು ಕಯ್ಯಿಗೆ ಆದರೆ ಮತ್ತೊಂದು ಕಯ್ಯಿಗೆ, ಒಂದು ಕಾಲಿಗೆ ಆದರೆ ಮತ್ತೊಂದು ಕಾಲಿಗೆ ಹೀಗೆ ನಿಯಮದಿಂದ ಅದೇ ಜಾಗೆಯಲ್ಲಿ ಆಗುವದುಂಟು. ಇದರಿಂದ ಗಾಯುಗಳೂ ಕುರುವುಗಳೂ ಆಗಿ ಮನುಷ್ಯನು ಬೇಸತ್ತು ಬೇಜಾರ ಆಗುತ್ತಾನೆ.

ಆರ್ಯವೈದ್ಯಕದಲ್ಲಿ ವಾತ, ಪಿತ್ತ, ಕಫ, ಸನ್ನಿಪಾತಗಳಿಂದುಂಟಾದ ನಾಲ್ಕು ಜಾತಿಯ ಇಸಬುಗಳೂ ಅಗ್ನಿ-ಗ್ರಂಥಿ-ಕರ್ದಮ-ಕ್ಷತಜ ಎಂದು ಬೇರೆ ನಾಲ್ಕು ಇಸಬುಗಳೂ ಬೇರೆಬೇರೆಯಾಗಿ ವರ್ಣಿಸಲ್ಪಟ್ಟಿವೆ. ಅಗ್ನಿವಿಸರ್ಪವೆಂದರೆ ಬೆಂಕೀ ಕಚ್ಚಿದಂತೆ

ಯಾವಾಗಲೂ ಉರಿಯುತಕ್ಕಂಥಾದ್ದು; ಗ್ರಂಥಿವಿಸರ್ಪವೆಂದರೆ ಸಣ್ಣ ದೊಡ್ಡ ಗಂಟು ಗಳೂ ತುಂಡಿಯೂ ಹಬ್ಬುವಂತಹದು; ಕರ್ದಮವಿಸರ್ಪವೆಂದರೆ ಕೆಸರಿನಂತೆ ಯಾವಾಗಲೂ ಹಸಿಯಾಗಿಯೂ ಹುತ್ತಬೆಳೆದಂತಾಗಿಯೂ ಇರತಕ್ಕಂಥಾದ್ದು; ಕ್ಷತಜವೆಂದರೆ ಯಾವ ದಾದರೊಂದು ಗಾಯದ ನೆವದಿಂದ ಹಬ್ಬಿಕೊಳ್ಳುವಂಥಾದ್ದು.

**ಉಪಾಯಗಳು :** ದುಷ್ಟವಾದ ಆಹಾರ ಸೇವನೆಯಿಂದಾಗಿದ್ದರೆ ಒಳ್ಳೇ ಆಹಾರ ಸೇವನೆ ಮಾಡಬೇಕು. ಹೀಗೆ ಯಾವ ಕಾರಣದಿಂದುಂಟಾಗಿದ್ದರೂ ಅದನ್ನು ನಿರೋಧ ಮಾಡಬೇಕು. ಮೊದಲು ಜುಲಾಬು ಆಗುವ ಔಷಧವನ್ನು ತೆಗೆದುಕೊಳ್ಳಬೇಕು. [೧] ತಿಗಡಿ ಅಳಲೀಕಾಯಿ ಇವುಗಳ ಕಷಾಯವು ದೇಹಶುದ್ಧಿಗೆ ಒಳ್ಳೆಯದು. ಕಫವು ಹೆಚ್ಚಾಗಿರುವದು ಕಂಡುಬಂದರೆ ವಾಂತಿಯ ಔಷಧವನ್ನು ಕೊಡತಕ್ಕ ಸಾಂಪ್ರದಾಯ ಇದೆ. ವಾಂತಿ ಮಾಡಿಸುವದು ಯೋಗ್ಯವೆಂದು ತೋರಿದರೆ ಮೊದಲು ವಾಂತಿಯ ಔಷಧ ಕೊಟ್ಟು ಆಮೇಲೆ ಜುಲಾಬಿನ ಔಷಧವನ್ನು ಕೊಡಬೇಕು. [೨] ಮಂಗಾರೀಕಾಯಿ, ಬೇವಿನತಾಟಿ, ಇಂದ್ರಜವೆ, ಜ್ಯೇಷ್ಠಮಧು ಇವುಗಳೊಳಗಿನ ಯಾವದಾದರೊಂದು ಪದಾರ್ಥದ ಕಷಾಯವನ್ನು ಕೊಟ್ಟರೆ ವಾಂತಿಯಾಗಿ ಕಫವು ಕಡಿಮೆಯಾಗುತ್ತದೆ. ಇಸಬಿನ ಉಪದ್ರವು ಹೆಚ್ಚಾದಾಗ್ಗೆ ಒಮ್ಮೊಮ್ಮೆ ಜ್ವರವೂ ಮೈ ಬಾಯುವದೂ ಕಂಡು ಬರುತ್ತದೆ. ಆಗ್ಗೆ ಈ ಕಷಾಯವನ್ನು ಹೊಟ್ಟೆಯೊಳಗೆ ಕೊಡಬೇಕು.

ಚಿರಾಯಿತಕಡ್ಡಿ, ಅಡಸಾಲದ ಎಲೆ, ಕಟುಕರೋಣಿ, ಕಹಿಪಡುವಲು, ಅಳಲೀ ಕಾಯಿ, ನೆಲ್ಲೀಕಾಯಿ, ತಾರೀಕಾಯಿ, ಗಂಧದಕೆಚ್ಚು, ಬೇವಿನತಾಟಿ ಇದರ ಕಷಾಯ ವನ್ನು ತಕ್ಕೊಂಡರೆ ಇಸಬು, ಜ್ವರ, ನೀರಡಿಕೆ, ಬಾವು, ತಿಂಡಿ ಮುಂತಾದ್ದು ಹೋಗುತ್ತದೆ.

**ಮೇಲುಪಚಾರವು :** ಇಸಬು ಹುರುಬರಕಾಗಿ ಹಕ್ಕಳೆಗಟ್ಟಿ ತದ್ದಿನಂತೆ ಇದ್ದರೆ ಮೇಲೆ ಎಣ್ಣೆಯನ್ನು ಹಚ್ಚಿ ಮಿದುವು ಮಾಡಬೇಕು. ಬಳಿಕ ಕಾರ್ಬಾಲಿಕ್ ಸಾಬಾಣ ದಿಂದ ಸ್ವಚ್ಛವಾಗಿ ತೊಳಿಯಬೇಕು. ಇಂಗ್ರೇಜೀ ಔಷಧಗಳಲ್ಲಿ ಸುಂಬಕಾರ, ಪಾರಜ ಹಾಗು ಆಯೋಡಿನ ಈ ಔಷಧಗಳು ಮೇಲೆ ಹಚ್ಚುವದಕ್ಕೆ ಮೇಲಾದ ಉಪಾಯಗಳೆಂದು ಪ್ರಸಿದ್ಧವದೆ.

*೧. ಜೀರಿಗೆ, ಅಂಬೀಹಳದಿ, ಮೆಣಸು, ಸಂಗಜೀರಿಗೆ, ಅರಿಶಿಣ, ಕಂಬೀಚಂದ್ರ, ಮನಶೀಳ, ಗಂಧಕ, ಪಾರಜ ಇವುಗಳ ಮಲಾಮು ಹಚ್ಚುದರಿಂದ ಇಸಬು ವಾಸಿ

---

೧. ತ್ರಿವೃದ್ಧರೀತಕೀಭಿರ್ವಾ ವಿಸರ್ಪೇ ಶೋಧನಂ ಹಿತಮ್ ॥

೨. ಮದನಮ್ಮಧುಕನ್ನಿಂಬಂ ವತ್ಸಕಸ್ಯ ಫಲಾನಿ ಚ ॥
ಏತೈರ್ವಮಿರ್ವಿಧಾತವ್ಯಾ ವಿಸರ್ಪೇ ಕಫಸಂಭವೇ ॥ — ನಿಘಂಟು ರತ್ನಾಕರ

* ಭೂನಿಂಬವಾಸಾ ಕಟುಕಾಪಟೋಲಮ್ । ಫಲತ್ರಿಕಂ ಚಂದನ ನಿಂಬಸಿದ್ಧಃ ॥
ವಿಸರ್ಪ ದಾಹಜ್ವರ ಶೋಫಕಂಡೂ । ವಿಸ್ಫೋಟ ತೃಷ್ಣಾ ವಮಿನುತ್ಕಷಾಯಃ ॥
— ನಿಘಂಟು ರತ್ನಾಕರ

ಯಾಗುತ್ತದೆ. ಮೊದಲು ಗಂಧಕ ಪಾರಜವನ್ನು ಒಂದೇ ಜೀವವಾಗುವಂತೆ ಅರೆದು ಆಮೇಲೆ ಬೇರೆ ಔಷಧಗಳ ಸೋಸಿದ ಪುಡಿಯನ್ನೂ ತುಪ್ಪವನ್ನೂ ಕೂಡಿಸಿ ಚನ್ನಾಗಿ ಘೋಟಿಸಿದರೆ ಮುಲಮು ಸಿದ್ಧವಾಗುತ್ತದೆ.

೨. ಔಡಲ, ವಿಷಗುಂಬಳ, ಬೇವು, ತರೋಟಿಗ, ಬಾವಂಚಿ, ಅಂಕಲಿಗ ಇವುಗಳ ಬೀಜಗಳನ್ನು ಸಮನಾಗಿ ತೆಗೆದುಕೊಂಡು ಪಾತಾಳ ಯಂತ್ರದಿಂದ ಎಣ್ಣೆ ತೆಗೆದು ಹಚ್ಚಿದರೆ ಇಸಬು ಮುಂತಾದ್ದು ಹೋಗುತ್ತದೆ.[೧]

೩. ಮುದ್ದುಗುಣಿಕೆ, ವೀಳ್ಯದಎಲೆ, ಜಾಜೀತೊಪ್ಪಲ, ಹೆಗ್ಗುರೊಟಿಗನತೊಪ್ಪಲ, ಕಪಿಲಾಹಿಟ್ಟು, ಕೋಷ್ಠಕೊಳಂಜನ (ಕೆಲವರು ಇದರಲ್ಲಿ ಮನಶೀಳವನ್ನು ಹಾಕುತ್ತಾರೆ.) ಇವುಗಳನ್ನೂ ಪಾರಜವನ್ನೂ ಕೂಡಿಸಿ ಅರೆದು ಎಣ್ಣೆಯಲ್ಲಿ ಕಲಿಸಿ ಹಚ್ಚಿದರೆ, ಇಸಬೂ ಮಿಕ್ಕತ್ವಗ್ರೋಗಗಳೂ ಕಾಲುಬಿರಿಯುವದೂ ತೊಗಲು ಕಪ್ಪಾಗುವದೂ ಹೋಗುತ್ತವೆ.[೨]

ಇಸಬಿನ ಉರುಪು ಕಡಿಮೆಯಾಗುವದಕ್ಕೆ —

೪. ಆಲ, ಹತ್ತಿ, ಅರಳೆ, ಬಸರಿ, ಸಿಸಿವಾಲ ಇವುಗಳ ತೊಗಟೆಗಳನ್ನು ತಣ್ಣೀರಿನಲ್ಲಿ ತೇಯ್ದು ಶತಧೌತಘೃತವನ್ನು ಕೂಡಿಸಿ ಹಚ್ಚಿದರೆ ದಾಹವು ಕಡಿಮೆಯಾಗಿ ಇಸಬು ಮಾಯುತ್ತದೆ.[೩]

## ಗಂಟಿನ ಇಸಬಿಗೆ :

೫. ಆಲದಪಾರಂಬಿ, ಬಾಳೇದಿಂಡು, ಗುಲಗಂಜಿ ಇವುಗಳನ್ನು ಸಣ್ಣಾಗಿ ಅರೆದು ಶತಧೌತಘೃತದೊಂದಿಗೆ ಹಚ್ಚಿದರೆ ಗ್ರಂಥಿವಿಸರ್ಪವು ಕಡಿಮೆಯಾಗುತ್ತದೆ.[೪]

---

೧. ಏರಂಡತುಂಬೀ ಕಟುನಿಂಬ ಚಕ್ರಮರ್ದೋ । ತ್ಥಬೀಜಾನಿ ಚ ಸೋಮರಾಜೀ ||
ಅಂಕೋಲಬೀಜಾನಿ ಕೃತ್ವಾ । ಪಾತಾಲಯಂತ್ರೇಣ ಸುತೈಲಮೇಷಾಮ್ ||
ಪ್ರಗೃಹ್ಯತಸ್ಯಾಥವಿಮರ್ದನಂ ಹಿ । ವಿಸರ್ಪಕಾದೀನ್ನಿಹಂತಿ ಸದ್ಯಃ ||
— ನಿಘಂಟು ರತ್ನಾಕರ

೨. ಕನಕಭುಜಗವಲ್ಲೀ ಮಾಲತೀಪತ್ರಮೂರ್ವಾ |
ರಸಗದಕುನಟೀಭಿರ್ಮರ್ದಿತಸ್ತೈಲಯೋಗಾತ್ ||
ಅಪಹರತಿ ರಸೇಂದ್ರಃ ಕುಷ್ಠಕಂಡೂವಿಸರ್ಪಂ |
ಸ್ಫುಟಿತ ಚರಣರಂಧ್ರಂ ಶ್ಯಾಮಲತ್ವಂ ತ್ವಚಾಯಾಃ || — ನಿಘಂಟು ರತ್ನಾಕರ

೩. ಶತಧೌತಘೃತವಿಮಿಶ್ರಃ । ಕಲ್ಕಸ್ತ್ವಕ್ಪಂಚಕಸ್ಯ ಲೇಪೇನ ||
ಬಹು ದಾಹಕಲಿನಪೂರ್ವಮ್ । ಅಗ್ನಿವಿಸರ್ಪಂ ವಿನಾಶಯತಿ ||
— ನಿಘಂಟು ರತ್ನಾಕರ

೪. ನ್ಯಗ್ರೋಧಪಾದೋ ಗುಂಜಾ ಚ ಕದಲೀಗರ್ಭ ಏವ ಚ ||
ಏತೈರ್ಗ್ರಂಥಿವಿಸರ್ಪಘ್ನೋ ಲೇಪೋ ಧೌತಾಜ್ಯ ಸಂಭವಃ ||
— ನಿಘಂಟು ರತ್ನಾಕರ

**ಪಥ್ಯ :** ಹಳೆಗೋಧಿ, ಜವೆಗೋಧಿ, ನವಣೆ, ತೊಗರಿ, ಬೆಣ್ಣೆ, ತುಪ್ಪ, ದ್ರಾಕ್ಷೆ ಮೊದಲಾದ ಬರಪಣವಲ್ಲದ ಪದಾರ್ಥಗಳು ಪಥ್ಯವಾಗಿವೆ.

**ಅಪಥ್ಯ :** ಹುರಳಿ, ಉದ್ದು, ಸಾಸಿವೆ, ಮದ್ಯ, ಹುಳಿ, ಉಪ್ಪು ಮೊದಲಾದ ಉಷ್ಣ ಹಾಗು ವಾತುಲ ಪದಾರ್ಥಗಳೂ ಹಗಲು ಮಲಗುವದು, ವ್ಯಾಯಾಮ, ಸ್ತ್ರೀ ಸಹವಾಸ, ಸಿಟ್ಟು ಮೊದಲಾದ ಕರ್ಮಗಳೂ ಅಪಥ್ಯವಾಗಿವೆ.

---

## ಇಂದ್ರಲುಪ್ತ (ತೇಗಳಿ)

ಇಂದ್ರಲುಪ್ತ ಅಥವಾ ತೇಗಳಿ ಅಂದರೆ ತಲೆಯ ಇಲ್ಲವೆ ಮೋರೆಯ ಮೇಲಿನ ಕೂದಲು ಉದರುವದು. ತೇಗಳಿ ಎಂಬದೊಂದು ಜಿಗಲಿಯಂಥ ಹುಳುವಿದ್ದು ಅದು ನೆಕ್ಕಿದ ಜಾಗೆಯು ಬೋಳಾಗಿ ಕಾಣಿಸುತ್ತದೆ; ಹೀಗೆ ಬಹಳ ಜನರ ತಿಳುವಳಿಕೆಯಿದೆ. ಅದರಿಂದ ಕೂದಲುದರಿದ ಸ್ಥಳಕ್ಕೆ ತೇಗಳಿ ಇಲ್ಲವೆ ತೇಗಳಿ ನೆಕ್ಕಿದ ರೋಗವೆನ್ನುವದುಂಟು. ವಸ್ತು ಗತ್ಯಾ ಇದು ಉಷ್ಣವಾತದಿಂದ ಆಗುತ್ತದೆ. ಆರ್ಯ ವೈದ್ಯರು ಇದನ್ನು ಕ್ಷುದ್ರರೋಗ ದಲ್ಲಿ ಗಣಿಸಿದ್ದಾರೆ. ಮುಪ್ಪಿನ ಮೂಲಕ ತಲೆಯ ಕೂದಲು ಉದರುತ್ತ ನಡೆದು ತಲೆಯು ಬೊಕ್ಕಾಗುವದೂ ಉಂಟು. ಬಹುಶಃ ಉಷ್ಣವಿಕಾರದಿಂದಲೂ ಒಂದು ಪ್ರಕಾರದ ತೊಗಲುವರೆ ತದ್ದಿನಿಂದಲೂ "ಕೇಶಾದ-ಲೋಮವಿಧ್ವಂಸ" ಎಂಬ ಕೃಮಿಗಳ ಯೋಗ ದಿಂದಲೂ ಕೂದಲು ಉದುರುತ್ತವೆ. ಹೆಣ್ಣುಮಕ್ಕಳು ಬಾಣಂತಿತನದಲ್ಲಿ ಮನಬಂದಂತೆ ಉಷ್ಣೋಪಚಾರ ಮಾಡಿಸಿಕೊಂಡದ್ದರಿಂದ ಕೂದಲು ಉದರುವದು ಕಂಡುಬಂದಿದೆ. ಅದರಂತೆ ಸಮುದ್ರತೀರದಲ್ಲಿ- ಗೋವೆ ಮೊದಲಾದ ಪ್ರಾಂತಗಳಲ್ಲಿ ವಾಸ ಮಾಡುವ ಜನರೊಳಗೂ ತಲೆಗೂದಲು ಉದರುವದು ದೃಷ್ಟಿಗೆ ಬೀಳುತ್ತದೆ. ಕೆಲ ಕೆಲ ಜನರು ತಲೆಯನ್ನು ತೇಗಳಿ ನೆಕ್ಕಿದ್ದರೆ ಸಂಪತ್ತಿಯ ಸೂಚಕವೆಂದು ತಿಳಿಯುತ್ತಾರೆ. "ಕ್ವಚಿತ್ಖಲ್ವಾಟಕೋ ದರಿದ್ರೀ" ಎಂಬ ಗಾದೆಯು ಈ ಮಾತನ್ನು ಸಮರ್ಥನ ಮಾಡುತ್ತದೆ.

**ಉಪಾಯುಗಳು :** ರೂಕ್ಷವಾದ ಆಹಾರವನ್ನು ಬಿಟ್ಟು ಪೌಷ್ಟಿಕ ಸ್ನಿಗ್ಧವಾದ ಆಹಾರ ಸೇವಿಸುವದು. ತದ್ದು ಇದ್ದ ಪಕ್ಷಕ್ಕೆ ಕತ್ತಿಯಿಂದ ಕೂದಲು ತೆಗೆದು ಅಲ್ಲಿ ಔಷಧಗಳನ್ನೂ ಹಚ್ಚತಕ್ಕದ್ದು. ಉಪದಂಶ (ಹುಣ್ಣು) ರೋಗವಿದ್ದರೆ ಅದು ವಾಸಿ ಯಾಗಲು ಕೂದಲುದರುವದು ಬಂದಾಗುವದು. ಆದ್ದರಿಂದ ಅಂಥ ಜೇನೆಗಳಿದ್ದರೆ ಪ್ರತಿಬಂಧಕವಾದ ಔಷಧವನ್ನೂ ತಕ್ಕೊಳ್ಳಬೇಕು.

೧. ಜ್ಯೇಷ್ಠಮಧು, ಹಸಿನೆಲ್ಲೇಕಾಯಿ ಇವುಗಳ ಕಲ್ಕ ಮಾಡಿ ನಾಲ್ಕು ಪಟ್ಟು ಒಳ್ಳೆ ಎಣ್ಣೆಯಲ್ಲಿ ಕೂಡಿಸಿ, ಎಣ್ಣೆಯ ನಾಲ್ಕುಪಟ್ಟು ಆಕಳ ಹಾಲು ಹಾಕಿ ಬೇಕಾದರೆ

---

೧. ಯಷ್ಟೀಮಧುಕ ಕ್ಷೀರಾಭ್ಯಾಂ । ನ್ನವಧಾತ್ರೀಫಲೈಃ ಶ್ರುತಮ್ ॥
ತೈಲನ್ನಸ್ಯಕೃತಂ ಕುರ್ಯಾತ್ । ಕೇಶಾನ್ಶ್ಮಶ್ರೂಣಿ ಸರ್ವಶಃ ॥ —ಶಾರ್ಙ್ಗಧರ

ತುಸು ನೀರನ್ನು ಕೂಡಿಸಿ ತೈಲವನ್ನು ಸಿದ್ಧ ಮಾಡಬೇಕು. ಇದಕ್ಕೆ "ಯಷ್ಟಿಮಧು ತೈಲ"ವೆಂಬ ಹೆಸರು. ಇದನ್ನು ದಿನಾಲು ಕೆಲವು ಹನಿ ಮೂಗಿನಲ್ಲಿ ಹಾಕುತ್ತಿರುವದರಿಂದ ತಲೆಯು ಹಾಗೂ ಮೀಸೆಯು ಕೂದಲು ಮೊದಲಿನಂತೆ ಚನ್ನಾಗಿ ಬರುತ್ತವೆ.

೨. ಹುಲಗಲತೊಗಟೆ, ಚಿತ್ರಮೂಲ, ಜಾಜೀಹೂವು, ಮರಗಣಿಗಲಬೇರು ಇವುಗಳ ಕಲ್ಕವನ್ನು ಹಾಕಿ ತೈಲವನ್ನು ಸಿದ್ಧ ಮಾಡಿ ಮೇಲೆ ಹಚ್ಚುತ್ತಿರುವದರಿಂದ ಇಂದ್ರಲುಪ್ತವು ನಾಶವಾಗುತ್ತದೆ.

೩. ನೆಲಗುಳ್ಳದ ರಸವನ್ನೂ ಜೇನುತುಪ್ಪವನ್ನೂ ಬೆರಿಸಿ ಹಚ್ಚಿದರೆ ಇಂದ್ರಲುಪ್ತವು ಹೋಗುತ್ತದೆ. ಗುಲಗಂಜಿಯ ಬೇರನ್ನೂ ಇಲ್ಲವೆ ಗುಲಗಂಜಿಯನ್ನೂ ಅಥವಾ ಕ್ಯಾರನ್ನೂ ತೆಯ್ದು ಹಚ್ಚಬೇಕು. ಬಿಳೀ ಕುದುರಿಯ ಖುರವನ್ನು ಕಡಿದು ಸುಟ್ಟು ಕರಿ ಬೂದಿ ಮಾಡಿ ಬೆಣ್ಣೆಯಲ್ಲಿ ಕೂಡಿಸಿ ಹಚ್ಚತಕ್ಕದ್ದು.

೪. ಆನೇಕೋರೆ, ಜಂತ-ಸುಟ್ಟು ಮರದರಿಷಿಣ ಪುಡಿಯನ್ನೂ ಕೂಡಿಸಿ ಆಡಿನ ಹಾಲೊಳಗೆ ಬೆರಿಸಿ ಹಚ್ಚಿದರೂ ಗುಣವಾಗುತ್ತದೆ.

೫. ಕಹಿಪಡವಲ ತೊಪ್ಪಲ ರಸವನ್ನು ಹಚ್ಚುವದರಿಂದ ತೀವ್ರವಾಗಿ ಇಂದ್ರಲುಪ್ತವು ನಾಶವಾಗುತ್ತದೆ.

---

## ಉದರ್ದ (ಗಾದಿ)

ಒಮ್ಮಿಂದೊಮ್ಮೆ ಮೈ ತಿಂಡಿಬಿಟ್ಟು ಕೆರೆದು ಕೆರೆದು ತೊಗಲು ದಪ್ಪಾದಂತೆ ಆಗುತ್ತದೆ. ಇದಕ್ಕೆ ಗಾದಿ, ಪಿತ್ತಗಾದಿ, ಗಾಜರಿ, ಹೈತಕ ಮೊದಲಾದ ಬೇರೆ ಬೇರೆ ಹೆಸರುಗಳಿರುತ್ತವೆ. ವೈದ್ಯಶಾಸ್ತ್ರದಲ್ಲಿ ಪಿತ್ತಗಾದಿಗೆ ಮೂರು ಹೆಸರುಗಳಿದ್ದು ಅವು ಬೇರೆ ಬೇರೆ ಮೋಷಕೋಪವನ್ನು ಸೂಚಿಸುತ್ತವೆ. ತಂಪುಗಾಳಿ ಬಡಿಯುವದರಿಂದ ಎದ್ದ ಗಾದಿಗಳಿಗೆ

---

೨. ಕರಂಜಶ್ಚಿತ್ರಕೋ ಜಾಜೀ । ಕರವೀರಶ್ಚ ಪಾಚಿತಮ್ ॥
ತೈಲಮೇಭಿರ್ಘೃತಂ ಹನ್ಯಾ- । ದಭ್ಯಂಗಾದಿಂದ್ರಲುಪ್ತಕಮ್ ॥ —ಶಾರ್ಙ್ಗಧರ

೩. ಇಂದ್ರಲುಪ್ತಾಪಹೋ ಲೇಪೋ ಮಧುನಾ ಬೃಹತೀರಸಃ ॥
ಗುಂಜಾಮೂಲಂ ಫಲಂ ವಾಽಪಿ ಭಲ್ಲಾತಕರಸೋಽಪಿ ವಾ ॥
ಲೇಪಃ ಸ ನವನೀತೋ ವಾ ಶ್ವೇತಾಶ್ವಖುರಜಾಮಷಿ ॥ —ನಿಘಂಟು ರತ್ನಾಕರ

೪. ಹಸ್ತಿದಂತಮಷೀಂ ಕೃತ್ವಾ ಛಾಗದುಗ್ಧಂ ರಸಾಂಜನಮ್ ॥
ರೋಮಾಣ್ಯೇತೇನ ಜಾಯಂತೇ ಲೇಪಾತ್ಪಾಣಿತಲೇಷ್ವಪಿ ॥ —ನಿಘಂಟು ರತ್ನಾಕರ

೫. ತಿಕ್ತಪಟೋಲೀಪತ್ರಸ್ಯ ರಸೈರ್ಘೃಷ್ಟ್ವಾ ಶಮಂ ಯಾತಿ ॥
ಚಿರಕಾಲಜಾಪಿ ನಿರುಜನ್ನಿಯತಂ ದಿವಸತ್ರಯೇಣೈವ ॥ —ನಿಘಂಟು ರತ್ನಾಕರ

ಶೀತಪಿತ್ತ ಎಂತಲೂ ಕಫದಿಂದ ಆದ ಗಾದಿಗಳಿಗೆ ಉದರ್ದವೆಂತಲೂ ವಾಂತಿಯು ಚನ್ನಾಗಿ ಆಗದ್ದರಿಂದ ದೋಷ ಉಳಿದು ಏಳುವ ಗಾದಿಗಳಿಗೆ ಕೋಠ ಎಂತಲೂ ಅನ್ನುವದುಂಟು. ಶೀತಪಿತ್ತವು ತೊಗಲು ಒರೆದಿರುತ್ತದೆ. ಉದರ್ದವು ನಡುವೆ ತಗ್ಗಾಗಿ ದಂಡೆ ಎತ್ತರಾಗಿರುತ್ತದೆ. ಕೋಠವು ಕೆಂಪಗಾಗಿ ಸರ್ವಾಂಗವನ್ನು ವ್ಯಾಪಿಸಿರುತ್ತದೆ.

ಉಪಾಯ : ೧. ಅಮೃತಬಳ್ಳಿ, ಅರಿಶಿಣ, ಬೇವು, ನೆಲಿಂಗಳು ಇವುಗಳೊಳಗಿನ ಯಾವದೇ ಒಂದು ಜೀನಸಿನ ಕಷಾಯವನ್ನು ಮಾಡಿ ಕುಡಿಸಿದರೆ ಶೀತಪಿತ್ತವು ಶಾಂತವಾಗುತ್ತದೆ.

೨. ಜ್ಯೇಷ್ಠಮಧು, ಇಪ್ಪೀಹೂವು, ರಾಶ್ಮಿ, ಗಂಧ, ಕೆಂಪುಚಂದನ, ಲಕ್ಕಿ, ಸಣ್ಣ ಹಿಪ್ಪಲಿ ಇವುಗಳ ಕಷಾಯವು ಶೀತಪಿತ್ತನಾಶಕವು.

೩. ಮೈಗೆ ಸಾಸುವೆಯ ಎಣ್ಣೆಯನ್ನು ಹಚ್ಚಿ ತಿಕ್ಕಿ ಬೀಸಿನೀರಿನಿಂದ ಸ್ನಾನಕ್ಕೆ ಹಾಕಬೇಕು. ಬಳಿಕ ಅಡಸಾಲ, ಬೇವು, ಕಹಿಪಡುವಲ ಇವುಗಳ ಕಷಾಯವನ್ನು ಕೊಟ್ಟು ವಾಂತಿ ಮಾಡಿಸಬೇಕು.

೪. ಅಳ್ಳೀಕಾಯಿ, ನೆಲ್ಲೀಕಾಯಿ, ತಾರೇಕಾಯಿ, ಹಿಪ್ಪಲಿ (ಕೆಲವರು ಶುದ್ಧ ಗುಗ್ಗುಳವನ್ನು ಹಾಕುತ್ತಾರೆ. ಬಿಟ್ಟರೂ ಸಾಗುವದು.) ಇವುಗಳ ಕಷಾಯವನ್ನು ಕೊಟ್ಟು ಜುಲಾಬು ಮಾಡಿಸಬೇಕು. ಮಹಾತಿಕ್ತಘೃತವನ್ನು ಕುಡಿಸಬೇಕು. ದೋಷವು ಬಹಳ ಕಂಡರೆ ವಮನ ವಿರೇಚನದ ಔಷಧವನ್ನು ಕೊಡಬೇಕು. ಇಲ್ಲದಿದ್ದರೆ, ಅಭ್ಯಂಗ ಸ್ನಾನಗಳಿಂದೇ ಕಡಿಮೆಯಾಗುತ್ತದೆ.

೫. ಸೈಂಧವಲವಣದ ಪುಡಿಯನ್ನು ಹಾಕಿ ತುಪ್ಪವನ್ನು ಬಿಸಿ ಮಾಡಿ ಮೈಗೆ ಹಚ್ಚಿ ತಿಕ್ಕಬೇಕು. ತುಳಸೀ ರಸವನ್ನು ಮಯ್ಯೊಳಗೆ ಇಂಗಿಸಬೇಕು.

ಜಡಾನ್ನವನ್ನೂ ಹುಳಿಯನ್ನೂ ಬಿಸಿಲೊಳಗೆ ತಿರುಗಾಡುವದನ್ನೂ ಬಿಡಬೇಕು.

---

೧. ಅಮೃತಾ ರಜನೀ ನಿಂಬ ಧನ್ವಯಾಸ್ಯೈಃ ಪೃಥಕ್ ಶ್ರೃತಮ್ ॥
ಪ್ರಾಣಿನಾಂ ಪ್ರಾಣದಂ ಚೈತಚ್ಛೀತಪಿತ್ತೇ ಸಮಾಚರೇತ್ ॥ —ನಿಘಂಟು ರತ್ನಾಕರ

೨. ಯಷ್ಟೀಮಧುಕಪುಷ್ಪಂ ಚ ರಾಸ್ನಾಂ ಚ ಚಂದನದ್ವಯಮ್ ॥
ನಿರ್ಗುಂಜೀ ಸಕಣಾಕ್ವಾಥಂ ಶೀತಪಿತ್ತಹರಂ ಪಿಬೇತ್ ॥ —ನಿಘಂಟು ರತ್ನಾಕರ

೩. ಅಭ್ಯಂಗಃ ಕಟುತೈಲೇನ ಸ್ವೇದಃ ಶ್ಕೋಷ್ಣೇನ ವಾರಿಣಾ ॥
ತಥಾಶು ವಮನಂ ಕಾರ್ಯಂ ಪಟೋಲಾರಿಷ್ಟವಾಸಕೈಃ ॥

೪. ತ್ರಿಫಲಾಪುರಕೃಷ್ಣಾಭಿ. । ವಿರೇಕಶ್ಚ ಪ್ರಶಸ್ಯತೇ ॥
ಸರ್ಪಿಃ ಪೀತ್ವಾ ಮಹಾತಿಕ್ತಮ್ ।

೫. ಸಸೈಂಧವೇನ ಕೋಷ್ಣೇನ ಸರ್ಪಿಷಾ ಲೇಪಮಾಚರೇತ್ ॥
ಸುರಸಾ ಸ್ವರಸೈರ್ವಾಪಿ ಲೇಪನಂ ಪರಮೌಷಧಮ್ ॥ —ನಿಘಂಟು ರತ್ನಾಕರ

# ಉಪದಂಶ

## (ಉಷ್ಣದ ಹುಣ್ಣು)

ದುಷ್ಟ ಸ್ತ್ರೀಯರ ಸಂಗದಿಂದ ಪುರುಷರಿಗೂ, ದುಷ್ಟ ಪುರುಷರ ಸಹವಾಸದಿಂದ ಹೆಂಗಸರಿಗೂ ಈ ರೋಗವು ಮುಖ್ಯವಾಗಿ ಹುಟ್ಟುವದು. ಹಲ್ಲು, ಉಗುರು, ಕೂದಲು ನಡುವದರಿಂದ ಜನನೇಂದ್ರಿಯಗಳ ಮೇಲೆ ಸಣ್ಣ ಸಣ್ಣ ದುಂಡನ್ನ ಗಾಯಗಳು ಬೀಳುತ್ತವೆ. ಕಡೆಗಾದ (ರಜಸ್ವಲಾ) ಹೆಂಗಸರ ಸಹವಾಸದಿಂದೂ ಈ ರೋಗವು ಜನಿಸುವದು; ತಿಳಿಯದವರು ತಮಗೆ ಮಿತಿಮೀರಿ ಪುಷ್ಟಿಯಾಗಬೇಕೆಂದು, ಆವದಾದರೂ ಪುಸ್ತಕದಲ್ಲಿ ಬರೆದ ವಾಜೀಕರಣ (ಅತಿಪೌಷ್ಟಿಕ) ಔಷಧವನ್ನು ತಾವೇ ತೆಗೆದುಕೊಳ್ಳುವದರಿಂದಲೂ ಲಿಂಗದ ಬೆಳವಣಿಗೆಯ ಔಷಧಗಳನ್ನು ಹಚ್ಚಿಕೊಳ್ಳುವದರಿಂದಲೂ ಉಪದಂಶಗಳು ಹುಟ್ಟುವವು. ಇದರಿಂದ ಉಡುಚುಗಳೂ, ಕುರಗಳೂ ಆಗುವದುಂಟು.

ಈ ರೋಗವು ಬಹಳ ಸಾಂಸರ್ಗಿಕವಿದೆ. ಉಷ್ಣರೋಗಿಯ ಅರಿವೆಅಂಚಡೆ, ಜೋಡು, ತಾಟು, ತಾಲಿ ಮುಂತಾದವುಗಳನ್ನು ಉಪಯೋಗಿಸುವದರಿಂದಲೂ ಹುಣ್ಣಿನವರು ಕೂಸುಗಳಿಗೆ ತಂಬಲ ತಿನಿಸುವದರಿಂದಲೂ ಮುದ್ದು ಕೊಡುವದರಿಂದಲೂ ತಾಯಿತಂದೆಗಳಿಗೆ ಉಷ್ಣರೋಗವಿರುವದರಿಂದಲೂ ಹಸುಗೂಸುಗಳಿಗೆ ಸಹ ಉಪದಂಶ ರೋಗವು ಹುಟ್ಟುತ್ತದೆ. ಒಮ್ಮೊಮ್ಮೆ ಈ ರೋಗಿಗಳನ್ನು ಉಪಚರಿಸುವ ವೈದ್ಯರಿಗೂ ಈ ರೋಗವು ಅಂಟಿಕೊಳ್ಳುವದೆಂದು ಅನುಭವದಿಂದ ಗೊತ್ತಾಗಿದೆ.

ಈ ರೋಗಕ್ಕೆ ಸೂಕ್ಷ್ಮವಾದ ಜಂತುಗಳೇ ಕಾರಣವಾಗುವದೆಂದು ಪಾಶ್ಚಾತ್ಯ ಗ್ರಂಥಕಾರರು ಕಂಡು ಹಿಡಿದಿದ್ದಾರೆ. ಅವು ನೂಲಿನಂತೆ ಸಣ್ಣಾಗಿಯೂ ತಿರುಪುಳ್ಳವಾಗಿಯೂ ಇರುತ್ತವಂತೆ. ಕೀವುರಸಿಕೆ ಮುಂತಾದವುಗಳ ದ್ವಾರಾ ಈ ಜಂತುಗಳು ದೇಹದಲ್ಲಿ ಹೋಗುತ್ತವೆ. ಕೂಡಲೆ ತಮ್ಮ ಪ್ರಭಾವದಿಂದ ದುಂಡನ್ನ ಗಾಯಗಳನ್ನೂ ಗಾದಿಗಳನ್ನೂ ಎಬ್ಬಿಸುತ್ತವೆ. ಈ ರೋಗದ ಗಾಯುಗಳಿಗೂ ಬೇರೆ ಗಾಯುಗಳಿಗೂ ಹೆಚ್ಚುಕಡಿಮೆ ಏನೆಂದರೆ— ಉಪದಂಶದ ಗಾಯಕ್ಕೆ ತಿಂಡಿ ಎಳ್ಳಷ್ಟಾದರೂ ಇರುವದಿಲ್ಲ. ಇವು ಮಾಯ್ದ ಸ್ಥಳದಲ್ಲಿ ಗಟ್ಟಿಯಾದ ಕಪ್ಪು ದಡ್ಡುಗಳೂ ಬೀಳುವದುಂಟು. ಇವು ಕೇವಲ ಜನನೇಂದ್ರಿಯಗಳ ಮೇಲೇ ಆಗುತ್ತವಂತಲ್ಲ, ಸರ್ವಾಂಗಕ್ಕೂ ಆಗುತ್ತವೆ. ಈ ರೋಗಿಗಳ ಮಕ್ಕಳ ಮೂಗು ಕೂತಂತಾಗಿ ವಿಕೃತ ಕಾಣಿಸುತ್ತಿರುತ್ತದೆ. ಮುಂದಿನ ಹಲ್ಲುಗಳು ಸರಿಯಾಗಿ ಬಹಿರ್ಗೋಲವಾಗಿರದೆ, ಕಮಾನದಂತಾಗಿ ಕುಸುರುಕುಸುರಾಗಿ ವಿರೂಪ ಕಾಣಿಸುತ್ತವೆ. ಹುಟ್ಟಿದ ಕೂಸುಗಳ ಮೈಮೇಲೂ ಉಪದಂಶ ವ್ರಣಗಳಿರುತ್ತವೆ. ಒಮ್ಮೊಮ್ಮೆ ಮೃತಗರ್ಭವೂ ಜನಿಸುವದು!

ಇದರಲ್ಲಿ ಫಿರಂಗೋಪದಂಶವೆಂದು ಇನ್ನೊಂದು ಪ್ರಕಾರವದೆ. ಅದು ಫಿರಂಗೀ ಜನರು ಈ ದೇಶಕ್ಕೆ ಬಂದಬಳಿಕ ಅವರ ಸಂಸರ್ಗದಿಂದ ಹುಟ್ಟಿರುವದು. ಈ ರೋಗದ ವರ್ಣನೆಯು ಪ್ರಾಚೀನ ಗ್ರಂಥಗಳಲ್ಲಿರುವ ಸಂಭವವೇ ಇಲ್ಲ. ಇತ್ತಕಡಿಗೆ ರಚಿಸಲ್ಪಟ್ಟ

ಭಾವಪ್ರಕಾಶವೆಂಬ ಗ್ರಂಥದಲ್ಲಿ ಮಾತ್ರ ಇದರ ಉಲ್ಲೇಖವಿದೆ. ಇದು ಬಹಳ ಭಯಂಕರವಾಗಿದ್ದು ತುಸು ಬೇರುವರೆಯಿತೆಂದರೆ ಇಸಬಿನಂತೆ ಮೈತುಂಬ ಹಬ್ಬಿ ಅಸಾಧ್ಯವಾಗುತ್ತದೆ.

ಉಪದಂಶಕ್ಕೆ ಗರಮೀಚಟ್ಟಿಯೆಂದೂ ಈ ಪ್ರಾಂತದಲ್ಲಿ ವಾಡಿಕೆಯ ಹೆಸರುಂಟು. ಈ ರೋಗದಿಂದ ಪೀಡಿತರಾದ ಜನರು ದುರ್ಬಲರೂ, ಕುರೂಪಿಗಳೂ, ಸ್ತ್ರೀವ್ಯಾರಿಗಳೂ ಆಗುತ್ತಾರೆ; ಹೆಚ್ಚಿಗೆ ಹೇಳುವದೇನು ಅವರು ಇಡೀ ಸಂತತಿಯೇ ಕೆಟ್ಟು. ಇಂಥವರ ಹೆಂಡರು-ಮಕ್ಕಳೂ ಕೂಡ ನಿಸ್ಸತ್ವರಾಗುತ್ತಾರೆ. ಪ್ರಾಯದ ಅವಿವೇಕಿಗಳಾದ ಬಹಳ ಜನ ತರುಣ-ತರುಣಿಯರು ಇದನ್ನರಿಯದೆ ಮೋಸಹೋಗಿ ಗಾಣಕ್ಕೆ ಸಿಕ್ಕ ಮೀನಿನಂತೆ ಒದ್ದಾಡುವದನ್ನು ನೋಡಿ ಮಿಡುಕದವರು ವಿರಳ. ಇದೊಂದು ರಾಷ್ಟ್ರೀಯ ಆಪತ್ತೇ ಎಂದು ನಿರ್ವಿವಾದವಾಗಿ ಹೇಳಬಹುದು.

**ಉಪಚಾರವು :** ಉಪದಂಶರೋಗವು ತಮಗೆ ಅಂಟಿಕೊಂಡಿತೆಂದು ತಿಳಿದ ಕೂಡಲೆ ಅದರ ಕಾರಣಗಳನ್ನು ಮೊದಲು ನಿಲ್ಲಿಸಿಬಿಡಬೇಕು. ಶಹರದಲ್ಲಿರುವ ಯೋಗ್ಯತಾವಂತರು ಒಳ್ಳೇ ಡಾಕ್ಟರರಿಗೆ ಅಥವಾ ಉತ್ತಮ ವೈದ್ಯರಿಗೆ ಭೆಟ್ಟಿಯಾಗಿ ರೋಗವು ನಿರ್ಮೂಲವಾಗುವ ವರೆಗೆ ಔಷಧ ಸೇವನೆ ಮಾಡಬೇಕು. ಡಾಕ್ಟರರಿಂದ ದೂರಿದ್ದವರೂ ಬಡವರೂ ಪಥ್ಯದಿಂದಿದ್ದು ಕೆಳಗೆ ಬರೆದ ಔಷಧಗಳನ್ನು ಸೇವಿಸಬೇಕು. ಮೂಢರಾದ ಮನೆಮಾರಿ ಹೊಟ್ಟೆಹೊರಕ ಜನರ ಕಡೆಯಿಂದ ಎಂದೂ ಔಷಧವನ್ನು ತೆಗೆದುಕೊಳ್ಳಬಾರದು. ಅವರು ಐದು ಬಿಲ್ಲೆ, ಇಪ್ಪತ್ತೈದು ಎಳೆಹಣ ತಕ್ಕೊಂಡು ಎಲಿಯಲ್ಲೋ ಮತ್ತಾತರಲ್ಲೋ ಮಡಚಿ ಇಲ್ಲವೆ ಅರೆದು ಹಲ್ಲಿಗೆ ಹತ್ತದಂತೆ ನುಂಗಿರಿ; ಬಾಯಿಬಂದರೆ ಯೋಚನೆ ಬೇಡ, ಮುಂದೆ ತಾನೇ ನೆಟ್ಟಗಾಗುತ್ತದೆ; ಎಂದು ಹೇಳುವ ಔಷಧವು ಅಶುದ್ಧ ರಸಕರ್ಪೂರ ಇಲ್ಲವೆ ಪಾದರಸವಿರುತ್ತದೆ. ಇದರಿಂದ ಬಹಳ ಅನರ್ಥಗಳುಂಟಾಗುತ್ತವೆ. ಈ ಅಶುದ್ಧ ರಸಾಯನವು ಮೈಮೇಲೆ ಒಡೆದು ತೊನ್ನಿನಂತೆಯೂ ಜನ್ಮೋತ್ಮ ಭಂಗಿನಂತೆಯೂ ಆಗುತ್ತದೆ, ಕೂದಲೂ ಹಲ್ಲುಗಳೂ ಉದುರುತ್ತವೆ. ಹೀಗೆ ಅಲ್ಲದ ಔಷಧ ತೆಗೆದುಕೊಂಡು ಅಕಾಲದಲ್ಲೇ ಮರಣವನ್ನಯ್ದಿದ ಜನರನ್ನೂ ನಮ್ಮಂತೆ ಬಹುಜನರು ಕಂಡಿರಬಹುದು. ಈ ತಪ್ಪನ್ನು ಆ ಮೂಢ ವೈದ್ಯರು ತಮ್ಮ ಮೇಲೆ ಹಾಕಿಕೊಳ್ಳದೆ, ಅಪಥ್ಯ ಮಾಡಿದ್ದರಿಂದೇ ಹೀಗಾಯಿತು ! ನಮ್ಮ ಔಷಧವು ರಾಮಬಾಣವೇ ಎಂದು ಹೇಳುತ್ತಾರೆ.

ಉಪದಂಶರೋಗಿಗೆ ಮೊದಲು ಸೌಮ್ಯವಾದ ಜುಲಾಬಿನ ಔಷಧವನ್ನೂ ಮೂತ್ರ ಜುಲಾಬಿನ ಔಷಧವನ್ನೂ ಕೊಡಬೇಕು. ಬಳಿಕ;

೧. ಕಹಿಪಡುವಲು, ಅಳಲೇಕಾಯಿ ತಾಟ, ನೆಲ್ಲೀಕಾಯಿ ತಾಟ, ತಾರೀಕಾಯಿ ತಾಟ, ಬೇವಿನಚಕ್ಕಿ, ಚಿರಾಯಿತಕಡ್ಡಿ, ತರೇದಚಕ್ಕಿ, ಅಸಣೀಬೇರು ಇವುಗಳ ಕಷಾಯ

---

೧. ಪಟೋಲತ್ರಿಫಲಾನಿಂಬ ಕಿರಾತಖದಿರಾಸನೈಃ ।
ಕ್ವಾಥಃ ಪೀತೋ ಜಯತ್ಯೇವ ಪಾನಾನುಪದಂಶಾನ್ಸಗುಗ್ಗುಲುಃ ॥ ಶಾರ್ಙ್ಗಧರ

ದಲ್ಲಿ ಶುದ್ಧ ಗುಗ್ಗಳ ೧ ಚವಲಿಯ ತೂಕ ಹಾಕಿ ಕುಡಿಸಬೇಕು. ಇದರಿಂದ ಪಿತ್ತವೆನಿಸಿದರೆ ನಡುನಡುವೆ ನಾಲ್ಕುದಿನ ಬಿಟ್ಟು ಕಷಾಯವನ್ನು ತೆಗೆದುಕೊಳ್ಳಬೇಕು.

೨. ಮಾವಿನ ಒಳದೋಟೆಯನ್ನು ಕುಟ್ಟಿ ಒದ್ದೆರವಿಯೊಳಗೆ ಹಾಕಿ ಹಿಂಡಿ ರಸವನ್ನು ತೆಗೆದು ಶಕ್ತಿಯನ್ನು ನೋಡಿ, ೪ ತೊಲಿ ರಸವನ್ನೂ ೧೬ ತೊಲಿ ಆಡಿನ ತಾಜಾ ಹಾಲನ್ನೂ ಕೂಡಿಸಿ, ಮುಂಜಾನೆ ಕುಡಿಯಬೇಕು. ಹೀಗೆ ೭ ದಿವಸ ತೆಗೆದುಕೊಳ್ಳಬೇಕು. ಇದರಿಂದ ಮೈಯೊಳಗಿನ ಕಾವು ಹೋಗಿ ಹುಣ್ಣುಗಳೂ ಮಾಯುವವು. ಹಳೇ ಗೋಧಿಯ ಸಜ್ಜಿಗೆ, ರೊಟ್ಟಿ, ಹಾಲು ಮಾತ್ರ ಸೇವಿಸುತ್ತಿರಬೇಕು.

೩. ಜಾಜೀಮುಗುಳು (ಎಳೆಯಲಿ)ಗಳನ್ನರೆದು ೨ ತೊಲಿ ರಸ ತೆಗೆದು ಅದರಲ್ಲಿ ಅಷ್ಟೇ ಆಕಳ ತುಪ್ಪವನ್ನೂ ೬ ಗುಂಜಿ ರಾಳದ ಪುಡಿಯನ್ನೂ ಹಾಕಿ, ೭ ದಿವಸ ಮುಂಜಾನೆ ತೆಗೆದುಕೊಳ್ಳಬೇಕು. ಇದರಿಂದ ಎಲ್ಲ ಬಗೆಯ ಉಪದಂಶಗಳೂ ಹೋಗುವವು. ಸಪ್ಪಗಿನ ಗೋಧೀ ಆಹಾರವೂ ತುಪ್ಪವೂ ಪಥ್ಯ. ಮಿಕ್ಕದ್ದು ವರ್ಜ್ಯ.

೪. * ಮರಿಗಣಿಗಲಬೇರನ್ನು ನೀರಿನಲ್ಲಿ ತೆಯ್ದು ಹಚ್ಚಿದರೆ ಜನನೇಂದ್ರಿಯದ ಮೇಲಿನ ಹುಣ್ಣುಗಳು ತೀವ್ರವಾಗಿ ಮಾಯುವವು.

೫. ಅಳ್ಳೀಕಾಯಿ, ನೆಲ್ಲೀಕಾಯಿ, ತಾರೀಕಾಯಿಗಳನ್ನು ಹಂಚಿನಲ್ಲಿ ಹೊತ್ತಿ ಕರಕಾಗುವಂತೆ ಹುರಿದು ಪುಡಿ ಮಾಡಿ ಸೋಸಿ, ಜೇನುತುಪ್ಪದಲ್ಲಿ ಕಲಿಸಿ ಹಚ್ಚಿದರೆ ಬೇಗನೆ ಹುಣ್ಣುಗಳು ತುಂಬಿಬರುವವು.

೬. ರಸಾಂಜನ, ಶಿರಸಲಬೀಜ, ಅಳಲೀಕಾಯಿ ಇವುಗಳ ಸೂಕ್ಷ್ಮ ಚೂರ್ಣವನ್ನು ಜೇನುತುಪ್ಪದಲ್ಲಿ ಕಲಿಸಿ ಹಚ್ಚುತ್ತಹೋದರೆ, ಉಪದಂಶವೂ ಅದರಿಂದುಂಟಾದ ಮಿಕ್ಕ ಗಾಯಗಳೂ ಹೋಗುತ್ತವೆ.

---

೨. ಆಮ್ರತ್ವಚಂ ವಿನಿಷ್ಪೀಡ್ಯ ನಿಗೃಹ್ಯ ಸ್ವರಸಂ ಪಲಮ್ ।
ಜತುಷ್ಪಲಂ ತ್ವಜಾಕ್ಷೀರಂ ಸಂಯುಕ್ತಂ ಪ್ರಪಿಬೇತ್ಪ್ರಗೇ ॥
ಏವಂ ಮುನಿದಿನಂ ಕುರ್ಯಾದುಪದಂಶೇ ವ್ರಣೇ ಹಿತಮ್ ।
ತಥಾ ಕ್ಷೀರಂ ತಥಾ ಜೀರ್ಣಂ ಗೋಧೂಮಂ ಪಥ್ಯಮಾಚರೇತ್ ॥ — ಯೋಗರತ್ನಾಕರ

೩. ಜಾತೀಪ್ರವಾಲಸ್ವರಸಂಪಲಾರ್ಧಂ ಧೇನೋರ್ಘೃತಂ ಸರ್ಜರಸೇನಯುಕ್ತಮ್ ।
ಪಿಬೇತ್ಪ್ರಗೇ ಪಂಚವಿಧೋಪದಂಶೇ ಕ್ಷಾರಾದ್ತೇ ಗೋಧೂಮಸರ್ಪಿಶ್ಚಪಥ್ಯಮ್ ॥
— ಯೋಗರತ್ನಾಕರ

* ಕರವೀರಸ್ಯ ಮೂಲೇನ ಪರಿಪಿಷ್ಟೇನವಾರಿಣಾ ।
ಅಸಾಧ್ಯಾಪಿಜರತ್ಯಾಶುಲಿಂಗೋತ್ಥಾರುಕ್ಪ್ರಲೇಪನಾತ್ ॥
ದೇಹೇತ್ಕಟಾಹೇತ್ರಿಫಲಾಂ ಸಾಮಷೀಮಧುಸಂಯುತಾ ।
ಉಪದಂಶೇ ಪ್ರಲೇಪೋಽಯಂ ಸದ್ಯೋರೋಪಯತಿವ್ರಣಮ್ ॥
ರಸಾಂಜನಂ ಶಿರೀಷೇಣಪಥ್ಯಯಾಚ ಸಮನ್ವಿತಮ್ ।
ಸಕ್ಷೌಂದ್ರಲೇಪನಂಯೋಜ್ಯಮುಹದಂಶಗದಾಪಹಮ್ ॥ — ಶಾರ್ಙ್ಗಧರ

೭. ಅಳ್ಳಿ, ಅತ್ತಿ, ಬಸರಿ, ಆಲ, ಬೆತ್ತ ಇವುಗಳ ಕಷಾಯ ಇಲ್ಲವೆ ಗಾಂಜಿ, ಜಾಜೀತೊಪ್ಪಲ, ಮರಗಣಿಗಲತೊಪ್ಪಲ, ಯಕ್ಕೀತೊಪ್ಪಲ, ಕಕ್ಕಿತೊಪ್ಪಲ ಇವು ಗಳೊಳಗಿನ ಯಾವದಾದರೊಂದರ ಕಷಾಯ ಅಥವಾ ತ್ರಿಫಲಾ ಕಷಾಯ ಇವುಗಳಿಂದ ಜನನೇಂದ್ರಿಯದ ಮೇಲಿನ ಹುಣ್ಣುಗಳನ್ನು ತೊಳೆದು ಬಳಿಕ ಔಷಧ ಹಚ್ಚಿದರೆ ಬೇಗನೆ ಗುಣ ಬರುವದು.

೮. ನೆಲಬೇವು, ಬೇವು, ತ್ರಿಫಲಾ, ಕಹಿಪಡವಲ, ಹಾಲಗಲಬೇರು, ಜಾಜೀ ಸೊಪ್ಪು, ಅನಣೀಬೇರು, ತರೇದಚಕ್ಕಿ ಇವುಗಳ ಕಷಾಯವನ್ನೂ ಕಲ್ಕವನ್ನೂ ಹಾಕಿ ಸಿದ್ಧಮಾಡಿದ ತುಪ್ಪವನ್ನು ದಿನಾಲು ಹಚ್ಚಿದರೆ ಉಪದಂಶದ ವ್ರಣಗಳು ಮಾಯುವವು.

೯. ಉಡಚಿಗೆ — ಜಿಗಳೀ ಹಚ್ಚಿ ರಕ್ತ ತೆಗೆಯಬೇಕು. ಅತ್ತೀ ಹಾಲಿನಲ್ಲಿ ಲೋಬಾನದ ಅಂಟನ್ನೂ ಗೋಡಂಬಿಯನ್ನೂ ತೆಯ್ದು ಹಚ್ಚಿದರೆ ಉಡಚು ಅಲ್ಲೇ ಕೂತುಬಿಡುತ್ತದೆ. ಹುಣ್ಣಾಗಿ ಸೋರುತ್ತಿದ್ದರೆ; ಮುಡದಾರಶಿಂಗೀ, ಕಂಬೀಚಂದ್ರ, ಬೆಲ್ಲ, ಕೋಳಿತತ್ತಿಯೊಳಗಿನ ರಸ ಸಮಭಾಗ ಹಾಕಿ ಮಲಮು ಮಾಡಿ ಹಚ್ಚಬೇಕು. ಅಥವಾ ಯಕ್ಕಿ ಬೇರು ನೀರಲ್ಲಿ ತೆಯ್ದು ಹಚ್ಚಬೇಕು.

೧೦. ತೂರೆಮುದ್ದಿನ ಬೇರು ½ ತೊಲಿ, ಜ್ಯೇಷ್ಠಮಧು ½ ತೊಲಿ, ಅಮರಬಳ್ಳಿ ½ ತೊಲಿ, ಸೋನಾಮುಖಿ ½ ತೊಲಿ, ೧ ಸೇರು ನೀರಲ್ಲಿ ½ ಕಷಾಯ ಮಾಡಿ ದಿನಾಲು ಸೇವಿಸುತ್ತಿದ್ದರೆ ಮೈಯೊಳಗೆ ಸೇರಿದ ಕಾವು ಕಡಿಮೆಯಾಗಿ ಚಟ್ಟಿಗಳೂ ಮಾಯುತ್ತವೆ. ಜುಲಾಬು ಆಗಹತ್ತಿದರೆ ಸೋನಾಮುಖಿಯನ್ನು ಬಿಡಬೇಕು. ಮಲಶುದ್ಧಿಯಾಗದಿದ್ದರೆ ಹಾಕುತ್ತ ಹೋಗಬೇಕು. ಈ ಕಷಾಯವನ್ನು ೪೦ ದಿವಸದ ವರೆಗೆ ತೆಗೆದುಕೊಂಡರೂ ಒಳ್ಳೆಯದೇ; ಗುಣವಾದರೆ ನಡುವೇ ಬಿಟ್ಟರೂ ಚಿಂತೆಯಿಲ್ಲ.

ಆರ್ಯವೈದ್ಯರು ಈ ರೋಗಕ್ಕೆ ಪಾದರಸ, ಇಂಗಳೀಕ, ರಸಕಪ್ಪುರಗಳೇ ಒಳ್ಳೇ ಮದ್ದು, ಎಂದು ಬರೆದಿರುವರು. ಆಂಗ್ಲ ವೈದ್ಯಶಾಸ್ತ್ರಜ್ಞರೂ ಇವುಗಳನ್ನೇ ಪ್ರಧಾನ ವಾಗಿಟ್ಟುಕೊಂಡಿರುವರು. ಇದರಿಂದ ನಮ್ಮ ಪ್ರಾಚೀನ ವೈದ್ಯರ ಶೋಧವು ಅಪೂರ್ವ ವೆಂಬದು ಕಂಡುಬರುತ್ತದೆ. ಆದರೆ ರಸಾಯನವನ್ನು ಅತೀವ ಶುದ್ಧ ಮಾಡುವ ಕೆಲಸವು ಬಹು ಬಿರಿಯಾದ್ದರಿಂದ, ಸೂಜ್ಞ ವೈದ್ಯರ ಇಲ್ಲವೆ ಡಾಕ್ಟರರ ಅನುಮತಿಯಿಂದ ರಸಾ ಯನ ಮಿಶ್ರ ಔಷಧಗಳನ್ನು ತೆಗೆದುಕೊಳ್ಳಬೇಕೆಂದು ಮತ್ತೊಮ್ಮೆ ಸೂಚಿಸಿರುತ್ತೇವೆ.

ಹುಟ್ಟಾ ಹುಣ್ಣುಗಳಿದ್ದ ಕೂಸುಗಳಿಗೆ ಎರೆಯುವಾಗ ನಗರೀ ತೊಪ್ಪಲ ಅರೆದು ಎಣ್ಣೆಯಲ್ಲಿ ಹಾಕಿಯಾಗಲೀ, ಬೇವಿನ ಎಣ್ಣೆ ಹಚ್ಚಿಯಾಗಲೀ, ಎರೆಯುವ ಸಾಂಪ್ರ ದಾಯವುಂಟು. ತಾಯಂದಿರಿಗೆ ಉಷ್ಣವಿಕಾರವಿದ್ದರೆ, ನಿರೋಗಿಯಾದ ದಾದಿಯ ಹಾಲ ನ್ನಾಗಲಿ ಆವಿನ ಇಲ್ಲವೆ ಆಡಿನ ಹಾಲನ್ನಾಗಲಿ ಕುಡಿಸಿ ಜೋಕೆ ಮಾಡಬೇಕು.

**ಪಥ್ಯ :** ನಾಂತ ಜುಲಾಬಾಗುವ ಔಷಧಗಳು, ಹಳೆಬತ್ತದ ಅಕ್ಕಿ, ಹೆಸರುಬೇಳೆ, ತೊಗರಿಬೇಳೆ, ಜವೆಗೋದಿ, ಗೋದಿ, ತುಪ್ಪ, ಸಕ್ಕರಿ, ಆಡಿನ ಹಾಲು, ಹೀರಿಕಾಯಿ,

ಹಾಗಲಕಾಯಿ, ನುಗ್ಗೀಕಾಯಿ, ಪಡುವಲಕಾಯಿ, ಎಳೆಮೂಲಂಗಿ, ಕಾದಾರಿದ ನೀರು ಇವೆಲ್ಲ ಹಿತಕಾರಕವಾಗುತ್ತವೆ.

**ಅಪಥ್ಯ :** ಹಗಲು ಮಲಗುವದು, ರಾತ್ರಿ ನಿದ್ದೀತರುಬುವದು, ಮಲಮೂತ್ರ ವೇಗಧಾರಣ (ಆದಾಗ ಹೋಗದಿರುವುದು,) ಅತಿವ್ಯಾಯಾಮ, ಸ್ತ್ರೀಸಹವಾಸ, ಮಜ್ಜಿಗೆ ಮೊದಲಾದ ಹುಳಿ, ಬೆಲ್ಲ, ಸಜ್ಜಿ, ಹುರುಳಿ, ಇಂಗು, ಸಾಸಿವೆ, ಬದನೇಕಾಯಿ, ಚವಳೀಕಾಯಿ, ಕುಂಬಳಕಾಯಿ, ಅವರಿ, ಬಾಳೀಹಣ್ಣು ಮೊದಲಾದವು ಬಾಧಕವಾಗುತ್ತವೆ.

---

# ಉನ್ಮಾದ

## (ಹುಚ್ಚು)

ನೀತಿಮರ್ಯಾದೆಗಳನ್ನೂ ದೇವರ ಭಯವನ್ನೂ ತನ್ನ ಹಾಗು ತನ್ನವರ ಹಿತಾಹಿತಗಳನ್ನೂ ಲೆಕ್ಕಿಸದೆ ತಂತಿ ಹರಿದ ನಾವಿನಂತೆ ಮನಬಂದತ್ತ ಓಡಾಡುವ ಗುಣಕ್ಕೆ ವಾಡಿಕೆಯಾಗಿ ಹುಚ್ಚೆಂದೂ ಉನ್ಮಾದವೆಂದೂ ಅನ್ನುವದುಂಟು. ಈ ಉನ್ಮಾದವು ಒಂದೊಂದೇ ವಿಷಯದೊಳಗೂ ಸಕಲ ವಿಷಯಗಳೊಳಗೂ ಕಂಡುಬರುತ್ತಿರುತ್ತದೆ. ಹುಚ್ಚು ಪೂರ್ವರೂಪದಲ್ಲಿ ಸೊಕ್ಕೆಂದೂ ಮನಸ್ವಿತನವೆಂದೂ ಎಣಿಸಲ್ಪಡುತ್ತದೆ. ಬಲಿತ ಹಾಗೆ ಅದರ ತೀವ್ರತರ ಸ್ವರೂಪವು ತೋರಹತ್ತಿ ಮನುಷ್ಯನು ಅವ್ಯವಹಾರೋಪಯೋಗಿಯಾಗುವನು.

ತಾಮಸವಾದ ಆಹಾರವಿಹಾರಗಳೂ ಗುರುಹಿರಿಯರ ದ್ರೋಹವೂ ಮಾದಕ ಹಾಗು ವಿಷಯುಕ್ತಪದಾರ್ಥಮಿಶ್ರವಾದ ಅನ್ನ ಸೇವನವೂ ಮದ್ಯಪಾನವೂ ಬಲಿಷ್ಠರ ಗೂಡ ವಿರೋಧವೂ ಅತಿ ದುಃಖವೂ ಅತಿಶಯ ಭಯವೂ ಮಿತಿಮೀರಿದ ಆನಂದವೂ ಅತಿ ಚಿಂತೆಯೂ ಪ್ರೀತಿಯ ಜನರ ಆಕಸ್ಮಿಕ ಮರಣವೂ ಅಯ್ಯೋಗವಾದ ಧಾತುಪಾತವೂ ದುರ್ಬಲರಾದ ಜನರ ಮಿದುಳನ್ನು ಕೆಡಿಸಿ ಉನ್ಮಾದಕ್ಕೆ ಕಾರಗಳಾಗಿರುತ್ತವೆ.

ಆರ್ಯವೈದ್ಯರು, ವಾತಾದಿ ದೋಷಗಳಿಂದಲೂ ಯಕ್ಷ, ರಾಕ್ಷಸ, ಭೂತ, ಪಿಶಾಚ ಮುಂತಾದವುಗಳಿಂದಲೂ ಉನ್ಮಾದವುಂಟಾಗುವದೆಂದೂ ಅದು ಕಾರಣದಂತೆ ವಾತೋನ್ಮಾದ, ಪಿತ್ತೋನ್ಮಾದ, ಭೂತೋನ್ಮಾದ ಮೊದಲಾದ ಹೆಸರಿನಿಂದ ಪ್ರಸಿದ್ಧವಿರುವದೆಂದೂ ಬರೆದಿರುವರು.

ಆಂಗ್ಲ ವೈದ್ಯರು ಉನ್ಮಾದದಲ್ಲಿ ನಾಲ್ಕು ಪ್ರಕಾರವನ್ನು ಹೇಳಿದ್ದಾರೆ.

೧. ರೋಗಿಯು ನಗುತ್ತಾನೆ ಅಥವಾ ಅಳುತ್ತಾನೆ; ಜನರಿಗೆ ಕಲ್ಲು ಒಗೆಯುತ್ತಾನೆ; ಕುಣಿದಾಡುತ್ತಾನೆ. ಅರಿವಿ ಹರಿಯುತ್ತಾನೆ; ಸನ್ನಿಪಾತದ ಯಾವತ್ತೂ ಕೃತಿಗಳನ್ನು ಮಾಡುತ್ತಾನೆ. ಎರಡು ಮೂರು ದಿವಸದಲ್ಲಿ ನಿದ್ದಿಹತ್ತಿ, ತುಸು ಗುಣವಾದಂತೆ ತೋರಿ, ಮತ್ತೆ ಮೊದಲಿನಂತೆಯೇ ಮಾಡತೊಡಗುತ್ತಾನೆ. ಬಾಣಂತಿಗೂ ಒಮ್ಮೊಮ್ಮೆ ಹೀಗಾಗುವದುಂಟು.

೨. ಒಂದೊಂದೇ ವಿಷಯದ ಹುಚ್ಚು ಇರುತ್ತದೆ. ಮನಸ್ಸಿನಲ್ಲಿ ಸತತದ ತರಂಗಗಳೆದ್ದು ಚಿತ್ತವು ವ್ಯಾಕುಲವಾಗಿ ಅದೇ ವಿಷಯದ ಸಂಬಂಧದಿಂದ ಬಡಬಡಿಸುತ್ತಾನೆ. ಕೆಲವರು ತಾವು ದೇವರ ಅವತಾರವೆಂದು ತಿಳಿದು ಜನರಿಗೆ ಆಶೀರ್ವಾದ ಮಾಡುತ್ತ ನಡೆಯುತ್ತಾರೆ. ಕೆಲವರು ಅರಸರಂತೆ ಹುಕುಮು ಮಾಡತೊಡಗುತ್ತಾರೆ. ಕೆಲವರು ಇಂಥವಳು ನನಗೆ ಮೋಹಿಸಿ ಮದುವೆ ಮಾಡಿಕೊಂಬುವಳೆಂದು ನಂಬುತ್ತಾರೆ. ಕೆಲವರು ಹಗ್ಗವನ್ನು ಕಂಡರೂ ನನಗೆ ಹಾವೇ ಬೆನ್ನುಹತ್ತಿರುವದೆಂದು ಅಂಜಿ ಓಡುತ್ತಾರೆ. ಇಂಥವರಿಗೆ ತಾವು ಮನಸ್ಸಿನಲ್ಲಿ ಮಾಡಿಕೊಂಡ ಸಂಗತಿಯು ಸುಳ್ಳೆಂದು ಎಷ್ಟು ಹೇಳಿದರೂ ನಿಜವಾಗಿ ಕಾಣುವದಿಲ್ಲ. ಇವರು ಮಿಕ್ಕ ವಿಷಯಗಳಲ್ಲಿ ಒಳ್ಳೇ ತಿಳುವಳಿಕೆಯಿಂದ ವ್ಯವಹಾರ ಮಾಡುತ್ತಿರುತ್ತಾರೆ. ಇವರಿಗೆ, ಒಮ್ಮೊಮ್ಮೆ ತಾವು ಮಾಡುವ ಕೆಲಸವು ಹುಚ್ಚುತನದ್ದೆಂದು ಹೊಳೆದರೂ ಮತ್ತೆ ಅದನ್ನೇ ಮಾಡಬೇಕೆಂದೆನಿಸುತ್ತದೆ.

೩. ಇದರಲ್ಲಿ ಭ್ರಾಂತಿಯು ಹೆಚ್ಚಿರುತ್ತದೆ. ಮಾನಾಪಮಾನವೂ ಸುಖದುಃಖವೂ ಎಳ್ಳಷ್ಟೂ ತಿಳಿಯುವದಿಲ್ಲ. ಹುರುಳಿಲ್ಲದ ಸಂಬಂಧವಿಲ್ಲದ ಅರ್ಥವಿಲ್ಲದ ಮಾತುಗಳನ್ನಾಡುತ್ತಾನೆ. ಒಮ್ಮೊಮ್ಮೆ ಆಡಿದ್ದು ತಿಳಿಯುವದಿಲ್ಲ. ಮುಂದಿಯ ಮಾತೂ ಅವನಿಗೆ ತಿಳಿಯುವದಿಲ್ಲ. ಸುಂದುಬಡೆದು ಕೂಡುತ್ತಾನೆ. ಕಡೆಗೆ ಬಲಗುಂದಿ ಮೂಲಿಗುಂಪಾಗುತ್ತಾನೆ.

೪. ಗಾಂಜಿ, ಅಫು, ಸಾರಾಯಿ ಮುಂತಾದ ವ್ಯಸನಗ್ರಸ್ತರ ಉಪದಂಶ, ಕ್ಷಯ, ಅಪಸ್ಮಾರ, ರೋಗವುಳ್ಳವರ ಮಕ್ಕಳೊಳಗೆ ಈ ತರದ ಹುಚ್ಚು ಕಂಡುಬರುತ್ತದೆ. ಸಮೀಪ ಸಂಬಂಧದ ಹೆಣ್ಣು ಮಾಡಿಕೊಂಡವರಲ್ಲೂ ಈ ರೋಗವು ಹುಟ್ಟಿದ ಉದಾಹರಣಗಳುಂಟು.

ಪ್ರಾಯಃ ಮೇಲಿನ ಎರಡು ಉನ್ಮಾದಗಳು ಸಾಧ್ಯ; ಕಷ್ಟಸಾಧ್ಯಗಳಾಗಿರುತ್ತವೆ. ಕಡೆಯ ಎರಡು ಅಸಾಧ್ಯದೊಳಗಿನವೇ. ನಾಲ್ವತ್ತು ಮೀರಿದ ವಯಸ್ಸಿನವರ ಹುಚ್ಚು ಅಸಾಧ್ಯವು. ಆದಾಗ್ಯೂ ಮಾಡುವಷ್ಟು ಉಪಾಯಗಳನ್ನು ಮಾಡಲೇಬೇಕು.

ಸಾಹಸಿಗಳಾದ ಕೆಲ ನೀಚ ಜನರು ತಾವು ಮಾಡಿದ ಇಲ್ಲವೆ ಮಾಡಲೆಣಿಸಿದ ಕೊಲೆ ಮೊದಲಾದ್ದನ್ನು ಹಾರಿಸಿಕೊಳ್ಳುವದಕ್ಕಾಗಿ ಹುಚ್ಚರಂತೆ ನಟಿಸುವದುಂಟು. ಕೆಲ ಹಿಂದುಮುಂದರಿಯದ ಒರಟು ಹೆಂಗಸರೂ ಕೆಲಸದ ಭಾರವನ್ನು ತಪ್ಪಿಸಿಕೊಳ್ಳುವದಕ್ಕೋ ಮನೆತನದಲ್ಲಿ ಒಡಕು ಹುಟ್ಟಿಸುವದಕ್ಕೋ ಉನ್ಮಾದಿನಿಯರಂತೆ ಮಾಡುತ್ತಿರುವದೂ ಕೆಲವೆಡೆ ಕಂಡುಬರುತ್ತಿದೆ. ಆದರೆ ಈ ಕಪಟೋನ್ಮಾದವನ್ನು ಪರೀಕ್ಷಿಸುವದೂ ಹೋಗಲಾಡಿಸುವದೂ ಅಷ್ಟು ಕಠಿಣವಲ್ಲ. ನಿಜವಾದ ಹುಚ್ಚರು ಯಾವಾಗಲೂ ಒಂದೇ ರೀತಿ ಪುಂಡಾಟಿಕೆ ಮಾಡುತ್ತಿರುತ್ತಾರೆ. ಈ ಕಪಟಿಗಳಾದರೋ ಜನರು ನೋಡುತ್ತಿರುವಾಗಷ್ಟೇ ಕುಣಿದಾಡಿ, ಜನರ ಸದ್ದಿಲ್ಲದಾಗ ಸುಮ್ಮನೆ ಕೂತುಬಿಡುತ್ತಾರೆ. ನಿಜವಾದ ಹುಚ್ಚರಿಗೆ ಹುಚ್ಚರೆಂದರೆ ಸಿಟ್ಟು ಬರುತ್ತದೆ; ಇವರಿಗೆ ಹುಚ್ಚರೆನ್ನದಿದ್ದರೆ

ಸಿಟ್ಟು ಬಂದದ್ದು ಕಂಡುಬರುತ್ತದೆ. ತೀಕ್ಷ್ಣವಾದ ಅಂಜನಕ್ಕೂ ವಿದ್ಯುಲ್ಲತೆಯ ಬ್ಯಾಟರಿಗೂ ಇವರು ಹೆದರುತ್ತಾರೆ. ತೀಕ್ಷ್ಣವಾದ ಧೂಪಕ್ಕೂ ಕಹಿಕಹಿ ಔಷಧಕ್ಕೂ ಅಂಜುತ್ತಾರೆ.

**ಉಪಾಯವು :** ಮೊದಲಿನಿಂದ ಪೂರ್ಣ ವಿಚಾರ ಮಾಡಿ ಉನ್ಮಾದದ ಮುಖ್ಯ ಕಾರಣವನ್ನು ದೂರ ಮಾಡಬೇಕು. ನಿದ್ದಿ ಹತ್ತದಿದ್ದರೆ ನಿದ್ದಿ ಹತ್ತುವ ಔಷಧಗಳನ್ನು ಕೊಡಬೇಕು. ಸಾತ್ವಿಕ ಆಹಾರವನ್ನು ಕೊಡುತ್ತಿರಬೇಕು. ಮನಸ್ಸಿಗೆ ಸಮಾಧಾನವಾಗುವಂಥ ಮಾತುಗಳನ್ನಾಡಬೇಕು. ಹೂದೋಟಗಳಲ್ಲಿ ತಿರುಗಾಡುತ್ತಿರಬೇಕು. ರೋಗಿಯು ರೊಚ್ಚಿಗೇಳದಂತೆ ಜಾಗ್ರತೆ ಇಡಬೇಕು. ಅನುಕೂಲತೆ ಇದ್ದವರು ಹವೆ ನೀರುಗಳನ್ನು ಬದಲಾಯಿಸಬೇಕು. ಸಮುದ್ರ ಪ್ರವಾಸ ಮಾಡಿಸಬೇಕು. ರೋಗಿಯು ಆತ್ಮಹತ್ಯೆ ಮಾಡಿಕೊಳ್ಳುವ ವಿಚಾರದಲ್ಲಿದ್ದರೆ ಅಥವಾ ಬೇರೆಯವರ ಖೂನ ಮಾಡುವ ಮನಸ್ಸುಳ್ಳವನಿದ್ದರೆ ಒಳ್ಳೆ ನಿರ್ಬಂಧದಲ್ಲಿಡುವದು ವಿಹಿತವು. ಕೈಕಾಲುಗಳಲ್ಲಿ ಸಂಕೋಲೆಗಳನ್ನು ಹಾಕಿ ಹವೆಯಾಡುವ ಕೋಣೆಯಲ್ಲಿ ಹಾಕಿ ಬಾಗಿಲ ಬಂದು ಮಾಡಿ, ಅವನ ಪ್ರೀತಿಯವರಷ್ಟೇ ಅನ್ನ ನೀರು ಹಾಕುತ್ತಿರಬೇಕು. ಒಮ್ಮಿಂದೊಮ್ಮೆ ಅಂಜಿಕೆ ಹಾಕುವದರಿಂದಲೂ ಉನ್ಮಾದವು ಶಾಂತವಾಗುತ್ತದೆ.

ಒಮ್ಮೆ ಒಬ್ಬ ಬಡ ಪುರಾಣಿಕನಿಗೆ ಶಹಸ್ಥೂರದಲ್ಲಿ ಏಳುನೂರು ರೂಪಾಯಿ ದೊರೆತವು. ಕೂಡಲೇ ಅವನು ಏಳನೂರು ಏಳನೂರು, ಎಂದು ಬಡಬಡಿಸಿ ಹುಚ್ಚನಾದನು ! ಎಲ್ಲರು ಗಾಬರಿಯಾದರು. ಆಗ ಅಲ್ಲಿಯ ಚತುರರಾದ ಬಿಂದಾಚಾರ್ಯ ಕರ್ನಾಟಿಕ ಎಂಬ ವೈದ್ಯರು ನೋಡಿ, ಪೂರ್ವಾಪರ ಸಂಗತಿಗಳನ್ನು ತಿಳಿದುಕೊಂಡು, ಆ ಪುರಾಣಿಕನ ಬಗಲೊಳಗಿನ ಗಂಟು ಕಸಿದುಕೊಂಡು, ಕಪಾಳಕ್ಕೆ ಒಂದು ಏಟು ಬಲವಾಗಿ ಬಡಿದರು; ಮತ್ತು 'ಮೂರ್ಖಾ, ಬಡವನಿಗೆ ನಾಲ್ಕು ಜನರಲ್ಲಿ, ಮರ್ಯಾದೆ ಬರಲಿ ಎಂದು ಹಂದರ ಶೋಭೆಗಾಗಿ ಕೊಟ್ಟ ರೂಪಾಯಿ ನಿನ್ನವೆಂದು ಸೊಕ್ಕಿಗೆ ಬಂದಿಯಾ?' ಎಂದು ಕೇಳಿದರು ! ಕೂಡಲೆ ಆ ಬ್ರಾಹ್ಮಣನು ಗಾಬರಿಯಾದನು, ತತ್‌ಕ್ಷಣವೇ ಹುಚ್ಚು ಇಳಿದುಹೋಯಿತು. ಹಿಂದಿನಿಂದ ಆ ರೂಪಾಯಿಗಳನ್ನು ಅವನ ಕುಟುಂಬದವರಿಗೆ ಮುಟ್ಟಿಸಿಬಿಟ್ಟರು.

ಉನ್ಮಾದವು ಎಳಕಿದ್ದರೆ ಹೀಗೆ ಒಂದೊಂದು ಉಪಾಯದಿಂದ ಶಾಂತವಾಗುವ ಸಂಭವವಿದೆ. ವಾತೋನ್ಮಾದಕ್ಕೆ ತುಪ್ಪ ಮೊದಲಾದ ಸ್ನೇಹಪಾನವೂ, ಪಿತ್ತೋನ್ಮಾದಕ್ಕೆ ವಿರೇಚನ ಔಷಧ ಕೊಡುವದೂ, ಕಫೋನ್ಮಾದಕ್ಕೆ ವಾಂತಿ ಮಾಡಿಸುವದೂ ಹಿತಕರವಾಗಿದೆ.

ಕುತ್ತಿಗೆಯ ಹಿಂಭಾಗಕ್ಕೆ ಕಿವಿಯ ಹತ್ತರ ಒಂದಂಗುಲ ಬಿಟ್ಟು ಕೇರಿನ + ಇಂಥ ಚಿಹ್ನ ಹಾಕಬೇಕು. ಕೇವಲ ಉಷ್ಣ ವಿಕಾರದಿಂದ ತಲೆ ಕೆಟ್ಟಿರುವದೆಂದು ಗೊತ್ತಾದರೆ, ದಿನಾಲು ಹತ್ತಿಪ್ಪತ್ತು ಕೊಡ ತಣ್ಣೀರು ನೆತ್ತಿಯ ಮೇಲೆ ಸುರುವಿದರೆ ಚಿತ್ತನಿಭ್ರಮವು ದೂರಾಗುತ್ತದೆ.

೧. ಸರಸ್ವತೀ ತೊಪ್ಪಲವು ಯಾವತ್ತು ಉನ್ಮಾದಕ್ಕೆ ಹಿತಕರವು. ಸರಸ್ವತೀ ಬಳ್ಳಿಗೆ ನಾಡಿನಲ್ಲಿ ಒಂದೆಲಗೆಂದೂ ಅನ್ನುತ್ತಾರೆ. ಇದರ[೧] ಅಪರಸ ೧ ತೊಲಿ, ಬಜೇ ಪುಡಿ ೧/೨ ತೊಲಿ ಕೂಡಿಸಿ ದಿನಾಲು ಕೊಟ್ಟರೆ ಉನ್ಮಾದವು ಕಡಿಮೆಯಾಗುತ್ತದೆ. ಇದೇ ರಸವನ್ನು ೪ ಹನಿ ಮೂಗಿನಲ್ಲಿ ಹಾಕಬೇಕು; ಕಣ್ಣಿಗೂ ಹಚ್ಚಬೇಕು.

೨. ಬಜಿ, ಕೋಷ್ಠ, ಕೊಳಿಂಜನ, ಬಿಳಿ ಪಿಷ್ಣುಕ್ರಾಂತಿ, ನಾಗಕೇಸರ ಇವುಗಳ ಸಮಭಾಗ ಚೂರ್ಣ ಮಾಡಿಟ್ಟು, ಒಂದೆಲಗಿನ ೧ ತೊಲಿ ರಸದಲ್ಲಿ ೧/೨ ತೊಲಿ ಹಾಕಿ ಕುಡಿಸಿದರೆ ಉನ್ಮಾದ, ಅಪಸ್ಮಾರ, ಭೂತೋನ್ಮಾದ ಮುಂತಾದ ಮೆದುಳಿನ ರೋಗಗಳೆಲ್ಲ ನಾಶವಾಗುತ್ತವೆ. ಇದೇ ಔಷಧವನ್ನು ನಸ್ಯಕ್ಕೂ ಅಂಜನಕ್ಕೂ ಉಪಯೋಗಿಸಬಹುದು.

೩. ಶುಂಠಿ, ಮೆಣಸು, ಹಿಪ್ಪಲಿ, ಮರದರಿಷಿಣ, ಮಂಜಿಷ್ಠ, ಸಾಸಿವೆ, ಬಿಳೀ ಸಾಸಿವೆ ಇವುಗಳನ್ನು ನೀರಿನಲ್ಲಿ ನೆನಿಯಿಟ್ಟು ಸಣ್ಣಾಗಿ ಅರೆದು, ಮಾತ್ರೆಯಂತೆ ಬೇಕಾದಷ್ಟು ಆಳತಿಯ ಗುಳಿಗೆ ಮಾಡಿ ಒಣಗಿಸಿ ಇಡಬೇಕು. ಇದನ್ನು ನೀರೊಳಗೆ ತೆಯ್ದು ಅಂಜನಕ್ಕೂ ನಸ್ಯಕ್ಕೂ ಉಪಯೋಗಿಸಿದರೆ ಉನ್ಮಾದ, ಭೂತಗ್ರಹ, ಅಪಸ್ಮಾರ ಮೊದಲಾದ ರೋಗಗಳು ಶಾಂತವಾಗುವವು.

೪. ಬಿಳೀಸಾಸಿವೆ, ಬಜಿ, ಇಂಗು, ಹುಲಗಲತೋಟಿ, ದೇವದ್ವಾರ, ಮಂಜಿಷ್ಠ, ತ್ರಿಫಲಾ, ಬಿಳೀಗೋಕರ್ಣೀಬೇರು, ದಾಲಚಿನ್ನಿ, ಶುಂಠಿ, ಮೆಣಸು, ಹಿಪ್ಪಲಿ, ತೊಟ್ಟಲ ಬೇರು, ಶಿರಸಲತಾಟಿ, ಮರದರಿಷಿಣ ಇವುಗಳನ್ನೆಲ್ಲ ಆಡಿನ ಉಚ್ಚೆಯಲ್ಲಿ ಅರೆದು ಕಡಲೇಕಾಳಷ್ಟು ಗುಳಿಗೆಗಳನ್ನು ಮಾಡಬೇಕು. ದಿನಾಲು ೩ ಗುಳಿಗೆಗಳಂತೆ ಸೇವಿಸಬೇಕು. ಇದನ್ನೇ ಅಂಜನಕ್ಕೂ, ನಸ್ಯಕ್ಕೂ, ಮೈಗೆ ತೊಡಿಸುವದಕ್ಕೂ, ಸ್ನಾನದ ವೇಳೆಯಲ್ಲಿ ಸೀಗೇಕಾಯಿಯಂತೆ ಹಚ್ಚುವದಕ್ಕೂ, ಉಪಯೋಗಿಸಿದರೆ ಉನ್ಮಾದಾದಿ ರೋಗಗಳು ಹೋಗುವವು.

೫. ಸಾಸಿವೆ ಎಣ್ಣೆಯನ್ನು ನಸ್ಯಕ್ಕೂ, ಅಂಜನಕ್ಕೂ, ಮೈಗೆ ಹಚ್ಚುವದಕ್ಕೂ ಉಪಯೋಗಿಸಬೇಕು.

---

೧. ನಸ್ಯೇಂಜನೇಪಾನವಿಧೌ ಚ ಶಸ್ತೋ ಬ್ರಾಹ್ಮೀರಸೋಽಯಂ ಸವಚಾದಿಚೂರ್ಣಃ

— ಯೋಗರತ್ನಾಕರ

೧. ಸಿದ್ಧಾರ್ಥಕವಚಾಹಿಂಗು ಕರಂಜೋ ದೇವದಾರು ಚ ।
ಮಂಜಿಷ್ಠಾ ತ್ರಿಫಲಾ ಶ್ವೇತಾಕಟಭೀತ್ವಕ್ಕಟುತ್ರಯಮ್ ॥
ಸಮಾಂಶಾನಿ ಪ್ರಿಯಂಗುಶ್ಚ ಶಿರೀಷೋರಜನೀದ್ವಯಮ್ ।
ಬಸ್ತಮೂತ್ರೇಣ ಪಿಷ್ಟೋಽಯಮಗದಃ ಪಾನಮಂಜನಮ್ ॥
ನಸ್ಯಮಾಲೇಪನಂ ಚೈವ ಸ್ನಾನಮುದ್ವರ್ತನಂ ತಥಾ ।
ಅಪಸ್ಮಾರ ವಿಷೋನ್ಮಾದ ಕೃತ್ಯಾಽಲಕ್ಷ್ಮೀಜ್ವರಾಪಹಃ ॥

— ಚಿಕಿತ್ಸಾಸಾಗರ

**೬.** ೧ ಇಪ್ಪೀಕೆಚ್ಚು, ಹಿಪ್ಪಲಿ, ಬಜಿ, ಮೆಣಸು, ಸೈಂದವಲವಣ ಉಗುರು ಬೆಚ್ಚಗಿನ ನೀರಲ್ಲಿ ತೆಯ್ದು ಮೂಗಿನಲ್ಲಿ ದಿನಾಲು ನಾಲ್ಕು ಹನಿ ಹಾಕಿದರೆ ಎಚ್ಚರ ಬರುವದು. ಅಪಸ್ಮಾರ ಸನ್ನಿಪಾತಾದಿಗಳಲ್ಲಿಯೂ ಇದು ಹಿತಕರವು.೧

**ಪಥ್ಯ :** ಹಳೆಬತ್ತದ ಅಕ್ಕಿ, ತೊಗರಿ, ಹೆಸರು, ಮಡಿಕೇಬೇಳೆ, ಗೋಧಿ, ಜೋಳಗಳ ರೊಟ್ಟಿ, ನೊರೆಹಾಲು, ತುಪ್ಪ, ಸಕ್ಕರಿ, ಕಿರಕಸಾಲಿ, ಪಡುವಲಕಾಯಿ, ಚಲೋ ಹಣ್ಣುಗಳು, ಹಸೀಕೊಬ್ಬರಿ, ಮಳೆಯ ಹಾಗು ಬಾವಿಯ ನೀರು.

**ಅಪಥ್ಯ :** ಉಷ್ಣಪದಾರ್ಥ, ತಂಗುಳನ್ನ, ಕಹಿಯಾದ ಹಾಗಲಕಾಯಂಥ ಪಲ್ಲೇಕಾಯಿ, ಮಲಮೂತ್ರ ನಿದ್ದೆ ತರಬುವದು, ಮದ್ಯ, ಅತ್ಯಾಯಾಸ, ಕಾಮೋನ್ಮಾದ ವಿದ್ದರೆ ಮಾತ್ರ ನಿರೋಗಿ ಸ್ತ್ರೀ ಸಂಪರ್ಕ, ಮಿಕ್ಕಾದ್ದಕ್ಕೆ ವರ್ಜ್ಯ.

—

# ಉದಾವರ್ತ

ಶರೀರವ್ಯಾಪಾರಗಳು ತಕ್ಕವೇಳೆಗೆ ಆಗದಿದ್ದರೆ, ತರತರದ ಉಪದ್ರವವಾಗಿ ಮನಸ್ಸು ವ್ಯಾಕುಲವಾಗುತ್ತದೆ. ದೇಹದೊಳಗಿನ ದೋಷಗಳು ಮೇಲೆ ತಿರುಗುತ್ತಿರುವದರಿಂದ ಇದಕ್ಕೆ ಆರ್ಯವೈದ್ಯರು ಉದಾವರ್ತವೆಂದಿದ್ದಾರೆ. ಇದರಲ್ಲಿ ಬಹಳ ಪ್ರಕಾರಗಳುಂಟು. ಅವುಗಳ ಲಕ್ಷಣಗಳನ್ನೂ ಉಪಚಾರಗಳನ್ನೂ ಕ್ರಮದಿಂದ ಹೇಳುತ್ತೇವೆ —

**೧. ಅಪಾನವಾಯು ನಿರೋಧಜನ್ಯ :** ಹೊಟ್ಟೆಯುಬ್ಬಿದಂತಾಗಿ ನೋಯುತ್ತದೆ. ತುಪ್ಪದಲ್ಲಿ ತುಸು ಸೈಂಧವಲವಣವನ್ನೂ ೧-೨ ಗುಂಜಿ ಇಂಗಿನ ಪುಡಿಯನ್ನೂ ಹಾಕಿ ಕುಡಿಯಬೇಕು. ಉಗೆ ತೆಗೆದುಕೊಳ್ಳಬೇಕು. ಎಣ್ಣೆ ಹಚ್ಚಿ ತಿಕ್ಕಿಸಿ ಬಿಸಿನೀರಿನಿಂದ ಸ್ನಾನ ಮಾಡಬೇಕು.

**೨. ಮಲನಿರೋಧ :** ಹೊಟ್ಟೆಯಲ್ಲಿ ಗುಡುಗುಡು ಸಪ್ಪಳಾಗುವದು, ಆಸನದಲ್ಲಿ ಶೂಲಿ, ಮಲವು ಹಿಕ್ಕಿಗಟ್ಟುವದು, ಮಲಶುದ್ಧಿಯಾಗದಿರುವದು, ಹೊಟ್ಟೆಯೊಳಗೆ ಮಳಮಳಿಸುವದು, ತೇಗು, ದುರ್ಗಂಧವಾಂತಿ.

ಅಭ್ಯಂಗಸ್ನಾನ, ಸೌಮ್ಯವಾದ ವಿರೇಚನ ೧/೪ ತೊಲಿ, ತ್ರಿಫಲಾಚೂರ್ಣ ೧/೩ ತೊಲಿ, ಕಲ್ಲುಸಕ್ಕರೆ ಪುಡಿ ತಕ್ಕೊಂಡು ಮೇಲೆ ಬಿಸಿ ಹಾಲು ಒಂದು ಕಚ್ಚಾಶೇರು ಕುಡಿಯಬೇಕು.

**೩. ಮೂತ್ರನಿರೋಧ :** ಮೈ ನೋವಾಗುವದು, ಲಿಂಗದಲ್ಲಿ ಶೂಲಿ, ತಲೆಶೂಲಿ, ಉರಿಮೂತ್ರ, ಅಸ್ವಸ್ಥತೆ.

---

೧. ಮಧೂಕಸಾರಕೃಷ್ಣಾಭ್ಯಾಂ ವಚಾಮಾರಿಚ ಸೈಂಧವೈಃ ||
ನಸ್ಯಂ ಕೋಷ್ಣಜಲೇ ಪಿಷ್ಟಂ ದದ್ಯಾತ್ಸಂಜ್ಞಾಪ್ರಬೋಧನಮ್ ||
ಅಪಸ್ಮಾರೇ ತಥೋನ್ಮಾದೇ ಸನ್ನಿಪಾತೇಽಪತಂತ್ರಕೇ ||

— ಶಾರ್ಙ್ಗಧರ

ದ್ವೀಪದ್ರಾಕ್ಷಿ ೧/೩ ತೊಲಿ, ನೆಗ್ಗಿನಮುಳ್ಳು ೧/೩ ತೊಲಿ ಜಜ್ಜಿ ಕಲಾಯದ ಪಾತ್ರೆಯಲ್ಲಿ ಚಹಾ ಮಾಡಿ ತೆಗೆದುಕೊಳ್ಳಬೇಕು.

**೪. ಜೃಂಭಾನಿರೋಧ :** ಆಕಳಿಕೆ ತಡೆದಿದ್ದರೆ, ಕುತ್ತಿಗೆಸಿರಗಳು ಬಿಗಿಯುತ್ತವೆ. ಕಣ್ಣು ಕಿವಿ ಮೂಗುಗಳು ನೋವಾಗುತ್ತವೆ; ಬಿಕ್ಕು ಬರುವದುಂಟು.

ಊರಹೊನ್ನವರಿಯ ಸೊಪ್ಪನ್ನು, ತೊಗರೀ ಬೇಳಿಯನ್ನು, ಹಾಕಿ ಮಾಡಿದ ಬಿಸಿಬಿಸೀ ಸಾರು ಕುಡಿಯಬೇಕು. ಸಣ್ಣಹಿಪ್ಪಲಿ ೧/೮ ತೊಲಿ, ಶುಂಠಿ ೧/೮ ತೊಲಿ, ನೆಲ್ಲೀಚಟ್ಟು ೧/೪ ತೊಲಿ ಕಷಾಯಮಾಡಿ, ೧/೩ ತೊಲಿ ಕಲ್ಲುಸಕ್ಕರೆಪೆರಸಿ ಕುಡಿಯುವದು.

**೫. ಅಶ್ರುನಿರೋಧ :** ಸಂತೋಷ ಅಥವಾ ದುಃಖದ ಪ್ರಸಂಗದಲ್ಲಿ ಬರುವ ಕಣ್ಣೀರು ತಡೆದರೆ, ನೆಗಡಿಯೂ ಕಣ್ಣುಬೇನೆಯೂ ಹುಟ್ಟುತ್ತವೆ.

ಪಚ್ಚಕರ್ಪೂರಪುಡಿ, ಮೆಣಸಿನಪುಡಿ ಕೂಡಿಸಿ ಕಣ್ಣಿಗೆ ಹಚ್ಚಿಕೊಂಡು ಕಣ್ಣೀರು ಹೋಗುವಂತೆ ಮಾಡಬೇಕು. ಮಲಗಿಕೊಳ್ಳಬೇಕು.

**೬. ಕ್ಷವಥುನಿರೋಧ :** ಶೀನು ಬರುವದನ್ನು ತಡೆದರೆ, ಅರತಲೆಶೂಲಿ ಮೊದಲಾದ ವಿಕಾರಗಳಾಗುತ್ತವೆ.

ಕುತ್ತಿಗೆಯ ಹಿಂಬದಿಯಲ್ಲಿ ಎಣ್ಣೆ ಹಚ್ಚಿ ತಿಕ್ಕಬೇಕು. ನಾಗಚಿಕಣಿ ಮೊದಲಾದ್ದನ್ನು ಮೂಸಿನೋಡಿ ಸೀನು ಬರುವಂತೆ ಮಾಡಬೇಕು.

**೭. ಉದ್ಗಾರನಿರೋಧ :** ತೇಗು ಬರುವದನ್ನು ತಡೆದರೆ, ಎದೆಯಲ್ಲಿ ಸಿಕ್ಕಂತಾಗುತ್ತದೆ; ಮಾತಾಡಲಿಕ್ಕೆ ತೊಂದರೆಯಾಗುತ್ತದೆ; ಬಿಕ್ಕು ಹತ್ತುವದುಂಟು.

ಶುಂಠೀಪುಡಿ ೧/೮ ತೊಲಿ, ಸೈಂಧವಲವಣ ೧/೮ ತೊಲಿ ಹಾಕಿ ೫ ತೊಲಿ ತುಪ್ಪವನ್ನು ಕುಡಿಯಬೇಕು. ಧೂಪದ ಇಲ್ಲವೆ ದಶಾಂಗದ ಹೊಗೆ ತೆಗೆದುಕೊಳ್ಳಬೇಕು.

## ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

### ೧೫ ಪುಷ್ಪಗಳ ಪ್ರಕಟಣೆ

| | | | |
|---|---|---|---|
| ೧ | ಪಂಡಿತರಾಜ ಜಗನ್ನಾಥ | ... | ೫-೦೦ |
| ೨ | ಕನ್ನಡಿಗರ ಜನ್ಮಸಾರ್ಥಕತೆ | ... | ೫-೦೦ |
| ೩ | ಕರ್ನಾಟಕ ನರಕಾಸುರ ವಿಜಯಃ ವ್ಯಾಯೋಗಂ | ... | ೪-೦೦ |
| ೪ | ಕರ್ನಾಟಕ ಕಥಾಸರಿತ್ಸಾಗರ | ... | ೬-೦೦ |
| ೫ | ಶೌರ್ಯಸಾಗರ | ... | ೬-೦೦ |
| ೬ | ಕನ್ನಡಮಾತು ತಲೆಯೆತ್ತುವ ಬಗೆ | ... | ೩-೦೦ |
| ೭ | ಕಾಲಿದಾಸ ಚರಿತ್ರ | ... | ೬-೦೦ |
| ೮ | ಕರ್ನಾಟಕ ಯಯಾತಿ ನಾಟಕಂ | ... | ೮-೦೦ |
| ೯ | ಮೋಹಿನೀ ಅಥವಾ ನಿಂದಕರ ನಡವಳಿ | ... | ೧೦-೦೦ |
| ೧೦ | ಭಾರತೀಯ ವಿದುಷಿಯರು | ... | ೮-೦೦ |
| ೧೧ | ಶ್ರೇಯಃಸಾಧನ | ... | ೮-೦೦ |
| ೧೨ | ಗೃಹವೈದ್ಯಕವು | ... | ೮-೦೦ |
| ೧೩ | ಇಸೋಪನ ಚರಿತ್ರ | ... | ೩-೦೦ |
| ೧೪ | ವಿದ್ಯಾರಣ್ಯ ಸ್ವಾಮಿಗಳು | ... | ೧೦-೦೦ |
| ೧೫ | ನರಗುಂದದ ಬಂಡಾಯ | ... | ೧೦-೦೦ |

